● ಬೆಂಗಳೂರು ನಗರ, ಬೆಂ.ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮೈಸೂರು, ಮಂಡ್ಯ, ತುಮಕೂರು ● ಇ-ಮೇಲ್: sanjeexpress@gmail.com ● Evening Kannada Daily ● http://epaper.sanjeexpress.com

# ಸಂಜೆ ಎಕ್ಸ್‌ಪ್ರೆಸ್


ನೈಜ ಮತ್ತು ಸಮಗ್ರ ಸುದ್ದಿ ಚಿತ್ರಣ

ಪ್ರಾದೇಶಿಕ ದಿನಪತ್ರಿಕೆ

● ಪ್ರಧಾನ ಸಂಪಾದಕರು: ಚಂದ್ರಶೇಖರ್ ಜಿ. ಗೌಡ
ಮೊ: 99020 32228

ಸಂಪುಟ-14 Volume-14 ಸಂಚಿಕೆ-324 Issue-324 ಶುಕ್ರವಾರ 08-05-2026 RNI No.KARKAN/2012/44527, ಪುಟ-1 Page-1 Rs.2.00 ರೂ. 2.00

## ಅಂಜನಾದ್ರಿಯ ಆಂಜನೇಯನಿಗೆ 2.5 ಕೋಟಿ ಮೌಲ್ಯದ ಆಭರಣ ದೇಣಿಗೆ ನೀಡಿದ ಉದ್ಯಮಿ



**ಕೊಪ್ಪಳ:** ಇಲ್ಲಿನ ಗಂಗಾವತಿ ತಾಲೂಕಿನಲ್ಲಿರುವ ಅಂಜನಾದ್ರಿಯ ಆಂಜನೇಯನಿಗೆ ಉದ್ಯಮಿಯೊಬ್ಬರು 2.5 ಕೋಟಿ ರೂ. ಮೌಲ್ಯದ ಆಭರಣವನ್ನು ದೇಣಿಗೆ ನೀಡಿದ್ದಾರೆ.

ಎಎಂಆರ್ ಕನ್‌ಸ್ಟ್ರಕ್ಷನ್ ಕಂಪನಿಯ ಮಾಲೀಕ ಹಾಗೂ ಶಾಸಕ ಜನಾರ್ದನ ರೆಡ್ಡಿ ಸ್ನೇಹಿತ ಮಹೇಶ ರೆಡ್ಡಿಯವರು ಅಂಜನಾದ್ರಿಯ ಆಂಜನೇಯನಿಗೆ 2.5 ಕೋಟಿ ರೂ. ಮೌಲ್ಯದ ಆಭರಣವನ್ನು ದೇಣಿಗೆ ನೀಡಿದ್ದಾರೆ.

ಗಂಗಾವತಿ ತಾಲೂಕಿನಲ್ಲಿರುವ ಅಂಜನಾದ್ರಿ ಬೆಟ್ಟ ಆಂಜನೇಯನ ಜನ್ಮಸ್ಥಳ. ಉದ್ಯಮಿ ಮಹೇಶ ಅವರು ದಂಪತಿ ಸಮೇತ ಅಂಜನಾದ್ರಿಗೆ ಆಗಮಿಸಿ, ಆಂಜನೇಯನಿಗೆ ಸಂಕಲ್ಪ ಪೂಜೆ, ಸುಪ್ರಭಾತ ಸೇವೆ ಸಲ್ಲಿಸಿದ್ದಾರೆ. ಪೂಜೆಯಲ್ಲಿ ಶಾಸಕ ಜನಾರ್ದನ ರೆಡ್ಡಿ ದಂಪತಿ ಹಾಗೂ ಮಹೇಶ ರೆಡ್ಡಿ ದಂಪತಿ ಭಾಗಿಯಾಗಿದ್ದರು.

ಪೂಜೆ ಬಳಿಕ 2.5 ಕೋಟಿ ರೂ. ಮೌಲ್ಯದ ಚಿನ್ನದ ಪ್ರಭಾವಳಿ, ಚಕ್ರ, ಕಿರೀಟ ಮತ್ತು ಗದೆಯನ್ನು ದೇಣಿಗೆ ರೂಪದಲ್ಲಿ ಗಂಗಾವತಿ ತಾಲೂಕು ಆಡಳಿತಕ್ಕೆ ಹಸ್ತಾಂತರ ಮಾಡಿದ್ದಾರೆ.

ಈ ಮೂಲಕ ಅಂಜನಾದ್ರಿ ದೇವಸ್ಥಾನಕ್ಕೆ ಮೊದಲ ಬಾರಿಗೆ ದೊಡ್ಡ ಮೊತ್ತದ ಬಂಗಾರ ದೇಣಿಗೆಯಾಗಿ ಬಂದಿದೆ.

## ಕೋಲ್ಕತ್ತಾಗೆ ಇಂದು ಅಮಿತ್ ಶಾ ಭೇಟಿ
### ಬಂಗಾಳ ನೂತನ ಸಿಎಂ ಹೆಸರು ಇಂದೇ ಘೋಷಣೆ?



**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಸಂಘರ್ಷಗಳು ಹೆಚ್ಚುತ್ತಿವೆ. ಬುಧವಾರ ರಾತ್ರಿ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ಆಪ್ತ ಸಹಾಯಕ ಚಂದ್ರನಾಥ್ ರಾತ್‌ರನ್ನ ಟಾರ್ಗೆಟ್ ಮಾಡಿ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಇದರ ಬೆನ್ನಲೆ ಬಿಜೆಪಿಯ ಮತ್ತೊಬ್ಬ ನಾಯಕ ಕೂದಲೆಳೆಯಲ್ಲಿ ಪಾರಾಗಿದ್ದು ಇದು ಬಂಗಾಳದಲ್ಲಿ ಉದ್ವಿಘ್ನತೆ ಹೆಚ್ಚುವಂತೆ ಮಾಡಿದೆ. ಈ ನಡುವೆ ಮಮತಾ ಸರ್ಕಾರವನ್ನ ವಜಾ ಮಾಡಿದ್ದು ಹೊಸ ಸರ್ಕಾರ ರಚನೆಗೆ ಇಂದು ಮಹತ್ವದ ಸಭೆ ನಡೆಯಲಿದೆ.

ಬುಧವಾರ ರಾತ್ರಿ ಮುಖ್ಯಮಂತ್ರಿ ರೇಸ್‌ನಲ್ಲಿರುವ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಆಪ್ತ ಸಹಾಯಕ ಚಂದ್ರನಾಥ್ ಹತ್ಯೆ ಮಾಡಲಾಗಿತ್ತು. ಇದರ ಬೆನ್ನಲ್ಲೇ ಬಿಜೆಪಿಯ ಮತ್ತೊಬ್ಬ ನಾಯಕ ಟಾರ್ಗೆಟ್ ಆಗಿದ್ದು, ಕೂದಳೆಯ ಅಂತರದಲ್ಲಿ ಪಾರಾಗಿದ್ದಾರೆ.

ಬಿಜೆಪಿ ಅಲ್ಪಸಂಖ್ಯಾತ ವಿಭಾಗದ ನಾಯಕ ಮನೋಜ್ ಖಾನ್ ಮೇಲೆ ಕಚ್ಚಾ ಬಾಂಬ್ ದಾಳಿಗೆ ಯತ್ನಿಸಲಾಗಿದೆ. ಕೋಲ್ಕತ್ತಾ ಹತ್ತಿರ ಹೌರಾದ ಶಿಬ್‌ಪುರ ಕೊಳೆಗೇರಿಗಳಲ್ಲಿ ಉದ್ವಿಗ್ನತೆ ಕಚ್ಚಾ ಬಾಂಬ್ ಸ್ಫೋಟವಾಗಿದೆ. ಮನೋಜ್ ಖಾನ್ ಇದ್ದ ಪ್ರದೇಶದ ಬಳಿ ಕೆಲವು ದುಷ್ಕರ್ಮಿಗಳು ಅಂಗಡಿಗಳನ್ನ ಧ್ವಂಸಗೊಳಿಸಲು ಪ್ರಯತ್ನಿಸಿದ್ದಾರೆ. ಹಿಂಸಾತ್ಮಕ ಘರ್ಷಣೆಯಲ್ಲಿ ಹಲವು ಜನರು ಗಾಯಗೊಂಡಿದ್ದಾರೆ.

ಘಟನೆಯಲ್ಲಿ ಬಿಜೆಪಿ ಅಲ್ಪಸಂಖ್ಯಾತ ವಿಭಾಗದ ನಾಯಕ ಮನೋಜ್ ಖಾನ್‌ಗೆ ಯಾವುದೇ ಹಾನಿಯಾಗಿಲ್ಲ.

ಆದರೆ ಬಿಜೆಪಿ ನಾಯಕರು ಗುರಿಯಾಗುತ್ತಿರುವುದು ತೀವ್ರ ಆತಂಕಕ್ಕೆ ಕಾರಣವಾಗಿದೆ. ಸೋಲಿನ ಬಳಿಕ ಟಿಎಂಸಿ ರಕ್ತ ರಾಜಕೀಯ ಮಾಡುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

## ಮುಂದಿನ 3 ದಿನ ರಾಜ್ಯದ ಹಲವೆಡೆ ಗುಡುಗು ಸಹಿತ ಭಾರಿ ಮಳೆ ಸಾಧ್ಯತೆ



**ಬೆಂಗಳೂರು:** ಮುಂದಿನ 3 ದಿನ ರಾಜ್ಯದ ಹಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನಗಳ ಕಾಲ ಗುಡುಗು ಸಹಿತ ಮಳೆಯಾಗಲಿದ್ದು, ಉತ್ತರ ಒಳನಾಡಿನಲ್ಲಿ ಗರಿಷ್ಠ ತಾಪಮಾನ ಮುಂದುವರಿಯಲಿದೆ. ಬೆಂಗಳೂರಿನಲ್ಲೂ ಮಳೆಯಾಗುವ ಸಾಧ್ಯತೆಯಿದ್ದು, ತಾಪಮಾನದಲ್ಲಿ ಅಲ್ಪ ಇಳಿಕೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದೆ.

ಹವಾಮಾನ ಇಲಾಖೆಯ ವರದಿಯ ಪ್ರಕಾರ, ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಮೇ 8 ಮತ್ತು 9ರಂದು ಗುಡುಗು ಸಹಿತ ಮಳೆಯಾಗಲಿದೆ ಹಾಗೂ ಉತ್ತರ ಒಳನಾಡಿನ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮೇ 8ರಂದು ಭಾರಿ ಮಳೆಯ ಮುನ್ನೆಚ್ಚರಿಕೆ ನೀಡಲಾಗಿದೆ.

# ಭಾರತದಲ್ಲಿ ವಿಧ್ವಂಸಕ ದಾಳಿಗೆ ಪಾಕ್‌ನ ಐಎಸ್‌ಐ ಪ್ಲ್ಯಾನ್

## ದೆಹಲಿಯ ಐತಿಹಾಸಿಕ ದೇವಾಲಯ ಪ್ರಮುಖ ಟಾರ್ಗೆಟ್

**ನವದೆಹಲಿ:** ಪ್ರಮುಖ ಕಾರ್ಯಾಚರಣೆಯೊಂದರಲ್ಲಿ ದೇಶದ ವಿವಿಧೆಡೆ ಭಯೋತ್ಪಾದಕ ದಾಳಿಗಳನ್ನು ನಡೆಸಲು ಪಾಕ್‌ನ ಐಎಸ್‌ಐ ಯೋಜಿಸಿದ್ದ ಸಂಚನ್ನು ದೆಹಲಿ ಪೊಲೀಸ್ ವಿಶೇಷ ಘಟಕ ಬಯಲಿಗೆಳೆದಿದೆ. ಬಂಧಿತ ಆರೋಪಿ ವಿಚಾರಣೆ ಸಮಯದಲ್ಲಿ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಶಹಜಾದ್ ಭಟ್ಟಿ ಮಾಡ್ಯೂಲ್‌ಗೆ ಸಂಬಂಧಿಸಿದ ಪ್ರಮುಖ ಭಯೋತ್ಪಾದಕ ಪಿತೂರಿ ಬಹಿರಂಗವಾಗಿದೆ ಎಂದು ತಿಳಿದುಬಂದಿದೆ.

ಪಾಕ್ ಬೆಂಬಲಿತ ಮ್ಯಾಡ್ಯೂಲ್‌ನ ಪ್ರಮುಖ ಗುರಿಗಳಲ್ಲಿ ದೆಹಲಿಯಲ್ಲಿರೋ ಐತಿಹಾಸಿಕ ದೇವಾಲಯವು ಸೇರಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಮೂಲಗಳ ಪ್ರಕಾರ, ಬಂಧಿತ ಆರೋಪಿಗಳಲ್ಲಿ ಒಬ್ಬ ದಾಳಿ ನಡೆಸಲು ಪ್ಲ್ಯಾನ್ ರೂಪಿಸುವುದಕ್ಕೆ ಮುನ್ನ ದೆಹಲಿಯ ದೇವಾಲಯಕ್ಕೆ ಹಾಗೂ



ಹಿಸಾರ್‌ನಲ್ಲಿರುವ ಮಿಲಿಟರಿ ಕ್ಯಾಂಪ್‌ಗೆ ಭೇಟಿ ನೀಡಿದ್ದ. ಸಂಪೂರ್ಣ ಸ್ಥಳ ವೀಕ್ಷಣೆ ನಡೆಸಿ, ಪಾಕ್ ಮೂಲದ ಸೋಷಿಯಲ್ ಮೀಡಿಯಾ ಹ್ಯಾಂಡ್ಲರ್‌ಗೆ ಫೋಟೋಗಳನ್ನೂ ಕಳುಹಿಸಿದ್ದ. ದೇವಸ್ಥಾನದ ಮೇಲೆ ದಾಳಿ ನಡೆಸುವುದಕ್ಕೆ ಮುನ್ನ ಮೊದಲು ಪೊಲೀಸರು ಮತ್ತು ಅರೆಸೇನಾ ಸಿಬ್ಬಂದಿ ಮೇಲೆ ಗುಂಡು ಹಾರಿಸುವುದು ಕೂಡ ಉಗ್ರರ ಪ್ಲ್ಯಾನ್‌ನಲ್ಲಿತ್ತು ಎಂದು ಹೇಳಲಾಗಿದೆ.



**ಟಾರ್ಗೆಟ್ ಲಿಸ್ಟ್‌ನಲ್ಲಿ ಹರಿಯಾಣದ ಪ್ರಸಿದ್ಧ ಡಾಬಾ:** ದೆಹಲಿ ಟೆಂಪಲ್ ಮಾತ್ರವಲ್ಲದೇ, ದೆಹಲಿ-ಸೋನಿಪತ್ ಹೆದ್ದಾರಿಯಲ್ಲಿರುವ ಹರಿಯಾಣದ ಜನಪ್ರಿಯ ಡಾಬಾ ಕೂಡ ಉಗ್ರರ ಟಾರ್ಗೆಟ್ ಲಿಸ್ಟ್‌ನಲ್ಲಿತ್ತು.
ಪ್ರತಿದಿನ ಸಾವಿರಾರು ಜನ ಈ ಡಾಬಾಗೆಗೆ ಭೇಟಿ ನೀಡುತ್ತಾರೆ. ಹಾಗಾಗಿ ಹ್ಯಾಂಡ್ ಗ್ರೆನೇಡ್ ಬಳಸಿ ದಾಳಿ ನಡೆಸಿ, ಕನಿಷ್ಠ ನೂರಾರು ಜನರನ್ನು ಕೊಲ್ಲಬೇಕೆಂಬುದು ಈ ದಾಳಿಯ ಉದ್ದೇಶವಾಗಿತ್ತು.

ಅಷ್ಟೇ ಅಲ್ಲ, ಹಿಸ್ಸಾರ್‌ನಲ್ಲಿರುವ ಮಿಲಿಟರಿ ಕ್ಯಾಂಪ್ ಮೇಲೆ ದಾಳಿ ನಡೆಸುವುದು ಮತ್ತು ಉತ್ತರ ಪ್ರದೇಶದ ವಿವಿಧ ಪೊಲೀಸ್ ಠಾಣೆಗಳಲ್ಲಿರುವ ಕೆಲ ಅಧಿಕಾರಿಗಳನ್ನ ಹತ್ಯೆಗೈಯುವುದು ಉಗ್ರರ ಸಂಚಾಗಿತ್ತು ಅನ್ನೋದು ಬೆಳಕಿಗೆ ಬಂದಿದೆ.

**ಪ್ರಕರಣ ಬೆಳಕಿಗೆ ಬಂದಿದ್ದು ಹೇಗೆ?:** ದೆಹಲಿ ಪೊಲೀಸ್ ವಿಶೇಷ ಘಟಕವು, ಕೇಂದ್ರದ ತನಿಖಾ ಸಂಸ್ಥೆಗಳೊಂದಿಗೆ ದೆಹಲಿ ಮತ್ತು ಇತರ ಹಲವಾರು ರಾಜ್ಯಗಳಲ್ಲಿ ಶಹಜಾದ್ ಭಟ್ಟಿ ಮಾಡ್ಯೂಲ್‌ಗೆ ಸಂಬಂಧಿಸಿದ 9 ಆರೋಪಿಗಳನ್ನ ಬಂಧಿಸಿತ್ತು. ಕಾರ್ಯಾಚರಣೆಯ ಸಮಯದಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಅಪರಾಧ ಸಾಮಗ್ರಿಗಳನ್ನ ವಶಪಡಿಸಿಕೊಳ್ಳಲಾಗಿತ್ತು. ನಂತರ ಆರೋಪಿಗಳ ವಿಚಾರಣೆ ನಡೆಸುವ ಸಮಯದಲ್ಲಿ ಭಯೋತ್ಪಾದಕ ಸಂಚು ಬಯಲಾಗಿದೆ.

## ಬೆಂಗಳೂರಿನಲ್ಲಿ ಹಿಟ್ ಅಂಡ್ ರನ್‌ಗೆ ವ್ಯಕ್ತಿ ಬಲಿ

**ಬೆಂಗಳೂರು:** ಇತ್ತೀಚಿನ ದಿನಗಳಲ್ಲಿ ಸಿಲಿಕಾನ್ ಸಿಟಿಯಲ್ಲಿ ಹಿಟ್ & ರನ್ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿವೆ. ಪ್ರತಿ ಬಾರಿಯೂ ಸಾವು-ನೋವು ಸಂಭವಿಸುತ್ತಿದೆ. ಇದೇ ರೀತಿಯ ಘಟನೆ ಈಗ ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗೆ ವೇಗವಾಗಿ ಬಂದ ವಾಹನ ಗುದ್ದಿ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಇಂದು (ಶುಕ್ರವಾರ) ಮುಂಜಾನೆ ನಡೆದಿದೆ.

ವಾಹನ ಗುದ್ದಿದ ರಭಸಕ್ಕೆ ವ್ಯಕ್ತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಶ್ರೀನಿವಾಸ್ ಮೃತ ದುರ್ದೈವಿ. ಅಪಘಾತ ನಡೆದ ಬಳಿಕ ವಾಹನ ಸವಾರನೂ ಎಸ್ಕೇಪ್ ಆಗಿದ್ದಾನೆ.

ಈ ಸಂಬಂಧ ಬಿಎನ್‌ಎಸ್ ಸೆಕ್ಷನ್ 106 ಅಡಿ ಪ್ರಕರಣ ದಾಖಲಿಸಿಕೊಂಡಿರುವ ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು, ತನಿಖೆಗೆ ಮುಂದಾಗಿದ್ದಾರೆ. ಘಟನಾ ಸ್ಥಳದ ಸಿಸಿಟಿವಿ ದೃಶ್ಯಾವಳಿಗಳನ್ನ ಪರಿಶೀಲಿಸುತ್ತಿದ್ದಾರೆ.

## ಆ್ಯಕ್ಸಲ್ ತುಂಡಾಗಿ ಸಾರಿಗೆ ಬಸ್ ಪಲ್ಟಿ ವಿದ್ಯಾರ್ಥಿ ಸಾವು, 20ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರ



**ದಾವಣಗೆರೆ:** ಆ್ಯಕ್ಸಲ್ ತುಂಡಾಗಿ ಸಾರಿಗೆ ಬಸ್ ಪಲ್ಟಿಯಾದ ಘಟನೆ ಚನ್ನಗಿರಿ ತಾಲೂಕಿನ ಮರಬನಹಳ್ಳಿ ಗ್ರಾಮದಲ್ಲಿ ನಡೆದಿದೆ. ಅಪಘಾತದಲ್ಲಿ ವಿದ್ಯಾರ್ಥಿಯೊಬ್ಬ ಸಾವನ್ನಪ್ಪಿದ್ದು, 50 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ 20 ಮಂದಿ ಸ್ಥಿತಿ ಗಂಭೀರವಾಗಿದೆ.

ಅಪಘಾತದಲ್ಲಿ ಸಾವನ್ನಪ್ಪಿದ ಯುವಕನನ್ನು ದರ್ಶನ್ (21) ಎಂದು ಗುರುತಿಸಲಾಗಿದೆ. ಗಾಯಾಳುಗಳಿಗೆ ದಾವಣಗೆರೆ ಜಿಲ್ಲಾ ಆಸ್ಪತ್ರೆ ಹಾಗೂ ಬಸವಾಪಟ್ಟಣ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬಸವಾಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಅಪಘಾತ ಸಂಭವಿಸಿದೆ.

→ 2

## ಡಿಎಂಕೆ, ಅಣ್ಣಾಡಿಎಂಕೆ ಸರ್ಕಾರ ರಚಿಸಲು ಮುಂದಾದ್ರೆ ಟಿವಿಕೆಯ ಎಲ್ಲಾ 108 ಶಾಸಕರು ರಾಜೀನಾಮೆ!

**ಚೆನ್ನೈ:** ದ್ರಾವಿಡಿಯನ್ ಪಕ್ಷಗಳಾದ ಡಿಎಂಕೆ ಅಥವಾ ಎಐಎಡಿಎಂಕೆ ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ಮುಂದಾದ್ರೆ, ತಮಿಳಗ ವೆಟ್ರಿ ಕಳಗಂ ಪಕ್ಷದ ಎಲ್ಲಾ 108 ಶಾಸಕರು ರಾಜೀನಾಮೆ ನೀಡುವುದಾಗಿ ಎಚ್ಚರಿಕೆ ನೀಡಿದೆ ಎಂದು ಉನ್ನತ ಮೂಲಗಳು ತಿಳಿಸಿರುವುದಾಗಿ ವರದಿಯಾಗಿದೆ.

ಡಿಎಂಕೆ ಮತ್ತು ಎಐಎಡಿಎಂಕೆ ನಿರ್ಣಾಯಕ ಸಭೆಗಳನ್ನು ನಡೆಸಿದ ನಂತರ ಟಿವಿಕೆ ಶಾಸಕರು (ಈ ನಿರ್ಧಾರಕ್ಕೆ ಬಂದಿದ್ದಾರೆ. ಜನಪ್ರಿಯ ಮತಗಳನ್ನ ಪಡೆದ ಅತಿದೊಡ್ಡ ಪಕ್ಷವನ್ನು ಬಿಟ್ಟು ರಾಜ್ಯದಲ್ಲಿ ಸರ್ಕಾರ ರಚಿಸಲು ಎರಡೂ ಪಕ್ಷಗಳು ಒಪ್ಪಂದ ಮಾಡಿಕೊಳ್ಳುತ್ತಿವೆ ಎಂದು ಟಿವಿಕೆ ಆರೋಪಿಸಿದೆ.

108 ಶಾಸಕ ಸ್ಥಾನಗಳನ್ನು ಪಡೆದ ಟಿವಿಕೆ ಏಕೈಕ ಅತಿದೊಡ್ಡ ಪಕ್ಷವಾಗಿ ಹೊಮ್ಮಿದೆ. ಅತಿದೊಡ್ಡ ಪಕ್ಷವನ್ನು ರಾಜ್ಯಪಾಲರು ಸರ್ಕಾರ ರಚಿಸಲು ಆಹ್ವಾನಿಸಬೇಕು. ಆದ್ರೆ ಎರಡೂ ಬಾರಿ ಭೇಟಿಯಾದರು, ವಿಜಯ್ ಅವರಿಗೆ ಹಕ್ಕು ಮಂಡಿಸಲು ಅವಕಾಶ ನಿರಾಕರಿಸಲಾಗಿದೆ. 118 ಶಾಸಕರ ಸಹಿ ಪಡೆದು ಬರುವಂತೆ ಹೇಳಿ ಕಳಿಸಿದ್ದಾರೆ. ಒಂದು ವೇಳೆ ಎರಡೂ ದ್ರಾವಿಡ ಪಕ್ಷಗಳು ಸರ್ಕಾರ ರಚಿಸಲು ಮುಂದಾದ್ರೆ, ಟಿವಿಕೆ ಎಲ್ಲಾ ಶಾಸಕರು ರಾಜೀನಾಮೆ ಕೊಡೋಣ ಅಂತ ನಟ ವಿಜಯ್ ಕೂಡ ಶಾಸಕರಿಗೆ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ.

ನಿನ್ನೆ ಲೋಕಭವನದಲ್ಲಿ 2ನೇ ಬಾರಿಗೆ ರಾಜ್ಯಪಾಲರನ್ನ ಭೇಟಿಯಾಗಿದ್ದ ಟಿವಿಕೆ ಮುಖ್ಯಸ್ಥ



ದಳಪತಿ ವಿಜಯ್ ಸರ್ಕಾರ ರಚಿಸಲು ಹಕ್ಕು ಮಂಡಿಸಿದ್ದರು. ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಬಹುಮತ ಸಾಬೀತುಪಡಿಸುವುದಾಗಿ ಹೇಳಿದ್ದರು. ಇದಕ್ಕೆ ಒಪ್ಪದ ರಾಜ್ಯಪಾಲರು, 118 ಶಾಸಕರ ಸಹಿ ತನ್ನಿ, ಬಹುಮತ ಸಾಬೀತುಪಡಿಸಿದ ಬಳಿಕ ಪ್ರಮಾಣವಚನ ಸ್ವೀಕರಿಸಿ ಎಂದು ಹೇಳಿ ವಾಪಸ್ ಕಳಿಸಿದ್ದರು.

ಡಿಎಂಕೆಗೆ ಸರ್ಕಾರ ರಚಿಸುವ ಪ್ಲ್ಯಾನ್ ಇದೆಯೇ?: ಟಿವಿಕೆ ಬಹುಮತ ಈವರೆಗೆ ಸಾಬೀತುಪಡಿಸದ ಹಿನ್ನೆಲೆ ಡಿಎಂಕೆ ಪರ್ಯಾಯ ಸರ್ಕಾರ ರಚನೆಗೆ ಮುಂದಾಗಿದೆ ಎಂದು ಹೇಳಲಾಗ್ತಿದೆ. ಗುರುವಾರ (ಮೇ 7) ಈ ಕುರಿತು ನಿರ್ಧಾರ ತೆಗೆದುಕೊಳ್ಳಲು ನಿರ್ಣಾಯಕ ಸಭೆ ನಡೆಸಲಾಗಿದೆ. ಇತ್ತ ಮತ್ತೊಂದು ಕಡೆ ಡಿಎಂಕೆ ಬಾಹ್ಯ ಬೆಂಬಲದೊಂದಿಗೆ ಅಣ್ಣಾಡಿಎಂಕೆ ಕೂಡ ಅಧಿಕಾರಕ್ಕೇರಲು ಹವಣಿಸುತ್ತಿದೆ ಎನ್ನುವತ್ತಿವೆ ವರದಿಗಳು.

## IPL ಸ್ಟಾರ್ ಆಟಗಾರರ ಹನಿಟ್ರ್ಯಾಪ್‌ಗೆ ಸ್ಕೆಚ್
### BCCI ನಿಂದ ಹೋಟೆಲ್ ರೂಮ್‌ಗಳ ದಿಢೀರ್ ತಪಾಸಣೆ

**ಮುಂಬೈ:** ಪ್ರಸ್ತುತ ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯಲ್ಲಿ ಸ್ಟಾರ್ ಆಟಗಾರರ ಹನಿಟ್ರ್ಯಾಪ್‌ಗೆ ಸಂಚು ನಡೆದಿದೆ ಎನ್ನುವ ಆರೋಪ ಕೇಳಿಬಂದಿದೆ.

ಟಿ20 ಲೀಗ್‌ನಲ್ಲಿ ಪಾಲ್ಗೊಂಡಿರುವ ಆಟಗಾರರು ಮತ್ತು ಅಧಿಕಾರಿಗಳ ವಿರುದ್ಧ ಲೈಂಗಿಕ ದುರ್ನಡತೆ ಸೇರಿದಂತೆ ಗಂಭೀರ ಆರೋಪಗಳನ್ನ ಹೊರಿಸುವ ಯತ್ನ ನಡೆಯುತ್ತಿದೆ. ಈ ಪ್ರಯತ್ನವನ್ನು ತಡೆಯುವುದಕ್ಕಾಗಿ ಬಿಸಿಸಿಐ ಕಠಿಣ ನಿಲುವು ಕೈಗೊಂಡಿದೆ. ಎಲ್ಲಾ ಆಟಗಾರರ ಮೇಲೆ ಎಚ್ಚರಿಕೆ ವಹಿಸಲು ಎಲ್ಲಾ ಫ್ರಾಂಚೈಸಿಗಳಿಗೆ 7 ಪುಟಗಳ ಮಾರ್ಗಸೂಚಿ ಹೊರಡಿಸಿದೆ.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ದೇವಜಿತ್ ಸೈಕಿಯಾ, ಎಲ್ಲಾ 10 ಐಪಿಎಲ್ ಫ್ರಾಂಚೈಸಿಗಳಿಗೂ ಸಂಭಾಭ್ಯ ಹನಿಟ್ರ್ಯಾಪ್ ಸ್ಕೆಚ್ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಆದ್ದರಿಂದ ಆಟಗಾರರ ಹೋಟೆಲ್ ಕೊಠಡಿಗಳಿಗೆ ಅನಿರೀಕ್ಷಿತವಾಗಿ ತಪಾಸಣೆ ನಡೆಸಲಾಗುತ್ತದೆ. ಯಾವುದೇ ಉಲ್ಲಂಘನೆಯನ್ನು ಕಠಿಣವಾಗಿ ಪರಿಗಣಿಸಲಾಗುತ್ತದೆ. ಆದ್ದರಿಂದ ಎಲ್ಲಾ ಫ್ರಾಂಚೈಸಿಗಳು ಎಲ್ಲ ಸಂರ್ಭದಲ್ಲೂ ಅಪಾಯಗಳನ್ನು ತಡೆಯುವ ನಿಟ್ಟಿನಲ್ಲಿ ಜಾಗರುಕರಾಗಿರಬೇಕು ಎಂದು ಎಚ್ಚರಿಕೆ ನೀಡಿದ್ದಾರೆ. ವಿಶೇಷ ಕಾರ್ಯಪಡೆ: ಹನಿಟ್ರ್ಯಾಪ್ ಯತ್ನ ಆರೋಪ ಕೇಳಿಬಂದ ಹಿನ್ನೆಲೆ ಆಟಗಾರರ ಹೋಟೆಲ್ ಕೊಠಡಿಗಳ ತಪಾಸಣೆ ನಡೆಸಲು ಬಿಸಿಸಿಐ ಹಾಗೂ ಐಪಿಎಲ್ ಮಂಡಳಿ ಸದಸ್ಯರನ್ನೊಳಗೊಂಡ ವಿಶೇಷ ಕಾರ್ಯಪಡೆ ರಚಿಸಲಾಗಿದೆ. ಒಂದು ವೇಳೆ ಯಾವುದೇ ಆಟಗಾರರ ಕೊಠಡಿಯಲ್ಲಿ ಅನಧಿಕೃತ ಪ್ರವೇಶವಿದ್ದರೆ, ಹೊರಗಿನವರು ಬಂದಿರುವುದು ಕಂಡುಬಂದ್ರೆ, ಅಂತಹವರ ವಿರುದ್ಧ ಬಲವಾದ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ, ಜೊತೆಗೆ ಶಿಕ್ಷೆಗೂ ಗುರಿಯಾಗುತ್ತಾರೆ ಎಂದು ಬಿಸಿಸಿಐ ಮಾರ್ಗಸೂಚಿಯಲ್ಲಿ ವಿವರಿಸಿದೆ.

ಇನ್ನೂ ಆಟಗಾರ ಭೇಟಿಗೆ ಬರುವ ಅತಿಥಿಗಳು ಮತ್ತು ಹೋಟೆಲ್‌ನಲ್ಲಿ ಚಲನವಲನಗಳ ಬಗ್ಗೆ ದಾಖಲೆಗಳನ್ನು ಫ್ರಾಂಚೈಸಿ ವ್ಯವಸ್ಥಾಪಕರು ನಿರ್ವಹಿಸಬೇಕಾಗುತ್ತದೆ. ಯಾವುದೇ ಆಟಗಾರರು ಮತ್ತು ಸಹಾಯಕ ಸಿಬ್ಬಂದಿ ಸದಸ್ಯರು ತಂಡದ ಹೋಟೆಲ್‌ನಿಂದ ಯಾವುದೇ ಸಮಯದಲ್ಲಿ ಹೊರಡುವ ಮೊದಲು ಭದ್ರತಾ ಸಂಪರ್ಕ ಅಧಿಕಾರಿ ಅಥವಾ ತಂಡದ ಸಮಗ್ರತೆ ಅಧಿಕಾರಿ ಮಾಹಿತಿ ನೀಡಬೇಕಾಗುತ್ತೆ. ಬಿಸಿಸಿಐ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದರೆ, ಶಿಸ್ತುಕ್ರಮದೊಂದಿಗೆ ಕಾನೂನು ಕ್ರಮಕ್ಕೂ ಒಳಗಾಗಲಿದ್ದಾರೆ ಎಂದು ಸೈಕಿಯಾ ಎಚ್ಚರಿಕೆ ನೀಡಿದ್ದಾರೆ.

## ವೈದ್ಯ ಆತ್ಮಹತ್ಯೆ ಮಾಡಿಕೊಂಡ ಬೆನ್ನಲ್ಲೇ ನೇಣಿಗೆ ಶರಣಾದ ನರ್ಸ್: ಅಕ್ರಮ ಸಂಬಂಧ ಶಂಕೆ



**ರಾಮನಗರ:** ವೈದ್ಯನ ಸಾವಿನ ಬೆನ್ನಲ್ಲೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ನರ್ಸ್ ಸಹ ಆತ್ಮಹತ್ಯೆಗೆ ಶರಣಾದ ಘಟನೆ ಕನಕಪುರ ನಗರದ ಮಹದೇಶ್ವರ ಬಡಾವಣೆಯಲ್ಲಿ ನಡೆದಿದೆ. ಎರಡು ದಿನಗಳ ಅಂತರದಲ್ಲಿ ಇಬ್ಬರೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

→ 2

## ಧರ್ಮಸ್ಥಳ ವೀರೇಂದ್ರ ಹೆಗ್ಗಡೆ ವಿರುದ್ಧ ಮಾನಹಾನಿಕರ ಪೋಸ್ಟ್: ಗಿರೀಶ್ ಮಟ್ಟಣ್ಣವರ್ ವಿರುದ್ಧ ಪ್ರಕರಣ ದಾಖಲು

**ಬೆಳ್ತಂಗಡಿ ಮೇ 8:** ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ ವೀರೇಂದ್ರ ಹೆಗ್ಗಡೆಯವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಮಾನಿಹಾನಿಕರ ಪೋಸ್ಟ್ ಗಳನ್ನು ಹಾಕಿರುವ ಆರೋಪದಲ್ಲಿ ಗಿರೀಶ್ ಮಟ್ಟಣ್ಣವರ್ ವಿರುದ್ಧ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧರ್ಮಸ್ಥಳ ನಿವಾಸಿ ಸುಬ್ರಹ್ಮಣ್ಯ ಪ್ರಸಾದ್ ಎಂಬವರು ಈ ಬಗ್ಗೆ ದೂರು ನೀಡಿದ್ದಾರೆ.


ಗಿರೀಶ್ ಮಟ್ಟಣ್ಣವರ್ ಸಾಮಾಜಿಕ ಮಾಧ್ಯಮ ಇನ್ ಸ್ಟಾಗ್ರಾಂ ನಲ್ಲಿ ಸತ್ಯಕ್ಕೆ ದೂರವಾದ ಗಂಭೀರ ಆರೋಪಗಳನ್ನು ಮಾಡುವ ಮೂಲಕ ಡಾ.ಹೆಗ್ಗಡೆಯವರ ವ್ಯಕ್ತಿತ್ವಕ್ಕೆ ಕುಂದುತರುವ ಪ್ರಯತ್ನ ನಡೆಸಿ ಸಮಾಜದಲ್ಲಿ ಅವರ ಸ್ಥಾನಮಾನಕ್ಕೆ ಹಾನಿಯುಂಟು ಮಾಡುವ ಪ್ರಯತ್ನ ಮಾಡಿದ್ದಾರೆ. ಅಲ್ಲದೇ, ಸಮಾಜದಲ್ಲಿ ವೈರತ್ವ ದ್ವೇಷ ವೈಮನಸ್ಸು ಉಂಟು ಮಾಡಲು ಪ್ರಯತ್ನಿಸಲಾಗಿದೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.



ಈ ದೂರಿನನ್ವಯ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ BNS-2023 (u/s-353(2) ರಡಿ ಗಿರೀಶ್ ಮಟ್ಟಣ್ಣನವರ್ ವಿರುದ್ಧ ಎಪ್ರಿಲ್ 18ರಂದು ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ತನಿಖೆಗೆ ಹಾಜರಾಗಲು ನೋಟಿಸ್ ಜಾರಿ: ಗಿರೀಶ್ ಮಟ್ಟಣ್ಣವರ್ ಎಸ್‌ಐಟಿ ಕಚೇರಿಗೆ ಮೇ 7ರಂದು ಗಿರೀಶ್ ಮಟ್ಟಣ್ಣವರ್ ಹಾಜರಾಗಿರುವ ಬಗ್ಗೆ ಮಾಹಿತಿ ಪಡೆದ ಧರ್ಮಸ್ಥಳ ಸಬ್ ಇನ್ ಸ್ಪೆಕ್ಟರ್ ಸಮರ್ಥ ಆರ್. ಗಾಣಿಗೇರ ನೇರವಾಗಿ ಎಸ್‌ಐಟಿ ಕಚೇರಿಗೆ ತೆರಳಿ ಮಟ್ಟಣ್ಣವರ್ ರಿಗೆ ನೋಟಿಸ್ ಜಾರಿ ಮಾಡಿದ್ದಾರೆ. ನೋಟಿಸ್ ಸ್ವೀಕರಿಸಿದ ಒಂದು ವಾರದೊಳಗೆ ಧರ್ಮಸ್ಥಳ ಪೊಲೀಸ್ ಠಾಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ.

## ಸಚಿವ ಎಂ.ಸಿ.ಸುಧಾಕರ್ ವಿರುದ್ಧದ ಅಪಪ್ರಚಾರಕ್ಕೆ ರೈತ ಸಂಘದ ತೀವ್ರ ಖಂಡನೆ



**ಸಂಜೆ ಎಕ್ಸ್‌ಪ್ರೆಸ್, ಚಿಂತಾಮಣಿ, ಮೇ 8:** ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಹೋಬಳಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಏಖಂಆಃ)ವತಿಯಿಂದ ನಡೆಯುತ್ತಿರುವ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ,ಕಾನೂನು ಸುವ್ಯವಸ್ಥೆ ಕಾಪಾಡಬೇಕು ಹಾಗೂ ರೈತರಿಗೆ ನ್ಯಾಯಯುತ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಚಿಂತಾಮಣಿ ತಾಲೂಕು ಘಟಕ ವತಿಯಿಂದ ತಾಲೂಕು ದಂಡಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ರೈತ ಸಂಘದ ತಾಲೂಕು ಅಧ್ಯಕ್ಷರಾದ ಹೆಚ್‌ಎನ್ ಕದಿರೇಗೌಡ ಸಚಿವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿರುವವರು ಒಂದೆಡೆ ಕೈಗಾರಿಕೆ ಬೇಡ ಎನ್ನುತ್ತಾರೆ,ಇನ್ನೊಂದೆಡೆ ಅಭಿವೃದ್ಧಿ ಬೇಕು ಎನ್ನುತ್ತಾರೆ. ಇಂತಹ ದ್ವಂದ್ವ ನಿಲುವುಗಳ ಮೂಲಕ ಸಾರ್ವಜನಿಕರನ್ನು ಹಾದಿ ತಪ್ಪಿಸಲಾಗುತ್ತಿದೆ.

ಜಂಗಮಕೋಟೆ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಗುರುತಿಸಲಾಗಿದ್ದ 2,823 ಎಕರೆ ಭೂಮಿಯಲ್ಲಿ, ಸುಮಾರು 550 ಎಕರೆ ಕೃಷಿ ಭೂಮಿಯನ್ನು ಕೈಬಿಡುವಂತೆ ರೈತರು ಮನವಿ ಮಾಡಿದ್ದರು.ರೈತರ ಹಿತದೃಷ್ಟಿಯಿಂದ ಸಚಿವರಾದ ಸುಧಾಕರ್ ಕೈಗಾರಿಕಾ ಸಚಿವರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ 550 ಎಕರೆ ಕೃಷಿ ಭೂಮಿಯನ್ನು ಕೈಬಿಟ್ಟು ಆದೇಶಿಸಿದ್ದಾರೆ ಎಂದು ಹೇಳಿದ ಅವರು ಜಂಗಮಕೋಟೆ ಹೋಬಳಿಯ 13 ಹಳ್ಳಿಗಳ ವ್ಯಾಪ್ತಿಯಲ್ಲಿ ಒಟ್ಟು 2823 ಎಕರೆ ಪ್ರದೇಶವನ್ನು ಕೈಗಾರಿಕಾ ಅಭಿವೃದ್ಧಿಗಾಗಿ ಗುರುತಿಸಲಾಗಿತ್ತು.ಈ ಪೈಕಿ 550 ಎಕರೆ ನೀರಾವರಿ ಪ್ರದೇಶವನ್ನು ಕೈಬಿಟ್ಟು,ಉಳಿದ 2270 ಎಕರೆ ಭೂಮಿಯನ್ನು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ಕಳೆದ ಏಪ್ರಿಲ್ 29ರಂದು ನಡೆದ ಪ್ರತಿಭಟನೆಯಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ಬಣದವರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಸಿ.ಸುಧಾಕರ್ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಸಂಘಟನೆಯು ತೀವ್ರವಾಗಿ ಖಂಡಿಸಿದೆ.

## ‘ಸಬಲೀಕರಣಕ್ಕೆ ಶಿಕ್ಷಣವೊಂದೆ ಮಾರ್ಗ’: ಪ್ರಸನ್ನಕುಮಾರ್ ಕೆರಗೋಡು



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಮಂಡ್ಯ,ಮೇ8–** ಮಹಿಳೆಯರ ಸಬಲೀಕರಣಕ್ಕೆ ಮತ್ತು ಆರ್ಥಿಕ, ಸಾಮಾಜಿಕ ಮತ್ತು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಶಿಕ್ಷಣವೊಂದೇ ಮಾರ್ಗ ಎಂದು ಕ್ರಿಯಾ ಸಂಸ್ಥಾಪಕ ಮತ್ತು ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜಿನ ಇಂಗ್ಲಿಷ್ ಅಧ್ಯಾಪಕ ಪ್ರಸನ್ನಕುಮಾರ್ ಕೆರಗೋಡು ಅಭಿಪ್ರಾಯಪಟ್ಟರು. ಕ್ರಿಯಾ ಸಂಸ್ಥೆಯ ವತಿಯಿಂದ ಮಂಡ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ "ನಾನು ಸ್ತ್ರೀ" ಅಭಿಯಾನದಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ವ್ಯಕ್ತಿತ್ವ ವಿಕಸನ ಮತ್ತು ಉದ್ಯೋಗ ಮಾರ್ಗದರ್ಶನ ಕಾರ್ಯಾಗಾರದಲ್ಲಿ ಅವರು ಮಾತನಾಡುತ್ತಿದ್ದರು.

ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ಹೆಣ್ಣುಮಕ್ಕಳು ಶಾಲಾ–ಕಾಲೇಜು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುವುದು ಮತ್ತು ಬಾಲ್ಯವಿವಾಹಕ್ಕೆ ಒಳಗಾಗುವುದು, ಇದರೊಂದಿಗೆ ಹೆಣ್ಣು ಭ್ರೂಣ ಹತ್ಯೆಯಂತ ಅನಿಷ್ಟ ಪದ್ಧತಿಯೂ ಸೇರಿಕೊಂಡಿರುವ ಹಿನ್ನೆಲೆಯಲ್ಲಿ ಇಲ್ಲಿನ ವಿದ್ಯಾರ್ಥಿನಿಯರಿಗೆ ಅತಿ ಹೆಚ್ಚು ಜವಾಬ್ದಾರಿ ಇದೆ. ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕಾದರೆ ಉತ್ತಮವಾದ ಒಂದು ಉದ್ಯೋಗ ಪಡೆದುಕೊಳ್ಳುವುದು ಅತ್ಯಾವಶ್ಯಕ, ಆ ಹಿನ್ನೆಲೆಯಲ್ಲಿ ಕಠಿಣ ಶ್ರಮ ವಹಿಸಿ ಉತ್ತಮ ಜೀವನ ಮಾರ್ಗ ಕಂಡುಕೊಳ್ಳುವಂತೆ ಕರೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಾದ ಮಂಜುಳಾ ಕೆ ಮಾತನಾಡಿ ಇಲಾಖೆಯ ವತಿಯಿಂದ ಹೆಣ್ಣು ಮಕ್ಕಳ ಕಲ್ಯಾಣಕ್ಕೆ ವಸತಿ ಮತ್ತು ಊಟದ ಜೊತೆಗೆ ಅನೇಕ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಆ ಎಲ್ಲಾ ಸವಲತ್ತುಗಳನ್ನು ಬಳಸಿಕೊಂಡು ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಕ್ರಿಯಾದ "ನಾನು ಸ್ತ್ರೀ" ಘಟಕದ ಸಂಚಾಲಕಿ ಸುಪ್ರಿಯ ಶಿವಣ್ಣ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಇಲಾಖೆಯ ತಾಲ್ಲೂಕು ಅಧಿಕಾರಿಗಳಾದ ಮಂಜುನಾಥ ನಾಯ್ಡು, ನಿಲಯಪಾಲಕರಾದ ಯೋಗಿತಾ ಎಸ್, ಕ್ರಿಯಾ ಸಂಚಾಲಕರುಗಳಾದ ಆನಂದ್ ಎಸ್.ಎಲ್, ಲೋಕೇಶ್ ಕೆ.ಎನ್ ಮತ್ತು ನಿಲಯದ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

## “ಆಪ್ಟಮ್ ಇಂಡಿಯಾ ಮತ್ತು ಯುನೈಟೆಡ್ ವೇ”ನಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 45 ಇ–ಬೈಕ್‌ಗಳನ್ನು ವಿತರಣೆ



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಬೆಂಗಳೂರು,ಮೇ8–** ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಸದೃಢಗೊಳಿಸುವ ತಮ್ಮ ಬದ್ಧತೆಯನ್ನು ಬಲಪಡಿಸುವ ಸಲುವಾಗಿ ಬೆಂಗಳೂರು ಗ್ರಾಮೀಣ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 45 ಇ–ಬೈಕ್‌ಗಳನ್ನು ಆಪ್ಟಮ್ ಇಂಡಿಯಾ ಜೊತೆಗೆ ಪಾಲುದಾರಿಕೆಯಲ್ಲಿ ಯುನೈಟೆಡ್ ವೇ ಬೆಂಗಳೂರು ಹಸ್ತಾಂತರಿಸಿತು. ಕೊನೆಯ ಹಂತದಲ್ಲಿ ಸಂಪರ್ಕ ಸುಧಾರಿಸುವುದಕ್ಕಾಗಿ ವಿನ್ಯಾಸಗೊಳಿಸಲಾದ ಈ ಇ–ಬೈಕ್‌ಗಳು ಮುಂಚೂಣಿಯ ಆರೋಗ್ಯ ಕಾರ್ಯಕರ್ತರ ವ್ಯಾಪ್ತಿ, ಉತ್ತಮ ಕಾರ್ಯಕ್ಷಮತೆ ಮತ್ತು ಜನರಿಗೆ ಸ್ಪಂದಿಸುವ ಸಾಮರ್ಥ್ಯವನ್ನು ಗಮನಾರ್ಹವಾಗಿ ಸುಧಾರಿಸುತ್ತವೆ.

ಹೊಸಕೋಟೆ, ದೊಡ್ಡಬಳ್ಳಾಪುರ ಮತ್ತು ಬೆಂಗಳೂರು ಗ್ರಾಮೀಣ ಜಿಲ್ಲೆಯ ಇತರ ದೂರದ ಹಾಗೂ ಹಿಂದುಳಿದ ಸಮುದಾಯಗಳಿಗೆ ಉತ್ತಮವಾಗಿ ಸೇವೆ ಸಲ್ಲಿಸಲು ಅವು ನೆರವಾಗುತ್ತವೆ.

ಈ ಕಾರ್ಯಕ್ರಮವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿ.ಇ.ಓ ಡಾ. ವಸಂತಿ ಅಮರ್ ಬಿ ವಿ, ಆಪ್ಟಮ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಉಮಾ ರತ್ನಂ ಕೃಷ್ಣನ್ ಮತ್ತು ಯುನೈಟೆಡ್ ವೇ ಬೆಂಗಳೂರು ಸಂಸ್ಥೆಯ ಸಿ.ಇ.ಓ ರಾಜೇಶ್ ಕೃಷ್ಣನ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿ.ಇ.ಓ ಡಾ. ವಸಂತಿ ಅಮರ್, “ಈ ಇ–ಬೈಕ್ ಕಾರ್ಯಕ್ರಮವು ಕರ್ನಾಟಕ ಸರ್ಕಾರದ ಸಮಾವೇಶಿತ ಆರೋಗ್ಯ ಸೇವೆಯ ದೃಷ್ಟಿಕೋಣಕ್ಕೆ ಬೆಂಬಲವಾಗಿದ್ದು, ಸ್ವಯಂಸೇವಾ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಹಾಗೂ ಸಮುದಾಯಗಳ ಬಲವಾದ ಸಹಭಾಗಿತ್ವದ ಮೂಲಕ ನವೀನ ಇ–ಮೊಬಿಲಿಟಿ ಪರಿಹಾರಗಳನ್ನು ಬಳಸಿಕೊಂಡು ಗ್ರಾಮೀಣ ಪ್ರದೇಶಗಳ ಪ್ರತಿಯೊಂದು ಮನೆಬಾಗಿಲಿಗೂ ಸಮಯೋಚಿತ ಮತ್ತು ಸುಲಭವಾಗಿ ಲಭ್ಯವಾಗುವ ಆರೋಗ್ಯ ಸೇವೆಗಳನ್ನು ತಲುಪಿಸಲು ಸಹಕಾರಿಯಾಗಿದೆ.

ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಪರಿಣಾಮಕಾರಿ ಕೊನೆಯ ಹಂತದ ಸಂಪರ್ಕವನ್ನು ಒದಗಿಸುವ ಮೂಲಕ, ಈ ಯೋಜನೆ ಆರೋಗ್ಯ ಸೇವೆಗಳ ವಿತರಣೆಯನ್ನು ಸುಧಾರಿಸುವುದರ ಜೊತೆಗೆ ಸಮುದಾಯದ ವಿಶ್ವಾಸವನ್ನೂ ಬಲಪಡಿಸುತ್ತದೆ,” ಎಂದು ಹೇಳಿದರು.

ಆಪ್ಟಮ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕಿ ಉಮಾ ರತ್ನಂ ಕೃಷ್ಣನ್ ಮಾತನಾಡಿ, “ಸಮುದಾಯದ ಹತ್ತಿರ ಕಾರ್ಯನಿರ್ವಹಿಸುವವರನ್ನು ನಾವು ಎಷ್ಟು ಸಬಲೀಕರಿಸುತ್ತೇವೆ ಎಂಬುದು ಭವಿಷ್ಯದ ಆರೋಗ್ಯ ರಕ್ಷಣೆಯನ್ನು ನಿರ್ಧರಿಸುತ್ತದೆ. ಪ್ರಾಥಮಿಕ ಆರೋಗ್ಯ ಕಾರ್ಯಕರ್ತರ ಸಂಚಾರ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಮೂಲಕ, ನಾವು ಹೆಚ್ಚು ಕ್ರಿಯಾಶೀಲ ಮತ್ತು ಸ್ಪಂದಿಸುವ ವ್ಯವಸ್ಥೆಗೆ ಅವಕಾಶ ಮಾಡಿಕೊಡುತ್ತಿದ್ದೇವೆ.

ಈ ಕಾರ್ಯಕ್ರಮ ಸೇವೆ ಸಲ್ಲಿಸುವ ಜನರ ದೈನಂದಿನ ವಾಸ್ತವಿಕತೆಯಲ್ಲಿ ನೆಲೆಗೊಂಡಿದೆ.

ಭಾರತದ ತಳಮಟ್ಟದಲ್ಲಿ ಅರ್ಥಪೂರ್ಣ ಪರಿಣಾಮ ಬೀರುವ ಶಕ್ತಿಯಾಗಿ, ಪ್ರಾಥಮಿಕ ಆರೋಗ್ಯ ವ್ಯವಸ್ಥೆಗಳನ್ನು ಬಲಪಡಿಸಲು ಯುನೈಟೆಡ್ ವೇ ಬೆಂಗಳೂರಿನೊಂದಿಗೆ ನಮ್ಮ ಪಾಲುದಾರಿಕೆ ನೆರವಾಗುವುದಲ್ಲದೆ, ನಾವು ಹಂಚಿಕೊಂಡಿರುವ ದೃಷ್ಟಿಕೋನಕ್ಕೂ ತಕ್ಕಂತಿದೆ,” ಎಂದರು.


## ಶ್ರೀ ಮಾರಿಕಾಂಭದೇವಿಯ ಕರಗ ಮಹೋತ್ಸವ



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಕೋಲಾರ,ಮೇ8–** ತಾಲ್ಲೂಕಿನ ನರಸಾಪುರ ಹೋಬಳಿಯ ಚಾಕರಸನಹಳ್ಳಿಯಲ್ಲಿ ವರ್ತಮಾನ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣಿ ವಸಂತಋತು ವೈಶಾಖ ಮಾಸೆ ಕೃಷ್ಣಪಕ್ಷ ಸಪ್ತಮಿ ಮೇ9 ರ ಶನಿವಾರ ದಿಂದ ಮೇ12ರ ಮಂಗಳವಾರದ ನಡೆಯಲಿರುವ ಶ್ರೀ ಮಾರಿಕಾಂಭದೇವಿಯ ಕರಗ ಮಹೋತ್ಸವವು ವಿಜೃಭಣೆಯಿಂದ ಆಚರಿಸಲ್ಪಡುತ್ತಿದ್ದು ಮೇ10ರ ಭಾನುವಾರದಂದು ರಾತ್ರಿ 12 ಗಂಟೆಗೆ ಹೂವಿನ ಕರಗ ನಡೆಯಲಿದ್ದು ದೇವತಾ ಕಾರ್ಯವನ್ನು ಯಶಸ್ವಿ ಗೊಳಿಸಲು ಗ್ರಾಮಸ್ಥರು ಮನವಿ ಮಾಡಿದರು.

ಹೂವಿನ ಕರಗದ ಪ್ರಯುಕ್ತ ಮೇ11ರ ಸೋಮವಾರದಂದು ಶ್ರೀ ರಾಮದೇವರು, ಶ್ರೀ ಆಂಜನೇಯಸ್ವಾಮಿ, ಶ್ರೀ ಶನೈಶ್ವರ ಸ್ವಾಮಿ, ಶ್ರೀ ನರಸಿಂಹಸ್ವಾಮಿ ಮತ್ತು ಭಗವಾನ್ ಶ್ರೀ ಕೃಷ್ಣ ದೇವರುಗಳಿಗೆ ದೀಪಾರಾಧನೆ ಸೇವೆಗಳು ನಡೆಯಲಿದ್ದು ಮೇ12 ರ ಮಂಗಳವಾರದಂದು ಶ್ರೀ ಮಾರಿಕಾಂಭದೇವಿ, ಶ್ರೀ ಚೌಡೇಶ್ವರಿದೇವಿ ,ಶ್ರೀ ಗಂಗಮ್ಮದೇವಿ ,ಶ್ರೀ ಸಪಲಾಂಭದೇವಿ ,ಶ್ರೀ ಸುಗ್ಗಲಮ್ಮ ದೇವಿ ,ಶ್ರೀ ಮುನೇಶ್ವರಸ್ವಾಮಿ ದೇವರುಗಳಿಗೆ ದೀಪಾರಾಧನೆ ಸೇವೆಗಳು ನಡೆಯಲಿದ್ದು ಎಲ್ಲಾ ದೇವತಾಕಾರ್ಯಗಲ್ಲಿ ಭಕ್ತಾಧಿಗಳು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಚಾಕರಸನಹಳ್ಳಿಯ ಗ್ರಾಮಸ್ಥರು ಕೋರಿದರು .

## ನೆಲಮಂಗಲ ತಾಲೂಕು ಕಸಾಪ ನೂತನ ಅಧ್ಯಕ್ಷರಾಗಿ ಸದಾನಂದಾರಾಧ್ಯ ಆಯ್ಕೆ



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ನೆಲಮಂಗಲ,ಮೇ8–** ತಾಲೂಕು ಕಸಾಪ ನೂತನ ಅಧ್ಯಕ್ಷರಾಗಿ ಕವಿ, ಶಿಕ್ಷಕ ಕೆ.ಬಿ. ಸದಾನಂದಾರಾಧ್ಯ ಆಯ್ಕೆಯಾಗಿದ್ದಾರೆ.

ಎಂ ಎ ಕನ್ನಡ ಮತ್ತು ಎಂ ಎ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು, ಕಳೆದ 27 ವರ್ಷಗಳಿಂದ ಶಿಕ್ಷಕ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಅಪ್ರತಿಮ ಸೇವೆಗಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿಯೂ ಚಿರಪರಿಚಿತರಾಗಿ, ’ಸಿರಿಗಂಧ’ ಮತ್ತು ’ನುಡಿ ಮಲ್ಲಿಗೆ’ ಎಂಬ ಕವನ ಸಂಕಲನಗಳನ್ನು, ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಇದೀಗ ಅವರ ಇನ್ನೊಂದು ಕವನ ಸಂಕಲನ ಪ್ರಕಟಣೆಯಲ್ಲಿದೆ. ಅನೇಕ ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಉಪನ್ಯಾಸಕರಾಗಿ, ನಿರೂಪಕರಾಗಿ ಭಾಗವಹಿಸಿ ತಮ್ಮ ಸೃಜನಾತ್ಮಕ ಮತ್ತು ಕ್ರಿಯಾಶೀಲ ವ್ಯಕ್ತಿತ್ವದಿಂದ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

## ಬೆಂಗಳೂರಿನಾದ್ಯಂತ ’ಆರೋಗ್ಯವಂತ ಮಗು’ ಸ್ಪರ್ಧೆಗಳನ್ನು ಆಯೋಜಿಸಿದ ಹಿಮಾಲಯ ಬೇಬಿ ಕೇರ್

**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಬೆಂಗಳೂರು, ಮೇ8–** ಭಾರತದ ಪ್ರಮುಖ ಮತ್ತು ವಿಶ್ವಾಸಾರ್ಹ ಶಿಶು ಆರೈಕೆ ಬ್ರ್ಯಾಂಡ್ ಆದ ’ಹಿಮಾಲಯ ಬೇಬಿ ಕೇರ್’, ಸ್ಮೈಲ್ ಫೌಂಡೇಶನ್ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ’ಆರೋಗ್ಯವಂತ ಮಗು’ ಸ್ಪರ್ಧೆಯನ್ನು ಆಯೋಜಿಸಿತ್ತು.

ಸಮಗ್ರ ಮಕ್ಕಳ ಅಭಿವೃದ್ಧಿ, ತಾಯಿಯ ಆರೋಗ್ಯ ಮತ್ತು ಆರಂಭಿಕ ಶಿಶು ಆರೈಕೆಯ ಬಗ್ಗೆ ಜಾಗೃತಿ ಮೂಡಿಸಲು ಈ ಉಪಕ್ರಮವು ತಾಯಂದಿರು, ಶಿಶುಗಳು, ಸಮುದಾಯ ಆರೋಗ್ಯ ಕಾರ್ಯಕರ್ತರು ಮತ್ತು ಮಕ್ಕಳ ಆರೈಕೆ ತಜ್ಞರನ್ನು ಒಂದೆಡೆ ಸೇರಿಸಿತು.

ಈ ಕಾರ್ಯಕ್ರಮದಲ್ಲಿ 90 ತಾಯಂದಿರು ಮತ್ತು ಅವರ ಶಿಶುಗಳು ಉತ್ಸಾಹದಿಂದ ಭಾಗವಹಿಸಿದ್ದರು. ಆರೋಗ್ಯ ವೃತ್ತಿಪರರು ಮತ್ತು ಸ್ಮೈಲ್ ಫೌಂಡೇಶನ್ನ ತಂಡವು ಈ ಕಾರ್ಯಕ್ರಮಕ್ಕೆ ಸಂಪೂರ್ಣ ಬೆಂಬಲ ನೀಡಿತು. ತಳಮಟ್ಟದಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯವನ್ನು ಸುಧಾರಿಸುವಲ್ಲಿ ಸಮುದಾಯದ ಆಸಕ್ತಿಯನ್ನು ಪ್ರತಿಬಿಂಬಿಸುವಂತೆ ಕಾರ್ಯಕ್ರಮದ ವಾತಾವರಣವು ಅತ್ಯಂತ ಚೈತನ್ಯದಾಯಕವಾಗಿತ್ತು. ಸ್ಪರ್ಧೆಯ ಸಮಯದಲ್ಲಿ, ಮಕ್ಕಳ ಮೋಟಾರ್ ಕೌಶಲಗಳು, ಎತ್ತರ, ತೂಕ ಮತ್ತು ಚಟುವಟಿಕೆಯ ಮಟ್ಟಗಳಂತಹ ಪ್ರಮುಖ ನಿಯತಾಂಕಗಳ ಆಧಾರದ ಮೇಲೆ ಮಕ್ಕಳನ್ನು ಮೌಲ್ಯಮಾಪನ ಮಾಡಲಾಯಿತು.



ಹಿಮಾಲಯ ಬೇಬಿ ಕೇರ್ ಮತ್ತು ಸ್ಮೈಲ್ ಫೌಂಡೇಶನ್ ಜಂಟಿಯಾಗಿ ವಿಜೇತರನ್ನು ಘೋಷಿಸಿದವು.

ಪ್ರಥಮ ಸೈಯದ್ ಆಲಂ, ದ್ವಿತೀಯ ಅಕ್ರಮ್, ತೃತೀಯ ಶಶಾಂಕ್ ಪಡೆದರು. ವಿಜೇತರಿಗೆ ವಿಶೇಷ ವಿಜೇತ ಪ್ರಮಾಣಪತ್ರ ಮತ್ತು ’ಹಿಮಾಲಯ ಬೇಬಿ ಗಿಫ್ಟ್ ಪ್ಯಾಕ್’ ನೀಡಲಾಯಿತು.

ಅಭಿವೃದ್ಧಿ ಮೌಲ್ಯಮಾಪನದ ಜೊತೆಗೆ, ತಾಯಂದಿರಿಗೆ ಎದೆಹಾಲು ಉಣಿಸುವುದು, ಶಿಶು ಪೋಷಣೆ, ನೈರ್ಮಲ್ಯ, ಲಸಿಕೆ ವೇಳಾಪಟ್ಟಿ ಮತ್ತು ಆರಂಭಿಕ ಬಾಲ್ಯದ ಆರೈಕೆಯ ಬಗ್ಗೆ ತಜ್ಞರು ಅಮೂಲ್ಯವಾದ ಮಾರ್ಗದರ್ಶನ ನೀಡಿದರು.

ಈ ಉಪಕ್ರಮದ ಬಗ್ಗೆ ಮಾತನಾಡಿದ ಹಿಮಾಲಯ ವೆಲ್ನೆಸ್ ಕಂಪನಿಯ ಬೇಬಿ ಕೇರ್ ವಿಭಾಗದ ನಿರ್ದೇಶಕ ಚಕ್ರವರ್ತಿ, "ಮಗುವಿನ ಬೆಳವಣಿಗೆಯಲ್ಲಿ ಆರಂಭಿಕ ವರ್ಷಗಳು ಅತ್ಯಂತ ನಿರ್ಣಾಯಕ ಎಂದು ಹಿಮಾಲಯ ಬೇಬಿ ಕೇರ್ ನಂಬುತ್ತದೆ.

ಈ ಸ್ಪರ್ಧೆಯ ಮೂಲಕ ಪೋಷಕರಿಗೆ ವೈದ್ಯಕೀಯ ಒಳನೋಟಗಳು ಮತ್ತು ಸಂಪನ್ಮೂಲಗಳನ್ನು ಒದಗಿಸಿ, ಮಗುವಿನ ಆರೋಗ್ಯದ ಅಡಿಪಾಯವು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು ನಮ್ಮ ಉದ್ದೇಶವಾಗಿದೆ. ಸ್ಥಳೀಯ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಹೊಂದುವ ಮೂಲಕ, ಪ್ರತಿಯೊಂದು ಮಗುವಿಗೂ ಅಗತ್ಯವಿರುವ ಸುರಕ್ಷಿತ ಮತ್ತು ಸುಸ್ಥಿರ ಆರೈಕೆಯ ಬಗ್ಗೆ ನಾವು ಜಾಗೃತಿ ಮೂಡಿಸುತ್ತಿದ್ದೇವೆ," ಎಂದರು.

ಸ್ಮೈಲ್ ಫೌಂಡೇಶನ್ನ ಪ್ರೋಗ್ರಾಂ ಮುಖ್ಯಸ್ಥ (ಸ್ವಾಭಿಮಾನ್ ಮತ್ತು ಎಂಪವರಿಂಗ್ ಗ್ರಾಸ್ರೂಟ್ಸ್) ಮಿಸ್ ಸರಿತಾ ಪ್ರಧಾನ್ ಮಾತನಾಡಿ,

ಸ್ಮೈಲ್ ಫೌಂಡೇಶನ್ ಭಾರತದ ಪ್ರಮುಖ ಅಭಿವೃದ್ಧಿ ಸಂಸ್ಥೆಯಾಗಿದ್ದು, ಶಿಕ್ಷಣ, ಆರೋಗ್ಯ ಮತ್ತು ಮಹಿಳಾ ಸಬಲೀಕರಣದ ಮೂಲಕ ಪ್ರತಿ ವರ್ಷ 20 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಕುಟುಂಬಗಳ ಜೀವನದಲ್ಲಿ ಬದಲಾವಣೆ ತರುತ್ತಿದೆ. ವೆಬ್ಸೈಟ್: www.smilefoundationindia ಸಂಪರ್ಕಿಸಿ ಎಂದರು.

## ‘ಥೋಟಾ ಕ್ಯಾನ್ವಾಸ್’ ನೃತ್ಯೋತ್ಸವ- ’ಅಬ್‌ಸ್ಟ್ರಾಟಿಕ್ಸ್’ ಅರ್ಪಣೆ


**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8:** ಬೆಂಗಳೂರಿನಲ್ಲಿ ಹಲವು ವರ್ಷಗಳಿಂದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ’ಅಬ್‌ಸ್ಟ್ರಾಟಿಕ್ಸ್’ (ಂಥಣಡಿಚಿಣುಥಿ) ಸಂಸ್ಥೆಯು ಉದಯೋನ್ಮುಖ ನೃತ್ಯಕಲಾವಿದರಿಗೆ ಉತ್ತಮ ವೇದಿಕೆಯನ್ನು ಒದಗಿಸುವ ಸದಾಶಯ ಹೊಂದಿದೆ. ಭರವಸೆಯ ಕಲಾವಿದರಲ್ಲಿ ಅಡಗಿರುವ ಸುಪ್ತಪ್ರತಿಭೆಗಳನ್ನು ಪೋಷಿಸುವ ಉದ್ದೇಶದಿಂದ ಕಳೆದ ಮೂರುವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಸೃಜನಶೀಲತೆ ಮತ್ತು ಕಲಾತ್ಮಕ ಅಭಿವ್ಯಕ್ತಿಗೆ ಒತ್ತು ನೀಡುವ ಈ ವಿಶಿಷ್ಟ ಮಹೋತ್ಸವ ಇದೇ ತಿಂಗಳ 10 ರಂದು ಮಲ್ಲೇಶ್ವರದ ಸೇವಾಸದನದಲ್ಲಿ ಸಂಜೆ 5. 30 ಕ್ಕೆ ನಡೆಯಲಿದೆ. ಪ್ರತಿವರ್ಷ ಈ ಸಂದರ್ಭದಲ್ಲಿ ಈ ವೇದಿಕೆಯು ಉದಯೋನ್ಮುಖ ನೃತ್ಯ ಕಲಾವಿದರು ಮತ್ತು ನೃತ್ಯ ಸಂಯೋಜಕರನ್ನು ಒಂದೆಡೆ ಸೇರಿಸುವ ಹಾಗೂ ಜಗತ್ತಿನ ಸಾರ್ವತ್ರಿಕ ಮಾಧ್ಯಮವಾದ ನೃತ್ಯದ ಮೂಲಕ ನೃತ್ಯರೂಪಕಗಳಿಗೆ ಜೀವ ಚೈತನ್ಯ ತುಂಬುವ ರೋಮಾಂಚಕ ಅವಕಾಶವೊಂದನ್ನು ಕಲ್ಪಿಸಿಕೊಡುತ್ತದೆ.

ಈ ಮಹೋತ್ಸವದ ಹಿಂದಿನ ಶಕ್ತಿ ಅಬ್‌ಸ್ಟ್ರಾಟಿಕ್ಸ್‌ನ ಸ್ಥಾಪಕರು ಮತ್ತು ಕಲಾತ್ಮಕ ನಿರ್ದೇಶಕರಾದ ಕಾರ್ತಿಕ್ ತಂತ್ರಿ ಸಮಕಾಲೀನ ನೃತ್ಯದ ನುರಿತ ಕಲಾವಿದರು. ಅವರ ದೂರದೃಷ್ಟಿಯ ಪರಿಕಲ್ಪನೆಯಲ್ಲಿ ರೂಪುಗೊಂಡಿರುವ ’ಕ್ಯಾನ್ವಾಸ್ ’ ಎಂಬುದು ಉದಯೋನ್ಮುಖರಿಗೆ ಅತ್ಯಂತ ಸ್ಫೂರ್ತಿದಾಯಕ ನೃತ್ಯೋತ್ಸವ . ನೃತ್ಯವನ್ನು ಕಥೆ ಹೇಳುವ, ಸಾಂಸ್ಕೃತಿಕ ವಿನಿಮಯ ಮತ್ತು ಮಾನವ ಸಂಬಂಧಗಳನ್ನು ಬೆಸೆಯುವ ಪ್ರಬಲ ಮಾಧ್ಯಮವೆಂಬುದು ಇವರ ನಂಬಿಕೆ.

**–ವೈ.ಕೆ.ಸಂಧ್ಯಾ ಶರ್ಮ**



## ಕಾಂಗ್ರೆಸ್ ಬಿಜೆಪಿ ಪಕ್ಷವನ್ನು ತೊರೆದು ಜೆಡಿಎಸ್ ಸೇರ್ಪಡೆಯಾದ ಹನೂರು ಕ್ಷೇತ್ರದ ಪ್ರಭಾವಿ ಮುಖಂಡರುಗಳು



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ ಹನೂರು ಮೇ 8:–** ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳ ವಿವಿಧ ಗ್ರಾಮಗಳ ಪ್ರಭಾವಿ ಮುಖಂಡರುಗಳು ಕಾಂಗ್ರೆಸ್ ಬಿಜೆಪಿ ಪಕ್ಷಗಳನ್ನು ತೊರೆದು ಶಾಸಕ ಎಂ ಆರ್ ಮಂಜುನಾಥ್ ರವರ ಸಮ್ಮುಖದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಜೆಡಿಎಸ್ ಪಕ್ಷದ ಕಚೇರಿ ಮುಂದೆ ಆಯೋಜನೆ ಮಾಡಲಾಗಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಶಾಸಕ ಎಂಆರ್ ಮಂಜುನಾಥ್ ರವರು ಮಾತನಾಡಿ ನನ್ನ ರಾಜಕೀಯ ಜೀವನದ ಸುದಿನ ಇವತ್ತು ಬಹಳ ಅನುಭವಿ ಪ್ರಭಾವಿ ಕಾರ್ಯಕರ್ತರುಗಳು ಕಾಂಗ್ರೆಸ್ ಬಿಜೆಪಿ ಪಕ್ಷವನ್ನು ತೊರೆದು ನಮ್ಮ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದು ನನಗೆ ತುಂಬಾ ಸಂತೋಷವಾಗಿದೆ.

ನಾವೆಲ್ಲರೂ ಮುಂದಿನ ಪೀಳಿಗೆಗೆ ಒಂದು ಉತ್ತಮ ಸಮಾಜ ನಿರ್ಮಾಣ ಮಾಡುವುದೇ ನಮ್ಮ ಗುರಿಯಾಗಬೇಕು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ನಾನು ಕೆಲಸ ಮಾಡುತ್ತೇನೆ.ಮುಂದೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ನಡೆಯಲಿದೆ ಇವತ್ತು ಸೇರ್ಪಡೆಯಾಗಿರುವ ಎಲ್ಲಾ ಕಾರ್ಯಕರ್ತರಿಂದ ನನಗೆ ಆನೆ ಬಲ ಬಂದಂತಾಗಿದೆ. ನಾವೆಲ್ಲ ಒಟ್ಟಾರೆ ಸೇರಿಕೊಂಡು ಅಭಿವೃದ್ಧಿ ಮಾಡುವ ಕೆಲಸ ಮಾಡೋಣ ಎಂದರು.

ಹನೂರು ವಿಧಾನಸಭಾ ಕ್ಷೇತ್ರದ ಹುತ್ತೂರು ಗ್ರಾಮದ ನಾಯಕ ಸಮುದಾಯದ ಪುಟ್ಟ ವೀರ ನಾಯಕ, ಕೌದಳ್ಳಿ ಗ್ರಾಮದ ರಾಚಪ್ಪ ನಿವೃತ್ತ ಉಪನಿರ್ದೇಶಕರು. ಹುತ್ತೂರು ಬಾಲಕೃಷ್ಣ ಮಾಜಿ ಎಪಿಎಂಸಿ ಅಧ್ಯಕ್ಷರು. ಕೌದಲ್ಲಿ ಮಾಜಿ ಅಧ್ಯಕ್ಷರು ನಾಗರಾಜು, ಹುತ್ತೂರು,ಮಾಜಿ ಅಧ್ಯಕ್ಷ.ಬಾಲು ರಾಮಾಂಜಯ್ಯ ಕೌದಲ್ಲಿ, ರಾಚಪ್ಪಾಜಿ ಕೌದಲ್ಲಿ, ವೆಂಕಟ ಮಾದು ಹುತ್ತೂರು, ಶಾಗ್ಯ ಕೆಂಚಪ್ಪ,ಗಿ ದೊಡ್ಡಿ ನಾಗಣ್ಣ.ರಂಗಸ್ವಾಮಿ ಹುತ್ತೂರು. ಮುತ್ತುರಾಜು ಕೌದಲ್ಲಿ,ಸಿದ್ದೇಶ್,ಇನ್ನು ಮುಂತಾದ ಮುಖಂಡರುಗಳು ಕಾಂಗ್ರೆಸ್ ಬಿಜೆಪಿ ಪಕ್ಷಗಳನ್ನು ತೊರೆದು ಹಾರ ಶಾಲು ಹಾಕಿಸಿಕೊಂಡು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಬಾಬಣ್ಣ,ರಾಜಶೇಖರ್ ಮೂರ್ತಿ, ಸೀನಣ್ಣ, ತಿರುಪತಿ ನಾಯಕ್, ವಸಂತ ಕುಮಾರ್, ಗುರುಮಲ್ಲಪ್ಪ, ರಾಜು ಗೌಡ, ಮಹಾದೇವ, ವಿಜಯ್ ಕುಮಾರ್, ತಂಗವೇಲು, ಶಿವಪ್ಪ, ಸಿಂಗನಲ್ಲೂರು ರಾಜಣ್ಣ, ಗೋಪಾಲ್ ನಾಯಕ, ನಬಿ, ಚಿನ್ನಸ್ವಾಮಿ, ಹುಚ್ಚೇ ಗೌಡ, ನಟರಾಜ್ ಗೌಡ,ಸಿದ್ದರಾಜು, ಬಸವರಾಜು ಮಾಲಯ್ಯ, ಮಣಿ, ಅಸ್ಲಾಂ, ರಂಗಶೆಟ್ಟಿ, ಮಹಾದೇವ,ಜೆಸ್ಸಿಮ್,ಇನ್ನು ಹಲವಾರು ಜೆಡಿಎಸ್ ಪಕ್ಷದ ಮುಖಂಡರುಗಳು ಇದ್ದರು.

“ 70 ವರ್ಷದಿಂದ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಿದ್ದೇವೆ ನಿಷ್ಠಾವಂತರಾಗಿ ಸೇವೆ ಸಲ್ಲಿಸಿದ್ದೇವೆ ನಮಗೆ ಬೆಲೆ ಸಿಗದ ಕಾರಣ ಹನೂರು ಕಾಂಗ್ರೆಸ್ ನಲ್ಲಿ ನಿಷ್ಠಾವಂತರನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಪಕ್ಷಕ್ಕೆ ಅರ್ಹತೆ ಇಲ್ಲ ಆಗಾಗಿ ನಾವೆಲ್ಲ ಬೇಸತ್ತು ಇಂದು ಶಾಸಕರ ಸೇವೆ ಅಭಿವೃದ್ಧಿ ಕಾರ್ಯವನ್ನು ಬೆಂಬಲಿಸಿ ಅವರು ಎಲ್ಲರಲ್ಲೂ ಸಾಮಾನ್ಯರಂತೆ ಪ್ರೀತಿ ವಿಸ್ವಾಸ ತೋರುತ್ತ ಎಲ್ಲರನ್ನು ಒಗ್ಗೂಡಿಸಿಕೊಂಡು ಕೊಂಡೋಯ್ಯುತ್ತಿರುವ ಶಾಸಕ ಎಂ ಆರ್ ಮಂಜುನಾಥ್ ರವರ ಜೊತೆ ನಾವೆಲ್ಲ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ ಯಾಗಿದ್ದೇವೆ. ಯಾವ ಆಸೆ ಆಮಿಷಗಳಿಲ್ಲದೆ ಪ್ರಾಮಾಣಿಕವಾಗಿ ನಾವೆಲ್ಲ ಅವರ ಜೊತೆ ದುಡಿಯುತ್ತೇವೆ ನೀವು ನಮ್ಮ ಜೊತೆ ಈಗೆ ಇರಿ. ಮುಂದಿನ ದಿನಗಳಲ್ಲಿ ನಾವೆಲ್ಲರೂ ಒಟ್ಟಾಗಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸೋಣ ಶಾಸಕರ ಕೈ ಬಲ ಪಡಿಸೋಣ

। **ನಾಗರಾಜು,** ಕೌದಳ್ಳಿ ಗ್ರಾಪಂ ಮಾಜಿ ಅಧ್ಯಕ್ಷರು

“ ಹಲವಾರು ವರ್ಷಗಳಿಂದ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳಲ್ಲಿ ಅಪ್ಪಟ ಕಾರ್ಯಕರ್ತರಾಗಿ ಕೆಲಸ ಮಾಡಿ ಇದೀಗ ನಮ್ಮ ಕ್ಷೇತ್ರದ ಶಾಸಕ ಎಂ ಆರ್ ಮಂಜುನಾಥ್ ರವರ ಅಭಿವೃದ್ಧಿ ಕೆಲಸಗಳನ್ನು ನೋಡಿ ಇಂದು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ ಹಾಗುತ್ತಿರುವುದು ತುಂಬಾ ಒಳ್ಳೆಯ ಬೆಳವಣಿಗೆ ಇನ್ನಷ್ಟು ನಮ್ಮ ಕ್ಷೇತ್ರದ ಸಮಗ್ರ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಶಾಸಕ ಎಂ ಆರ್ ಮಂಜುನಾಥ್ ರವರಿಗೆ ಬಲ ತುಂಬಲು ಇಂದು ಪ್ರಭಾವಿ ಮುಖಂಡರುಗಳು ಸೇರ್ಪಡೆ ಹಾಗಿದ್ದರೆ. ಶಾಸಕರು ಹೊಸ ಮುಖಂಡರುಗಳು ಕಾರ್ಯಕರ್ತರು ಸೇರ್ಪಡೆ ಹಾಗಿದ್ದರೆ ಹಳೆ ಮುಖಂಡರುಗಳನ್ನು ಕೈ ಬಿಟ್ಟು ಬಿಡುತ್ತಾರೆ ಎಂದು ತಿಳಿದುಕೊಳ್ಳಬೇಡಿ. ನಮ್ಮ ಶಾಸಕರು ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುವ ಸಮಾನ ಮನಸ್ಕರು ನಮ್ಮ ಮಂಜಣ್ಣ.ನಾವೆಲ್ಲ ಜೊತೆ ಜೊತೆಯಾಗಿ ನಿಂತು ನಮ್ಮ ಕ್ಷೇತ್ರದ ಅಭಿವೃದ್ಧಿ ಪರವಾಗಿ ನಿಲ್ಲೋಣ.

। **ಮಹಾದೇವ ಪ್ರಸಾದ್,** ಉದ್ದನೂರು ಚಾಮುಲ್ ಹಾಲು ಒಕ್ಕೂಟದ ನಿರ್ದೇಶಕ

## ಮೊದಲನೇ ಪುಟದಿಂದ..

### ವೈದ್ಯ ಆತ್ಮಹತ್ಯೆ ಮಾಡಿಕೊಂಡ ಬೆನ್ನಲ್ಲೇ ನೇಣಿಗೆ ಶರಣಾದ ನರ್ಸ್: ಅಕ್ರಮ ಸಂಬಂಧ ಶಂಕೆ

ನವೋದಯ ಆಸ್ಪತ್ರೆಯ ನರ್ಸ್ ಸರಸ್ವತಿ (45) ನೇಣಿಗೆ ಶರಣಾದ ನರ್ಸ್. 2 ದಿನಗಳ ಹಿಂದೆ ಕೌಟುಂಬಿಕ ಕಲಹದಿಂದ ಕನಕಪುರ ನವೋದಯ ಆಸ್ಪತ್ರೆ ವೈದ್ಯ ಡಾ.ಚೇತನ್ ಟೆಂಕರ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಡಾ.ಚೇತನ್ ಅವರ ಆಸ್ಪತ್ರೆಯಲ್ಲಿ ಸಾಕಷ್ಟು ವರ್ಷಗಳಿಂದ ನರ್ಸ್ ಸರಸ್ವತಿ ಕೆಲಸ ಮಾಡಿಕೊಂಡಿದ್ದರು. ಮೊನ್ನೆ ಮನೆಯಲ್ಲಿ ಜಗಳ ಮಾಡಿಕೊಂಡು ವೈದ್ಯರು ನೇಣಿಗೆ ಶರಣಾಗಿದ್ದರು.

ವೈದ್ಯ ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆ ನರ್ಸ್ ಕೂಡಾ ಆತ್ಮಹತ್ಯೆಗೆ ಶರಣಾಗಿದ್ದು, ಸಾಕಷ್ಟು ಅನುಮಾನಗಳಿಗೆ ಕಾರಣವಾಗಿದೆ. ಡಾಕ್ಟರ್ ಜೊತೆ ನರ್ಸ್‌ಗೆ ಅಕ್ರಮ ಸಂಬಂಧ ಇತ್ತು ಎನ್ನಲಾಗಿದೆ. ಈ ಸಂಬಂಧ ಕನಕಪುರ ಟೌನ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

### ಆ್ಯಕ್ಸಲ್ ತುಂಡಾಗಿ ಸಾರಿಗೆ ಬಸ್ ಪಲ್ಟಿ ವಿದ್ಯಾರ್ಥಿ ಸಾವು, 20ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರ

**ಕಾರುಗಳ ನಡುವೆ ಡಿಕ್ಕಿ: ಇಬ್ಬರು ಸಾವು:** ದಾವಣಗೆರೆ ನಗರದ ಶಾಮನೂರು ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ಕಾರುಗಳ ನಡುವೆ ಅಪಘಾತ ಸಂಭವಿಸಿ ಇಬ್ಬರು ಯುವಕರು ಸಾವನ್ನಪ್ಪಿದ್ದಾರೆ. ಮೃತರನ್ನು ಗೌತಮ್ ( 29) ಮನೋಜ್ (29) ಎಂದು ಗುರುತಿಸಲಾಗಿದೆ. ಇಬ್ಬರು ಮದುವೆಯೊಂದಕ್ಕೆ ಹೋಗಿ ವಾಪಸ್ ಆಗುತ್ತಿದ್ದರು. ಈ ವೇಳೆ ಈ ದುರ್ಘಟನೆ ನಡೆದಿದೆ. ಅತಿ ವೇಗವೇ ಈ ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ಅಪಘಾತದ ತೀವ್ರತೆಗೆ ಎರಡು ಕಾರುಗಳು ಸಂಪೂರ್ಣ ಜಖಂಗೊಂಡಿವೆ. ಸ್ಥಳಕ್ಕೆ ದಾವಣಗೆರೆ ದಕ್ಷಿಣ ಸಂಚಾರಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



# ಕ್ರೀಡಾ ಸಾಧಕರಿಗೆ ಶೇ 2ರಷ್ಟು ಮೀಸಲಾತಿ, ರಾಜ್ಯದಲ್ಲಿ ಪ್ರತ್ಯೇಕ ಶಿಕ್ಷಣ ನೀತಿ ಜಾರಿಗೆ ಸಚಿವ ಸಂಪುಟ ಅಸ್ತು

**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8:** ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ರಾಜ್ಯದ ಸಿವಿಲ್ ಸೇವೆಗಳಲ್ಲಿ ಶೇ 2 ರಷ್ಟು ಮೀಸಲಾತಿ ಕಲ್ಪಿಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸಚಿವ ಸಂಪುಟ ಸಭೆ ಕೈಗೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್. ಕೆ. ಪಾಟೀಲ್, ಕ್ರೀಡಾ ಮೀಸಲಾತಿ ಕಲ್ಪಿಸಲು "ಕರ್ನಾಟಕ ನಾಗರಿಕ ಸೇವಾ ತಿದ್ದುಪಡಿ ನಿಯಮಗಳು 2026" ವಿಧೇಯಕ್ಕೆ ಅನುಮೋದನೆ ನೀಡಲಾಗಿದೆ ಎಂದರು. ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿ ಬದಲಿಗೆ ರಾಜ್ಯದಲ್ಲಿ ಪ್ರತ್ಯೇಕ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಕುರಿತು ರಾಜ್ಯ ಶಿಕ್ಷಣ ನೀತಿ ಆಯೋಗ ಸಲ್ಲಿಸಿರುವ ಅಂತಿಮ ವರದಿಯನ್ನು ಜಾರಿಗೆ ತರಲು ಸಂಪುಟ ಸಮ್ಮತಿಸಿದೆ. ಕೇಂದ್ರ ಸರ್ಕಾರದ ಶಿಕ್ಷಣ ನೀತಿಗೆ ಸೆಡ್ಡು ಹೊಡೆದಿರುವ ರಾಜ್ಯ ಸರ್ಕಾರ, ಪ್ರತ್ಯೇಕ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಮುಂದಾಗಿದೆ.

ಮೈಸೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 400 ಹಾಸಿಗೆ ಸಾಮರ್ಥ್ಯದಿಂದ 600 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು 180 ಕೋಟಿ ರೂ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಸಂಪುಟ ಸಮ್ಮತಿಸಿದೆ. ಈ ಮೂಲಕ ಮೈಸೂರು ಭಾಗದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಕಾರ್ಯಚಟುವಟಿಕೆಯನ್ನು ವಿಸ್ತರಿಸಲು ಕಾರ್ಯೋನ್ಮುಖವಾಗಿದೆ.

ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಮತ್ತು ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ "ಇಮ್ಮರ್ಸಿಬಲ್ ರೂಂ ಮತ್ತು ಡಿಜಿಟಲ್ ಮೃಗಾಲಯ ಮಾರ್ಗದರ್ಶಿ ಯೋಜನೆಯನ್ನು ಸಾರ್ವಜನಿಕ, ಖಾಸಗಿ ಸಹಭಾಗಿತ್ವದಡಿ ಅನುಕ್ರಮವಾಗಿ 44.62 ಮತ್ತು 35.22 ಕೋಟಿ ರೂ ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ. ವಿಶೇಷವಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ "ಸಾರ್ವಜನಿಕ ಮತ್ಸ್ಯಾಗಾರ ಅಭಿವೃದ್ಧಿ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ 30 ವರ್ಷಗಳ ಅವಧಿಗೆ 144.44 ಕೋಟಿ ರೂ ಮೊತ್ತದಲ್ಲಿ ಕಾರ್ಯಗತಗೊಳಿಸಲು ಸಮ್ಮತಿಸಿದೆ.

ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ತಿದ್ದುಪಡಿ ವಿಧೇಯಕ 2026ಕ್ಕೆ ಸಂಪುಟ ಅನುಮೋದನೆ ನೀಡಿದ್ದು, ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ವಿಧೇಯಕ ಮಂಡಿಸಲು ತೀರ್ಮಾನಿಸಲಾಗಿದೆ.

## ತುಮಕೂರು ಜಿಲ್ಲೆಯಲ್ಲಿ ಮುಂದುವರೆದ ನವಿಲುಗಳ ಸರಣಿ ಸಾವು



**ಸಂಜೆ ಎಕ್ಸ್‌ಪ್ರೆಸ್, ತುಮಕೂರು,ಮೇ 8–** ಜಿಲ್ಲೆಯಲ್ಲಿ ನವಿಲುಗಳ ಸರಣಿ ಸಾವು ಮುಂದುವರೆದಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.ತಾಲ್ಲೂಕಿನ ಕೋಳಿಹಳ್ಳಿ ಅರಣ್ಯ ಪ್ರದೇಶದಲ್ಲಿ ಆರಂಭವಾದ ನವಿಲುಗಳ ಸಾವು ಇದೀಗ ದೇವರಾಯನದುರ್ಗ ತಪ್ಪಲಿನ ದುರ್ಗದಹಳ್ಳಿ, ಹಿರೇಹಳ್ಳಿ ಸಮೀಪದ ಕೃಷಿ ವಿಜ್ಞಾನ ಕೇಂದ್ರದ ಹಿಂಭಾಗ ಕೆಸರುಮಡು, ಗೂಳರಿವೆ ಹಾಗೂ ಕುಣಿಗಲ್ ಸ್ಟಡ್ ಫಾರಂ ಸುತ್ತಮುತ್ತಲಿಗೂ ವ್ಯಾಪಿಸಿರುವುದು ಬೆಳಕಿಗೆ ಬಂದಿದೆ.

ಜಿಲ್ಲೆಯಲ್ಲಿ ಇದುವರೆಗೂ 54 ನವಿಲುಗಳು ಸಾವನ್ನಪ್ಪಿರುವುದು ತಿಳಿದುಬಂದಿದೆ.ಏ.16 ರಂದು ಕೋಳಿಹಳ್ಳಿ ಸುತ್ತಮುತ್ತ 45ಕ್ಕೂ ಹೆಚ್ಚು ನವಿಲುಗಳು ಅನುಮಾನಸ್ಪದವಾಗಿ ಮೃತಪಟ್ಟಿದ್ದವು. ಮೃತ ನವಿಲುಗಳ ಮಾದರಿಯನ್ನು ಪರೀಕ್ಷೆಗಾಗಿ ಬೂಪಾಲನ್‌ನ ಅಂತಾರಾಷ್ಟ್ರೀಯ ಪ್ರಯೋಗಲಾಯಕ್ಕೆ ಕಳುಹಿಸಲಾಗಿತ್ತು. ವರದಿಯಲ್ಲಿ ನವಿಲುಗಳ ಸಾವಿಗೆ ಎಚ್5ಎನ್1 ಹಕ್ಕಿಜ್ವರ ಕಾರಣ ಎಂಬುದು ದೃಢಪಟ್ಟಿತ್ತು.

ಇದರ ಬೆನ್ನಲ್ಲೇ ಜಿಲ್ಲಾಡಳಿತ ಕೂಡಲೇ ಕ್ರಮ ಕೈಗೊಂಡು ಕೋಳಿಹಳ್ಳಿ ಸುತ್ತಮುತ್ತ 10 ಕಿ.ಮೀ. ವ್ಯಾಪ್ತಿಯಲ್ಲಿ ತೀವ್ರ ನಿಗಾ ಪ್ರದೇಶವೆಂದು ಘೋಷಿಸಿ ತುರ್ತು ಕ್ರಮ ಕೈಗೊಂಡಿತ್ತು.ಅರಣ್ಯ ಇಲಾಖೆ, ಪಶುಪಾಲನಾ ಇಲಾಖೆ ಹಾಗೂ ಆರೋಗ್ಯ ಇಲಾಖೆ, ಕಂದಾಯ ಇಲಾಖೆ, ಸ್ಥಳೀಯ ಗ್ರಾಮಪಂಚಾಯಿತಿಗಳನ್ನೊಳಗೊಂಡು ತುರ್ತು ಸ್ಪಂದನಾ ತಂಡವನ್ನು ರಚಿಸಲಾಗಿದ್ದು, ಸಾರ್ವಜನಿಕರು ಸತ್ತ ಪ್ರಾಣಿಗಳನ್ನು ಮುಟ್ಟಬಾರದು ಹಾಗೂ ಕೋಳಿಮಾಂಸವನ್ನು ಚೆನ್ನಾಗಿ ಬೇಯಿಸಿ ಮಾತ್ರ ಸೇವಿಸಬೇಕು ಎಂದು ಎಚ್ಚರಿಕೆ ನೀಡಲಾಗಿತ್ತು.

ಕೋಳಿಫಾರಂ ಮಾಲೀಕರಿಗೂ ಕೂಡಾ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ವರಾಯನದುರ್ಗದ ದುರ್ಗದಹಳ್ಳಿ ಬಳಿ 2 ನವಿಲು, ಹಿರೇಹಳ್ಳಿಯ ಕೆವಿಕೆ ಬಳಿ 6, ಕೆಸರಮಡು ಬಳಿ 1 ನವಿಲು ಮೃತಪಟ್ಟಿರುವುದು ಪತ್ತೆಯಾಗಿದೆ. ಇದರ ಜೊತೆಗೆ ಕುಣಿಗಲ್ ಸ್ಟಡ್ ಫಾರಂ ಬಳಿಯೂ ಒಂದು ನವಿಲು ಮೃತಪಟ್ಟಿರುವುದು ವರದಿಯಾಗಿದೆ.

ಪಶುಪಾಲನಾ ಇಲಾಖೆ ಉಪನಿರ್ದೇಶಕ ಡಾ.ಶಿವಕುಮಾರ್ ಮಾತನಾಡಿ, ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ವೈಜ್ಞಾನಿಕ ರೀತಿಯಲ್ಲಿ ಮೃತ ನವಿಲುಗಳ ವಿಲೇವಾರಿ ಕ್ರಮ ಕೈಗೊಂಡಿದ್ದೇವೆ. ಸದ್ಯಕ್ಕೆ ಕೋಳಿ ಅಥವಾ ಇತರೆ ಸಾಕುಪ್ರಾಣಿಗಳನ್ನು ಸೋಂಕು ಕಂಡುಬಂದಿಲ್ಲ ಎಂದು ತಿಳಿಸಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ಎಚ್5ಎನ್1 ಸೋಂಕು ದೃಢಪಟ್ಟಿರುವುದು ಸ್ಥಳೀಯರಲ್ಲಿ ಆತಂಕ ಹೆಚ್ಚಿಸಿದ್ದು, ಜಿಲ್ಲಾಡಳಿತ ಈಗಾಗಲೇ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದ್ದು, ತುರ್ತು ಸಹಾಯವಾಣಿ ಸ್ಥಾಪಿಸಿದೆ.

## ಡಿಜಿಟಲ್ ಅರೆಸ್ಟ್ ನೆಪದಲ್ಲಿ 2.1 ಕೋಟಿ ಹಣ ಲಪಟಾಯಿಸಿದ ಸೈಬರ್ ವಂಚಕ

**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8:** ಎನ್‌ಐಎ ಅಧಿಕಾರಿ ಸೋಗಿನಲ್ಲಿ ನಗರದ ವೃದ್ಧೆಯೊಬ್ಬರಿಗೆ ಕರೆ ಮಾಡಿದ ಸೈಬರ್ ವಂಚಕ ಡಿಜಿಟಲ್ ಅರೆಸ್ಟ್ ಮೂಲಕ 2.1 ಕೋಟಿ ಹಣ ವರ್ಗಾಹಿಸಿಕೊಂಡಿರುವುದು ಬೆಳಕಿಗೆ ಬಂದಿದೆ.

ಜಯನಗರದ ನಿವಾಸಿಯಾಗಿರುವ 78 ವರ್ಷದ ವೃದ್ಧೆ ಹಾಗೂ ಪುತ್ರಿಗೆ ಏಪ್ರಿಲ್ 13 ರಂದು ವಾಟ್ಸಪ್ ಕರೆ ಮಾಡಿದ ಅಪರಿಚಿತ ವ್ಯಕ್ತಿ ಎನ್‌ಐಎ ಅಧಿಕಾರಿ ಪ್ರದೀಪ್ ಜಸ್ವಾಲ್ ಎಂದು ಪರಿಚಯಿಸಿಕೊಂಡು ನಿಮ ಡೆಬಿಟ್ ಕಾರ್ಡ್‌ನ್ನು ನಿಷೇಧಿತ ಪಿಎಫ್‌ಐ ಸಂಘಟನೆ ಸದಸ್ಯ ಬಳಸುತ್ತಿದ್ದಾನೆಂದು ಬೆದರಿಸಿದ್ದಾನೆ.

ಈ ಬಗ್ಗೆ ಯಾರಿಗೂ ಮಾಹಿತಿ ನೀಡಬಾರದು ಎಂದು ಎಚ್ಚರಿಸಿ, ಮಹಿಳೆಯ ಕುಟುಂಬ ಸದಸ್ಯರ ಗುರುತಿನ ದಾಖಲೆಗಳ ಪ್ರತಿಗಳನ್ನು ಪಡೆದುಕೊಂಡು ನಿಮ್ಮ ಮಗಳು ಈ ಪ್ರಕರಣದಲ್ಲಿದ್ದಾಳೆ ಎಂದುಪೊಲೀಸ್ ಠಾಣೆಯಂತೆ ಕಾಣುವ ಪ್ರದೇಶದಿಂದ ವಿಡಿಯೋ ಕಾಲ್ ಮಾಡಿ ನಂಬಿಸಿ ದ್ದಾನೆ.

ತದ ನಂತರದಲ್ಲಿ ನೀವು ತನಿಖೆಗೆ ಸಹಕರಿಸದಿದ್ದರೆ ಸಾರ್ವಜನಿಕವಾಗಿ ಬಂಧಿಸಲಾಗುವುದೆಂದು ಬೆದರಿಕೆ ಹಾಕಿ ಆರ್‌ಬಿಐ ಮಾರ್ಗಸೂಚಿಯಂತೆ ಹಣದ ವ್ಯವಹಾರಗಳ ಪರಿಶೀಲನೆ ಮಾಡಬೇಕಿದೆ ಎಂದು ಬ್ಯಾಂಕ್ ಖಾತೆ ವಿವರಗಳನ್ನು ಪಡೆದುಕೊಂಡು ಪರಿಶೀಲನೆ ಬಳಿಕ ಹಣ ಮರಳಿ ನೀಡಲಾಗುವುದೆಂದು ತಿಳಿಸಿದ್ದಾನೆ.

ವಂಚಕನ ಮಾತು ನಂಬಿದ ತಾಯಿ, ಮಗಳು ಅವರು ಹೇಳಿದ ಖಾತೆಗಳಿಗೆ ಹಣವನ್ನು ವರ್ಗಾಹಿಸಿರುವುದಲ್ಲದೇ ತಮ್ಮ ಬಳಿ ಇದ್ದ ಚಿನ್ನವನ್ನು ಸಹ ಅಡವಿಟ್ಟು ಹಣವನ್ನು ನೀಡಿದ್ದಾರೆ. ಒಟ್ಟಾರೆ ಏ.15 ರಿಂದ 20 ರವರೆಗೆ ಒಟ್ಟು 2.1 ಕೋಟಿ ಹಣವನ್ನು ಹಾಕಿದ್ದಾರೆ.

ಕೋಟ್ಯಾಂತರ ಹಣ ಪಡೆದುಕೊಂಡ ನಂತರವೂ ವಂಚಕ ಇನ್ನಷ್ಟು ಹಣ ಕೇಳಿದಾಗ ಅನುಮಾನಗೊಂಡು ವಿಚಾರಿಸಿದಾಗ ಸೈಬರ್ ವಂಚನೆಗೆ ಒಳಗಾಗಿರುವುದು ಗೊತ್ತಾಗಿದೆ. ತಕ್ಷಣ ಅವರು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುವ ಪೊಲೀಸರು ವಂಚಕರ ಪತ್ತೆಗೆ ಬಲೆ ಬೀಸಿದ್ದಾರೆ.

## ದಸರಾ ಅಂಬಾರಿ ಆನೆ ಅರ್ಜುನನ ಭವ್ಯ ಸ್ಮಾರಕ ಲೋಕಾರ್ಪಣೆ

**ಸಂಜೆ ಎಕ್ಸ್‌ಪ್ರೆಸ್, ಹಾಸನ,ಮೇ 8–** ನಾಡಹಬ್ಬ ಮೈಸೂರು ದಸರಾದಲ್ಲಿ 8 ಭಾರಿ ಚಿನ್ನದ ಅಂಬಾರಿ ಹೊತ್ತ ಕನ್ನಡಿಗರ ಅಚ್ಚುಮೆಚ್ಚಿನ ಆನೆ ಅರ್ಜುನನ ಭವ್ಯ ಸಾರಕವನ್ನು ಸಕಲೇಶಪುರ ತಾಲ್ಲೂಕಿನ ದಬ್ಬಳ್ಳಿ ಕಟ್ಟೆ ಅರಣ್ಯದಲ್ಲಿ ಪರಿಸರ ಸಚಿವ ಈಶ್ವರ್ ಖಂಡ್ರೆ ಲೋಕಾರ್ಪಣೆಗೊಳಿಸಿದರು.

2023ರ ಡಿಸೆಂಬರ್ 4ರಂದು ದಬ್ಬಳ್ಳಿ ಕಟ್ಟೆ ಮೀಸಲು ಅರಣ್ಯದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮದಗಜದೊಂದಿಗಿನ ಕಾದಾಟದಲ್ಲಿ ಅರ್ಜುನ(64) ವೀರಮರಣವನ್ನಪ್ಪಿದ್ದ. ಡಿಸೆಂಬರ್ 5ರಂದು ಆತ ಮೃತಪಟ್ಟ ಸ್ಥಳದಲ್ಲೇ ಅರಣ್ಯ ಇಲಾಖೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಿತ್ತು. ಸುಮಾರು ಎರಡೂವರೆ ವರ್ಷಗಳ ನಂತರ ಆತನ ಸಮಾಧಿಯ ಮೇಲೆಯೇ ನಿರ್ಮಿಸಲಾದ ಆಕರ್ಷಕ ಪ್ರತಿಕೃತಿ ಇದೀಗ ಲೋಕಾರ್ಪಣೆಯಾಗಿದೆ.

ಅರ್ಜುನನನ್ನು ಮಣ್ಣು ಮಾಡಿದ್ದ ಜಾಗದಲ್ಲೇ ಆತನ ನೆನಪನ್ನು ಚಿರಸ್ಥಾಯಿಯಾಗಿಸುವ ನಿಟ್ಟಿನಲ್ಲಿ ?ಬರ್ ಬಳಸಿ ಭವ್ಯ ಮೂರ್ತಿಯನ್ನು ನಿರ್ಮಿಸಲಾಗಿದೆ.10 ಅಡಿ ಎತ್ತರ ಹಾಗೂ 13 ಅಡಿ ಉದ್ದವಿರುವ ಈ ಮೂರ್ತಿ ಅರ್ಜುನನ ಮೂಲ ಸ್ವರೂಪವನ್ನೇ ಹೋಲುತ್ತದೆ. ಶಿಲ್ಪಿ ಧನಂಜಯ ಅವರು ಈ ಸುಂದರ ಮೂರ್ತಿಯನ್ನು ಕೆತ್ತಿದ್ದು, ನೋಡುಗರ ಕಣ್ಣಿಗೆ ಸಾಕ್ಷಾತ್ ಅರ್ಜುನನೇ ಮೇಲೆದ್ದು ನಿಂತಂತೆ ಭಾಸವಾಗುತ್ತದೆ.

ಅರ್ಜುನನ ಈ ಸುಂದರ ಮೂರ್ತಿಯನ್ನು ಶಿಲ್ಪಿಗಳು ಒಂದು ವರ್ಷದ ಹಿಂದೆಯೇ ಸಿದ್ಧಪಡಿಸಿದ್ದರು. ಆದರೆ ಸಾರಕ ನಿರ್ಮಾಣ ಸ್ಥಳದಲ್ಲಿ ಮೂಲಸೌಕರ್ಯಗಳ ಕೊರತೆ ಇದ್ದ ಕಾರಣ ಉದ್ಘಾಟನೆ ವಿಳಂಬವಾಗಿತ್ತು. ಇದೀಗ ಅಗತ್ಯ ಮೂಲಸೌಕರ್ಯ ಕಲ್ಪಿಸಿ ಅರ್ಜುನನ ಸಮಾಧಿ ಸ್ಥಳದಲ್ಲಿ ಸಾರಕವನ್ನು ಅಧಿಕೃತವಾಗಿ ಲೋಕಾರ್ಪಣೆ ಮಾಡಲಾಗಿದೆ.



ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಸಂಸದ ಶ್ರೀಯಸ್ ಪಟೇಲ್, ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಸಿಮೆಂಟ್ ಮಂಜು, ಸಿಸಿಎ? ಏಡುಕುಂಡಲ, ಡಿಸಿಎ? ಸೌರಭ್ ಕುಮಾರ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಉಪಸ್ಥಿತರಿದ್ದರು.

ಅರ್ಜುನನ ಸೇವೆ ಸರಣೀಯ: ದಸರಾದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತ ಹೆಗ್ಗಳಿಕೆ ಅರ್ಜುನನದ್ದು. 60ಕ್ಕೂ ಹೆಚ್ಚು ವರ್ಷ ಕಾಡಾನೆ ಸೆರೆ ಕಾರ್ಯಾಚರಣೆ, ದಸರಾ ಸೇರಿದಂತೆ ನಾಡಿನ ಸೇವೆಯಲ್ಲಿ ತೊಡಗಿದ್ದ ಅರ್ಜುನನ ಸಾರಕ ಇದೀಗ ಪ್ರವಾಸಿಗರು ಹಾಗೂ ಆತನ ಅಭಿಮಾನಿಗಳಿಗೆ ಭಾವನಾತಕ ತಾಣವಾಗಿ ರೂಪುಗೊಂಡಿದೆ.ಮುಂದಿನ ದಿನಗಳಲ್ಲಿ ಅರಣ್ಯ ಇಲಾಖೆ ಹಾಗೂ ಸ್ಥಳಿಯ ಆಡಳಿತ ಸಮನ್ವಯದೊಂದಿಗೆ ಸಾರ್ವಜನಿಕರಿಗೆ ಸಾರಕ ವೀಕ್ಷಣೆ ಅಗತ್ಯ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಸಚಿವರು ಭರವಸೆ ನೀಡಿದ್ದಾರೆ.

## ಯಡಿಯೂರಪ್ಪನವರ ಹೋರಾಟದ ಹಾದಿ ಯುವ ರಾಜಕಾರಣಿಗಳಿಗೆ ಪ್ರೇರಕ: ವಿಜಯೇಂದ್ರ

**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಹೋರಾಟ, ಪಾದಯಾತ್ರೆ,



ಪಕ್ಷವನ್ನು ಸದೃಢವಾಗಿ ಕಟ್ಟಿದ್ದು– ಇವೆಲ್ಲವೂ ನನ್ನನ್ನೂ ಸೇರಿ ಎಲ್ಲ ಇಂದಿನ ಯುವ ರಾಜಕಾರಣಿಗಳಿಗೆ ಪ್ರೇರಣೆ ನೀಡುವಂತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಚಿತ್ರದುರ್ಗದಲ್ಲಿ ಮಾತನಾಡಿದ ಅವರು, ಯಡಿಯೂರಪ್ಪನವರ ಪುರಪ್ರವೇಶ ಮತ್ತು ಅಭಿಮಾನೋತ್ಸವಕ್ಕೆ ರಾಜ್ಯದ ಮೂಲೆಮೂಲೆಗಳಿಂದ ಲಕ್ಷಾಂತರ ಜನರು ಭಾಗವಹಿಸುತ್ತಾರೆ. ರಾಜ ಕೀಯೇತರವಾಗಿ ಬಿಎಸ್‌ವೈ ಅಭಿಮಾನೋತ್ಸವವನ್ನು ಆಯೋಜಿಸಲಾಗುತ್ತಿದೆ. ಸಮಯದ ಅಭಾವದಿಂದ ಎಲ್ಲರನ್ನೂ ಭೇಟಿ ಮಾಡಲು ಸಾಧ್ಯವಾಗಿಲ್ಲ. ಸಾವಿರಾರು ಸ್ವಾಮೀಜಿಗಳು, ಲಕ್ಷಾಂತರ ಅಭಿಮಾನಿಗಳು ಭಾಗವಹಿಸುತ್ತಾರೆ. ಸ್ವಾಮೀಜಿಗಳ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಯಡಿಯೂರಪ್ಪ ಅವರೆಂದರೆ ಹೋರಾಟಗಾರರು. ಅವರು ನಗರಕ್ಕೆ ಸೀಮಿತವಾಗಿದ್ದ ಪಕ್ಷವು ಹಳ್ಳಿ ಹಳ್ಳಿಗೂ ವಿಸ್ತರಿಸಲು ಕಾರಣವಾದವರು. ಕಾಲಿಗೆ ಚಕ್ರ ಕಟ್ಟಿಕೊಂಡು ಪ್ರವಾಸ ಮಾಡಿ ಪಕ್ಷ ಸಂಘಟಿಸಿದವರು ಎಂದು ಪ್ರಶ್ನೆಗೆ ಉತ್ತರ ನೀಡಿದರು.

## ಹೆಣ್ಣು ಮಕ್ಕಳ ಮಾನಕ್ಕಿಂತಲೂ ಭ್ರಷ್ಟ ಅಧಿಕಾರಿಗಳ ರಕ್ಷಣೆಯೇ ಕಾಂಗ್ರೆಸ್ ಸರ್ಕಾರಕ್ಕೆ ಮುಖ್ಯವಾಯಿತೇ: ಆರ್. ಅಶೋಕ್

**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8:** ಲೈಂಗಿಕ ಹಗರಣದ ವಿಡಿಯೋ ಅಸಲಿ ಎಂದು ವರದಿ ಬಂದಿದ್ದರೂ, ಕಾಮುಕ ಅಧಿಕಾರಿಯನ್ನು ರಕ್ಷಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ನ್ಯಾಯದ ಮೇಲೆ ನಂಬಿಕೆ ಇಲ್ಲದಂತಾಗಿದೆ. ಪೊಲೀಸ್ ಮಹಾನಿರ್ದೇಶಕ ಶ್ರೇಣಿಯ ಅಧಿಕಾರಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯದ ಆರೋಪ ಕೇಳಿಬಂದಾಗ, ಅದನ್ನು ಗಂಭೀರವಾಗಿ ಪರಿಗಣಿಸಬೇಕಾದ ರಾಜ್ಯ ಸರ್ಕಾರ, ಇಂದು ಅವರ ಅಮಾನತು ಆದೇಶವನ್ನೇ ಹಿಂಪಡೆದು ರೆಡ್ ಕಾರ್ಪೆಟ್ ಸ್ವಾಗತ ನೀಡಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ನಿಮ್ಮ ಸರ್ಕಾರದ ಈ ನಡೆಯ ಹಿಂದಿನ ಮರ್ಮವೇನು? ಸಾಕ್ಷಿ ಇದ್ದರೂ ಸಲಾಮು ಹೊಡೆಯುತಿರುವುದೇಕೆ? ವಿಡಿಯೋ ಅಸಲಿ ಎಂದು ತಮ್ಮ ಸರ್ಕಾರವೇ ನೇಮಿಸಿದ ಸಮಿತಿ ವರದಿ ನೀಡಿದ ಮೇಲೂ ಆರೋಪಿತ ಅಧಿಕಾರಿಗೆ ಕ್ಲೀನ್ ಚಿಟ್ ಕೊಡುವ ಧಾವಂತವೇಕೆ? ಕಾನೂನಿಗಿಂತ ವ್ಯಕ್ತಿ ದೊಡ್ಡವರೇ? ನಿವೃತ್ತಿಯ ಹೊಸ್ತಿಲಲ್ಲಿರುವ ಅಧಿಕಾರಿಗೆ ಇಷ್ಟು ಆತುರವಾಗಿ 'ರಿಲೀಫ್' ನೀಡುವ ಮೂಲಕ ನೀವು ಸಂತ್ರಸ್ತ ಮಹಿಳೆಯರಿಗೆ ಯಾವ ಸಂದೇಶ ನೀಡುತ್ತಿದ್ದೀರಿ?

ಇದೇನಾ ಕಾಂಗ್ರೆಸ್ ಪಕ್ಷದ ನೈತಿಕತೆ? ಮಹಿಳಾ ಸಬಲೀಕರಣದ ಬಗ್ಗೆ ಗಂಟೆಗಟ್ಟಲೆ ಭಾಷಣ ಮಾಡುವ ನಿಮ್ಮ ಕಾಂಗ್ರೆಸ್‌ಎ ನಾಯಕರಿಗೆ, ಈ ನಿರ್ಧಾರದಿಂದ ಮಹಿಳೆಯರಿಗೆ ಮಾಡುತ್ತಿರುವ ಅವಮಾನ ಕಾಣುತ್ತಿಲ್ಲವೇ?

ಒಬ್ಬ ಅಧಿಕಾರಿಯನ್ನ ರಕ್ಷಿಸಲು ಕಾನೂನನ್ನೇ ಗಾಳಿಗೆ ತೂರುತ್ತಿರುವ ಈ ಸರ್ಕಾರಕ್ಕೆ ಜನತೆ ತಕ್ಕ ಪಾಠ ಕಲಿಸಲಿದ್ದಾರೆ. ಕಾಮುಕರಿಗೆ ರಕ್ಷಣೆ ನೀಡುವ ಈ ವಿಕೃತ ಮನಸ್ಥಿತಿಯನ್ನು ಕರ್ನಾಟಕದ ಜನತೆ ಕ್ಷಮಿಸುವುದಿಲ್ಲ.

ಅಧಿಕಾರಕ್ಕೆ ಕುತ್ತು ಬರುವ ಭಯವೋ ಅಥವಾ ಒಳಗುಟ್ಟಿನ ರಕ್ಷಣೆಯೋ? ಕಾಂಗ್ರೆಸ್ ಸರ್ಕಾರ ಉತ್ತರ ನೀಡಲಿ ಎಂದು ಆರ್. ಅಶೋಕ್ ಆಗ್ರಹಿಸಿದ್ದಾರೆ.

## ಜೂನ್ ಅಂತ್ಯದೊಳಗೆ "ಬೆಂಗಳೂರು-ಮುಂಬೈ" ಸೂಪರ್ ಫಾಸ್ಟ್ ರೈಲು ಸಂಚಾರ ಆರಂಭ

**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8:** ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಆಶಯದಂತೆ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕದ ಸಂಪರ್ಕ ಸೇತುವಾಗಿ "ಬೆಂಗಳೂರು–ಮುಂಬೈ ಸೂಪರ್ ಫಾಸ್ಟ್ ರೈಲು" ಜೂನ್ ಅಂತ್ಯದೊಳಗೆ ಸಂಚಾರ ಆರಂಭಿಸಲಿದೆ. ಅಲ್ಲದೆ, ನಂತರದ ದಿನಗಳಲ್ಲಿದು "ವಂದೇ ಭಾರತ್ ಸ್ಲೀಪರ್" ರೈಲಾಗಿ ಪರಿವರ್ತನೆಗೊಳ್ಳುವ ಸೂಚನೆ ಸಹ ಸಿಕ್ಕಿದೆ.

ಈ ಕುರಿತಂತೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ.

ರಾಜಧಾನಿ ಬೆಂಗಳೂರಿನಿಂದ ಪ್ರಮುಖ ವಾಣಿಜ್ಯ ನಗರಿ ಮುಂಬೈಗೆ ತೆರಳುವ ಈ "ಸೂಪರ್ ಫಾಸ್ಟ್" ರೈಲು ಮಧ್ಯ ಕರ್ನಾಟಕದ ತುಮಕೂರು, ದಾವಣಗೆರೆ, ಹಾವೇರಿ ಹಾಗೂ ಉತ್ತರ ಕರ್ನಾಟಕದ ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ಮಾರ್ಗದ ಮೂಲಕ ಸಂಚರಿಸಲಿದೆ. ತಮ್ಮ ಒತ್ತಾಸೆಯಂತೆ ಈ "ಬೆಂಗಳೂರು–ಮುಂಬೈ ಸೂಪರ್ ಫಾಸ್ಟ್" ರೈಲು ಸಂಚಾರವನ್ನು ಬಹುತೇಕ ಜೂನ್ ಅಂತ್ಯದೊಳಗೆ ಆರಂಭಿಸುವುದಾಗಿ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ವಂದೇ ಭಾರತ್ ಸ್ಲೀಪರ್ ಆಗಿಸಿ: ಇದೇ ವೇಳೆ ಸಚಿವ ಜೋಶಿ ಅವರು, ಮುಂದಿನ ದಿನಗಳಲ್ಲಿ ಬೆಂಗಳೂರು–ಮುಂಬೈ ನಡುವಿನ ಈ ಸೂಪರ್ ಫಾಸ್ಟ್ ರೈಲನ್ನು "ವಂದೇ ಭಾರತ್ ಸ್ಲೀಪರ್" ರೈಲಾಗಿ ಸಹ ಬದಲಾಯಿಸುವಂತೆ ಮನವಿ ಮಾಡಿದ್ದು, ಇದಕ್ಕೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸಮ್ಮತಿ ವ್ಯಕ್ತಪಡಿಸಿದ್ದಾರೆ.

ಇದರೊಂದಿಗೆ, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲ್ವೆ ನಿಲ್ದಾಣದ ನವೀಕರಣ ಮತ್ತು ಹೆಚ್ಚಿನ ಅತ್ಯಾಧುನಿಕ ಸೌಕರ್ಯಗಳನ್ನು ಕಲ್ಪಿಸುವ ಕುರಿತು ಸಚಿವ ಜೋಶಿ ಅವರು ರೈಲ್ವೆ ಸಚಿವರೊಂದಿಗೆ ಚರ್ಚಿಸಿದರು.

ಬೆಳಗಾವಿ ಸಂಸದರು, ಮಾಜಿ ಸಿಎಂ ಆದ ಜಗದೀಶ ಶೆಟ್ಟರ್ ಅವರ ಪ್ರಸ್ತಾವನೆಯಂತೆ ಲೋಕಾಪುರ–ಸವದತ್ತಿ–ಧಾರವಾಡ ರೈಲ್ವೆ ಮಾರ್ಗ ಪುನರ್ ಸರ್ವೆ ಬಗ್ಗೆ ಸಹ ಸಚಿವದ್ವಯರು ಸುದೀರ್ಘ ಚರ್ಚೆ ನಡೆಸಿದ್ದು, ಈ ಸಂಬಂಧ ರೈಲ್ವೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.



## ಸ್ವಾಮೀಜಿ ಮೃತಪಟ್ಟರೆ ವಿಮಾ ಪರಿಹಾರಕ್ಕೆ ಅರ್ಹ: ಹೈಕೋರ್ಟ್

**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8:** ಮಠ ಅಥವಾ ಮಠಾಧಿಪತಿಯ ಉತ್ತರಾಧಿಕಾರಿಯು ಕಾನೂನಾತ್ಮಕವಾಗಿ ಸ್ವಾಮೀಜಿಯ ಪ್ರತಿನಿಧಿಯಾಗಿರುವುದರಿಂದ ಅವರು ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದರೆ ವಿಮಾ ಪರಿಹಾರ ಕ್ಲೇಮು ಮಾಡಬಹುದು ಎಂದು ಈಚೆಗೆ ಹೈಕೋರ್ಟ್‌ನ ಕಲಬುರ್ಗಿ ಪೀಠ ಆದೇಶಿಸಿದೆ.

ಮಠಾಧಿಪತಿಯು ಸನ್ಯಾಸಿಯಾಗಿದ್ದು, ಮಠದ ಅಧ್ಯಾತ್ಮ ಮತ್ತು ನಿರ್ವಹಣಾ ಚಟುವಟಿಕೆಗಳನ್ನು ಮುಂದುವರಿಸುತ್ತಿದ್ದು, ಆ ಮೂಲಕ ಸಾಂಸ್ಥಿಕ ಅವಲಂಬನೆ ಸೃಷ್ಟಿಸಿದೆ ಎಂದು ನ್ಯಾಯಮೂರ್ತಿಗಳಾದ ಸೂರಜ್ ಗೋವಿಂದರಾಜ್ ಮತ್ತು ತ್ಯಾಗರಾಜ್ ಎನ್. ಇನವಲ್ಲಿ ಅವರ ವಿಭಾಗೀಯ ಪೀಠ ಹೇಳಿದೆ.

"ಮಠಾಧಿಪತಿ ಸ್ಥಾನವು ವೈಯಕ್ತಿಕ ಜೀವನೋಪಾಯಕ್ಕಾಗಿ ಸಂಪಾದಿಸುವ ಸಾಮಾನ್ಯ ವ್ಯಕ್ತಿಯ ಸ್ಥಾನವಲ್ಲ, ಬದಲಾಗಿ ಮಠದ ಕಾರ್ಯನಿರ್ವಹಣೆ, ಆಡಳಿತ ಮತ್ತು ನಿರಂತರತೆಯೊಂದಿಗೆ ಅವಿಭಾಜ್ಯ ಸಂಬಂಧ ಹೊಂದಿರುವ ಆಧ್ಯಾತ್ಮಿಕ ಮುಖ್ಯಸ್ಥನ ಸ್ಥಾನವಾಗಿದೆ" ಎಂದು ನ್ಯಾಯಾಲಯ ವ್ಯಾಖ್ಯಾನಿಸಿದೆ.

ಬಾಳೆ ಹೊನ್ನೂರು ಶ್ರೀಮದ್ ರಂಭಾಪುರ ವೀರಸಿಂಹಾಸನ ಮಠದ ಸುತ್ರೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು 2011ರ ಮೇ 20ರಂದು ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದರು. ಜೀಪು ಮತ್ತು ಟ್ರಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಸ್ವಾಮೀಜಿ ನಿಧನರಾಗಿದ್ದರು.

ಹೀಗಾಗಿ, ವಿಮೆ ಕ್ಲೇಮಿಗಾಗಿ ಮಠ ಅರ್ಜಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಸಿದ್ದ ಮೋಟಾರು ಅಪಘಾತ ಕ್ಲೇಮು ನ್ಯಾಯಮಂಡಳಿಯು ಸ್ವಾಮೀಜಿಯನ್ನು ಯಾರೂ ಅವಲಂಬಿಸಿಲ್ಲ ಎಂದು ಕ್ಲೇಮು ನಿರಾಕರಿಸಿತ್ತು. ಸನ್ಯಾಸಿಯಾದ ಸ್ವಾಮೀಜಿಯು ಪ್ರಾಪಂಚಿಕ ಸಂಬಂಧಗಳನ್ನು ಕಳೆದುಕೊಂಡಿರುವುದರಿಂದ ಯಾವುದೇ ಸಂಬಂಧ ಇರುವುದಿಲ್ಲ ಎಂದು ಮಠದ ಮುಖ್ಯಸ್ಥರ ನಿರ್ಗಮನದಿಂದ ಹಾನಿ ಮತ್ತು ಅಂತ್ಯ ಸಂಸ್ಕಾರದ ವೆಚ್ಚವಾಗಿ 1.2 ಲಕ್ಷ ನಿಗದಿಪಡಿಸಿತ್ತು.

ಈ ಆದೇಶವನ್ನು ಮಠವು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಕಂಪನಿಯು ಮಠದ ಉತ್ತರಾಧಕಾರಿಯನ್ನು ಅವಲಂಬಿತರು ಎಂದು ಪರಿಗಣಿಸಲಾಗದು. ಏಕೆಂದರೆ ಸಾವನ್ನಪ್ಪಿದ ಸ್ವಾಮೀಜಿಯು ಸ್ವತಂತ್ರವಾದ ಅಧ್ಯಾತ್ಮ ಜೀವನ ನಡೆಸಿದ್ದರು ಎಂದು ವಾದಿಸಿತ್ತು.

## ಲೋಕೋಪಯೋಗಿ ಇಲಾಖೆಯಲ್ಲಿ ಅನ್ಯ ಇಲಾಖೆಗಳ ಅಧಿಕಾರಿಗಳ ನಿಯೋಜನೆ ತಕ್ಷಣ ಸ್ಥಗಿತಗೊಳಿಸಿ : ಸಂಗಮೇಶ್ ಆಗ್ರಹ

**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8:** ಲೋಕೋಪಯೋಗಿ ಇಲಾಖೆಯಲ್ಲಿ ಈಗಾಗಲೇ ಅರ್ಹ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು ಹಾಗೂ ಮೇಲ್ದರ್ಜೆಯ ಅಧಿಕಾರಿಗಳು ಲಭ್ಯವಿದ್ದರೂ, ಇತರೆ ಇಲಾಖೆಗಳ ಅಧಿಕಾರಿಗಳನ್ನು ವರ್ಗಾವಣೆ, ನಿಯೋಜನೆ ಹಾಗೂ ಪ್ರಭಾರಿಯಾಗಿ ನಿಯೋಜಿಸುತ್ತಿರುವ ಕ್ರಮವನ್ನು ತಕ್ಷಣ ಸ್ಥಗಿತಗೊಳಿಸಿ, ಈಗಾಗಲೇ ನಿಯೋಜನೆಗೊಂಡಿರುವ ಅಧಿಕಾರಿಗಳನ್ನು ತಮ್ಮ ಮೂಲ ಇಲಾಖೆಗೆ ವಾಪಸ್ ಕಳುಹಿಸಬೇಕು ಎಂದು ಕರ್ನಾಟಕ ರಾಜ್ಯ ಯುವ ಸಮೂಹದ ರಾಜ್ಯಾಧ್ಯಕ್ಷರಾದ ಡಾ. ಎಸ್. ಸಂಗಮೇಶ್ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿರುವ ಅವರು, ಲೋಕೋಪಯೋಗಿ ಇಲಾಖೆಯೊಳಗಿನ ಅಧಿಕಾರಿಗಳ ಸೇವಾ ಹಕ್ಕು, ಹಿರಿತನ ಹಾಗೂ ಪದೋನ್ನತಿ ಅವಕಾಶಗಳಿಗೆ ಗಂಭೀರ ಅನ್ಯಾಯವಾಗುತ್ತಿದೆ. ಇಲಾಖೆಯಲ್ಲಿಯೇ ಅನೇಕ ಅರ್ಹ ಅಧಿಕಾರಿಗಳು ಸಮರ್ಪಕ ಹುದ್ದೆ ಹಂಚಿಕೆ ಮತ್ತು ಆಡಳಿತಾತ್ಮಕ ಜವಾಬ್ದಾರಿಗಳಿಲ್ಲದೇ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ, ಇತರೆ ಇಲಾಖೆಗಳ ಅಧಿಕಾರಿಗಳಿಗೆ ಆದ್ಯತೆ ನೀಡುತ್ತಿರುವುದು ಆಡಳಿತಾತ್ಮಕ ಅಸಮತೋಲನಕ್ಕೆ ಕಾರಣವಾಗಿದೆ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ಲೋಕೋಪಯೋಗಿ ಇಲಾಖೆ ಅಭಿಯಂತರರ ಸಂಘವು ಕೂಡ ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಿ, "ಪ್ರತಿ ಇಲಾಖೆಯ ಅಧಿಕಾರಿಗಳು ತಮ್ಮ ಮೂಲ ಇಲಾಖೆಯಲ್ಲಿಯೇ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ಲೋಕೋಪಯೋಗಿ ಇಲಾಖೆಗೆ ನಿಯೋಜನೆಗೊಂಡಿರುವ ಇತರೆ ಇಲಾಖೆಗಳ ಅಧಿಕಾರಿಗಳನ್ನು ಹಿಂಪಡೆಯಬೇಕು. ಇಲಾಖೆಯೊಳಗೆ ಅರ್ಹ ಅಧಿಕಾರಿಗಳು ಲಭ್ಯವಿರುವಾಗ ಹೊರಗಿನ ಇಲಾಖೆಗಳ ಅಧಿಕಾರಿಗಳಿಗೆ ಆದ್ಯತೆ ನೀಡುವುದು ಸಂವಿಧಾನಾತ್ಮಕ ಸಮಾನತೆ ಮತ್ತು ಸೇವಾ ನ್ಯಾಯತತ್ವಗಳಿಗೆ ವಿರುದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

ಸೇವಾ ನ್ಯಾಯಶಾಸ್ತ್ರ ಮತ್ತು ಆಡಳಿತಾತ್ಮಕ ಕಾನೂನು ತತ್ವಗಳ ಪ್ರಕಾರ ಡೆಪ್ಯುಟೇಶನ್ ಒಂದು ತಾತ್ಕಾಲಿಕ ಹಾಗೂ ಅಪವಾದಾತ್ಮಕ ವ್ಯವಸ್ಥೆಯಾಗಿದ್ದು, ಇಲಾಖೆಯೊಳಗಿನ ಅಧಿಕಾರಿಗಳ ಹಕ್ಕುಗಳಿಗೆ ಧಕ್ಕೆ ಉಂಟುಮಾಡುವ ರೀತಿಯಲ್ಲಿ ಬಳಸಲಾಗಬಾರದು. ಸುಪ್ರೀಂ ಕೋರ್ಟ್ ನ ಹಲವು ತೀರ್ಪುಗಳ ಪ್ರಕಾರ ಹೊರಗಿನ ಇಲಾಖೆಗಳ ಅಧಿಕಾರಿಗಳಿಗೆ ಅನಗತ್ಯ ಆದ್ಯತೆ ನೀಡುವುದು ಸೇವಾ ಸಮತೋಲನ ಹಾಗೂ ಆಡಳಿತಾತ್ಮಕ ನ್ಯಾಯತತ್ವಗಳಿಗೆ ವಿರುದ್ಧವಾಗಿದೆ ಎಂದು ತಿಳಿಸಿದ್ದಾರೆ.

ಸರ್ಕಾರ ಹೊರಗಿನ ಇಲಾಖೆಗಳ ಅಧಿಕಾರಿಗಳ ನಿಯೋಜನೆ ಸ್ಥಗಿತಗೊಳಿಸಬೇಕು,. ಈಗಾಗಲೇ ನಿಯೋಜನೆಗೊಂಡಿರುವ ಅಧಿಕಾರಿಗಳನ್ನು ಮೂಲ ಇಲಾಖೆಗೆ ಕಳುಹಿಸಬೇಕು. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಮೊದಲ ಆದ್ಯತೆ ನೀಡಬೇಕು. ಇಲಾಖೆಯ ಅಧಿಕಾರಿಗಳ ಸೇವಾ ಹಕ್ಕು, ಹಿರಿತನ ಹಾಗೂ ಆಡಳಿತಾತ್ಮಕ ಗೌರವವನ್ನು ಕಾಪಾಡುವುದು ಸರ್ಕಾರದ ಕಾನೂನುಬದ್ಧ ಮತ್ತು ಸಂವಿಧಾನಾತ್ಮಕ ಹೊಣೆಗಾರಿಕೆಯಾಗಿದೆ ಎಂದು ಡಾ. ಎಸ್. ಸಂಗಮೇಶ್ ತಿಳಿಸಿದ್ದಾರೆ.

## ವಾಣಿಜ್ಯ ಲಾಭದ ಕಾರಣ ಐಪಿಎಲ್ ಸ್ಥಳಾಂತರ : ಗೃಹ ಸಚಿವ ಪರಮೇಶ್ವರ್

**ಸಂಜೆ ಎಕ್ಸ್‌ಪ್ರೆಸ್, ಬೆಂಗಳೂರು, ಮೇ 8–** ಬಿಜೆಪಿಯವರು ಎಷ್ಟು ಜನರ ಬೆನ್ನಿಗೆ ಚೂರಿ ಹಾಕಿದ್ದಾರೆ ಎಂಬುದನ್ನು ಹೇಳದೆ, ಜಾಣ ಕುರುಡರಂತೆ ವರ್ತಿಸಿ, ಕಾಂಗ್ರೆಸ್ ಬಗ್ಗೆ ಟೀಕೆ ಮಾಡಲಾಗುತ್ತದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನಲ್ಲಿ ಜನಪರ ಸರ್ಕಾರ ರಚನೆಯಾಗಲು ಟಿವಿಕೆಗೆ ಬೆಂಬಲ ನೀಡುತ್ತಿದ್ದೇವೆ. ಚರಾಜಕೀಯ ಸಾಧ್ಯತೆಗಳ ಕಲೆ ಎಂದು ಹೇಳಿದರು.

ಶೃಂಗೇರಿ ವಿಧಾನಸಭಾ ಕ್ಷೇತ್ರದ ಚುನಾವಣೆಯ ಫಲಿತಾಂಶದ ಬಗ್ಗೆ ಕಾಂಗ್ರೆಸ್ ಟಿ.ಡಿ.ರಾಜೇಗೌಡ ಅವರು ಚುನಾವಣಾ ಆಯೋಗಕ್ಕೆ ದೂರು ನೀಡುವುದು, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವುದು ಸೇರಿದಂತೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಾರೆ. ಹೀಗಾಗಲೇ ಮತಪತ್ರಗಳನ್ನು ತಿರುಚಲಾಗಿದೆ ಎಂದು ರಾಜೇಗೌಡ ಖಾಸಗಿ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾಗಿದೆ. ವಿಚಾರಣೆ ನಡೆದು ಅದು ಸಾಬೀತಾದರೆ, ಫಲಿತಾಂಶ ಮತ್ತೆ ಬೇರೆ ರೀತಿಯಾಗುತ್ತದೆ ಎಂದು ಹೇಳಿದರು.

ಬೆಂಗಳೂರಿನಿಂದ ಐಪಿಎಲ್ ಪಂದ್ಯಾವಳಿ ಅಹಮದಾಬಾದ್‌ಗೆ ಸ್ಥಳಾಂತರಗೊಳ್ಳಲು ವಾಣಿಜ್ಯ ಲಾಭದ ಕಾರಣಗಳಿವೆ. ಭದ್ರತೆ ವಿಚಾರವಾಗಿ ಯಾವುದೇ ಆಕ್ಷೇಪಣೆಗಳಿಲ್ಲ. ಈವರೆಗೂ ನಡೆದಿರುವ 5 ಪಂದ್ಯಾವಳಿಗಳಿಗೆ ಭದ್ರತೆ ಸೇರಿದಂತೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಲಾಗಿದೆ.

ಐಪಿಎಲ್, ಆರ್‌ಸಿಬಿ ಕರ್ನಾಟಕ ಕ್ರಿಕೆಟ್ ಸಂಸ್ಥೆ ಸೇರಿದಂತೆ ಯಾವುದೇ ಸಂಸ್ಥೆಗಳು ಭದ್ರತೆಗೆ ಸಂಬಂಧಪಟ್ಟಂತೆ ಆಕ್ಷೇಪಣೆ? ವ್ಯಕ್ತಪಡಿಸಿಲ್ಲ ಎಂದರು.ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 33 ಸಾವಿರ ಆಸನ ವ್ಯವಸ್ಥೆಗಳಿವೆ. ಅದರಲ್ಲಿ ಅತೀ ಗಣ್ಯರು, ಪ್ರಾಯೋಜಕತ್ವದ



ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಆಟಗಾರರ ಕುಟುಂಬ ಸೇರಿ ಸುಮಾರು 7 ರಿಂದ 8 ಸಾವಿರ ಟಿಕೆಟ್‌ಗಳನ್ನು ಉಚಿತವಾಗಿ ಕೊಡಬೇಕಾಗುತ್ತದೆ. 25 ಸಾವಿರ ಟಿಕೆಟ್‌ಗಳು ಉಳಿಯುತ್ತಿದ್ದು, ವಾಣಿಜ್ಯೋದ್ದೇಶದಿಂದ ಇದು ಲಾಭವಾಗುವುದಿಲ್ಲ. ಅಹಮದಾಬಾದ್ ಕ್ರೀಡಾಂಗಣದಲ್ಲಿ ಒಂದು ಲಕ್ಷ ಆಸನ ವ್ಯವಸ್ಥೆ ಇದೆ. ಅಲ್ಲಿ ಪಂದ್ಯಾವಳಿ ನಡೆದರೆ ಲಾಭದಾಯಕ ಎಂಬ ಕಾರಣಕ್ಕೆ ಸ್ಥಳಾಂತರ ಮಾಡುತ್ತಿರುವುದಾಗಿ ಅನಧಿಕೃತವಾಗಿ ತಿಳಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಹಿಂದಿನ ಸರಣಿಯಲ್ಲಿ ಗೆದ್ದ ತಂಡದ ತವರಿನಲ್ಲಿ ಮೊದಲ ಹಾಗೂ ಪ್ರಸ್ತುತ ಸರಣಿಯಲ್ಲಿ ಫೈನಲ್‌ಗೆ ಬಂದ ತಂಡಕ್ಕೆ ಸೇರಿದ ಊರಿನಲ್ಲಿ ಕೊನೆಯ ಪಂದ್ಯಾವಳಿ ಆಯೋಜಿಸುವುದು ಬಿಸಿಸಿಐನ ನಿಯಮಾವಳಿಯಲ್ಲಿದೆ. ಆದರೆ ಈ ಬಾರಿ ಅದನ್ನು ಲಾಭದ ಕಾರಣಕ್ಕಾಗಿ ಮಾರ್ಪಾಡು ಮಾಡಿಕೊಂಡಿದ್ದಾರೆ ಎಂದರು.

ಡಿಜಿಪಿ ರಾಮಚಂದ್ರ ರಾವ್ ಅವರ ಅಮಾನತು ಹಿಂಪಡೆದಿರುವುದನ್ನ ಪರಮೇಶ್ವರ್ ಸಮರ್ಥಿಸಿಕೊಂಡರು. ಇಲ್ಲಿ ಸರಿ ತಪ್ಪುಗಳ ವಿಚಾರ ಪ್ರಮುಖ ಅಲ್ಲ. ರಾಮಚಂದ್ರ ರಾವ್ ಈ ತಿಂಗಳ ಕೊನೆಯಲ್ಲಿ ನಿವೃತ್ತರಾಗುತ್ತಿದ್ದಾರೆ. ಅವರಿಗೆ ಪಿಂಚಣಿ ಹಾಗೂ ಇತರ ಭತ್ಯೆಗಳು ಇತ್ಯರ್ಥವಾಗಬೇಕಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿರುವ ರಾಮಚಂದ್ರರಾವ್ ಮನವಿ ಮಾಡಿದ್ದರು. ತನಿಖೆಗೆ ತಾವು ಸಹಕರಿಸುತ್ತೇನೆ. ಅದರಲ್ಲಿ ಯಾವುದೇ ರೀತಿಯ ಅಭಿಪ್ರಾಯ ಬಂದರೂ ಅದನ್ನು ಒಪ್ಪಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅನುಮತಿಯೊಂದಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಮಾನತ್ತನ್ನು ಹಿಂಪಡೆದಿದೆ ಎಂದು ತಿಳಿಸಿದರು.

## ಸುಭಾಷಿತ

ಸೃಷ್ಟಿಯಲ್ಲಿ ಯಾವುದೇ ತಪ್ಪಿಲ್ಲ, ತಪ್ಪಿರುವುದು
ಎಲ್ಲಾ ನಮ್ಮ ದೃಷ್ಟಿಯಲ್ಲಿ.

–ಸುವಿಚಾರ

## ದಿನಕ್ಕೊಂದು ಕವಿತೆ

### ದಾಸ ಸಾಹಿತ್ಯ: ಕಲ್ಲೇಶ್ವರನ ಕೀರ್ತನೆಗಳು



ಶರಣು ಶರಣೆನ್ನಲೆ ಕರುಣದಲಿ ಕಾಪಾಡಯ್ಯ.
ಧರಣಿಯ ಶರಣು ಬಲುಗಟ್ಟಿ ಕಾಣಯ್ಯ.
ಫಲ ಪುಷ್ಪ ಪರಿಮಳವ ನಿನಗೊಪ್ಪಿಸುವೆನಯ್ಯ.
ಶರಣಾರ ನೆನೆವೇ ನಾನೆದ್ದು ಕಲ್ಲೇಶ್ವರ.

ಸೂರ್ಯನಿಲ್ಲದೆ ಹಗಲುಂಟೇನಯ್ಯ.
ಚಂದ್ರವಿಲ್ಲದೆ ರಾತ್ರಿ ಉಂಟೆನಯ್ಯ
ದಿವಟಿಕೆವಿಲ್ಲದೆ ಬೆಳಕು ಉಂಟೆನಯ್ಯ
ಶರಣರ ನೆನೆವೆ ನಾನೆದ್ದು ಕಲ್ಲೇಶ್ವರ

ಪರಶಿವನಿಂದ ಲಿಂಗಾವ ತೋರಿತಯ್ಯ
ಅಂಗೈ ಮೇಲೆ ಮಂಗಳ ಲಿಂಗವನಿಕ್ಕಿ ಪೂಜಿಸಿದೆನಯ್ಯ
ಗುರು ಲಘು ಒಪ್ಪುಗೆಯಿಂದ ಕರುಣಿಸಯ್ಯ
ಶರಣರ ನೆನ್ನೆವೆ ನಾನೆದ್ದು ಕಲ್ಲೇಶ್ವರ.

ಶ್ರೀ ಗುರು ಕೃಪೆ ದೋರಿಸಿದೊಡೆ ನಯ್ಯ
ಶ್ರೀ ಗುರು ಜಂಗಮಪ್ರಸಾದವಯ್ಯ
ತಾನೇ ಲಘು ಮಾಡೇನೋ ಸ್ವೀಕರಿಸಬಾರದೆನೆಯ್ಯ
ಶರಣರ ನೆನೆವೆ ನಾನೆದ್ದು ಕಲ್ಲೇಶ್ವರ.

ಅರಿವೇ ಗುರು ಆಚಾರವೇ ಶಿಷ್ಯ ವಯ್ಯ.
ಜ್ಞಾನವೇಲಿಂಗ ಪರಿಣಾಮವೇ ತಪವಯ್ಯ
ಸರಿಸಮಾನರೆಂಬ ಯೋಗ ನೋಡಯ್ಯ
ಶರಣಾರ ನೆನವೇ ನಾನೆದ್ದು ಕಲ್ಲೇಶ್ವರ.

––ರತ್ನ ಟಿ. ತುಮಕೂರು


# ಅಚ್ಚರಿಗಳ ಆಗರ ಆಲಕೆರೆ

## (ತುಂಬಾ ವಿಶೇಷ ಇಲ್ಲಿನ ಧಾರ್ಮಿಕ ಧಾರೆ)







(ಹಿಂದಿನ ಸಂಚಿಕೆಯಿಂದ)

**ಕವಿ ನುಡಿ:** ನಮ್ಮ ಊರಿನ ಜಾತ್ರೆ ತುಂಬಾ ವಿಶೇಷವಾದದ್ದು ಎಂಬುದು ಬಾಲ್ಯದಿಂದಲೇ ನಮಗೆಲ್ಲ ಹೆಮ್ಮೆಯ ಸಂಗತಿಯಾಗಿತ್ತು. ಅಂತಹ ವಿಶೇಷ ಜಾತ್ರೆಗಾಗಿ ನಾವೆಲ್ಲ ಜಾತಕಪಕ್ಷಿಗಳಂತೆ ಕಾಯುತ್ತಿದ್ದೆವು. ಆದರೆ ಆ ಜಾತ್ರೆ ನಡೆಯುತ್ತಿದ್ದದ್ದು ದಶಕಗಳ ಕಾಲಾವಧಿಯಲ್ಲಿ. ಇಷ್ಟೇ ವರ್ಷಗಳ ಅಂತರವೆಂದು ನಮ್ಮ ಜಾತ್ರೆಗೆ ನಿಗದಿಯಿರಲಿಲ್ಲ. ಮಧ್ಯ ವಯಸ್ಸಿನ ನಾನು, ಇಲ್ಲಿಯವರೆಗೂ ಕೇವಲ ಎರಡು ಬಾರಿ ಈ ಜಾತ್ರೆಯನ್ನು ನೋಡಿದ್ದೇನೆ ಎಂಬುದೇ ನಮ್ಮೂರಿನ ಜಾತ್ರೆಯ ವಿಶೇಷತೆಯನ್ನು ಎತ್ತಿ ತೋರಿಸುತ್ತದೆ. ನಾನು ಬಾಲ್ಯದಲ್ಲಿದ್ದಾಗ ಒಮ್ಮೆ ಮತ್ತು 24 ವರ್ಷಗಳ ಹಿಂದೆ ಮತ್ತೊಮ್ಮೆ ಈ ಜಾತ್ರೆಯನ್ನು ನೋಡಿದ್ದೇನೆ. ಮಧ್ಯ ವಯಸ್ಕಳಾದ ನನಗೆ ಈ ಜಾತ್ರೆ ತುಂಬಾ ಕೌತುಕ ಭರಿತವಾಗಿ ಇಂದಿಗೂ ಉಳಿದಿರುವುದಕ್ಕೆ ಕಾರಣ ನಮ್ಮೂರಿನ ಜಾತ್ರೆಯ ಅನೇಕ ವಿಶೇಷತೆಗಳು.

ಇಷ್ಟೂ ವರ್ಷಗಳ ಕಾಲ ನಮ್ಮೂರಿನ ಜಾತ್ರೆ ನಮಗೆ ಮಾತ್ರ ಕೌತುಕದ ವಿಷಯವಾಗಿ ಉಳಿದಿತ್ತು. ಯಾವಾಗಲಾದರೂ ಒಮ್ಮೆ ನಮಗೆ ಪರಿಚಿತರಾದವರಿಗೆ ನಮ್ಮೂರಿನ ಜಾತ್ರೆಯ ವಿಶೇಷವನ್ನು ಹೇಳುವುದು ಅಭಿಮಾನದ ಸಂಗತಿಯಾಗಿತ್ತು ಕೂಡ. ಕೇಳಿದವರು 'ಹೌದೇ' ಎಂದು ಆಶ್ಚರ್ಯಭರಿತರಾಗುತ್ತಿದ್ದರು. ಆದರೆ ನಮ್ಮೂರಿನ ಜಾತ್ರೆಯ ವಿಶೇಷತೆಯನ್ನು ಇಡೀ ನಾಡಿಗೆ ತಿಳಿಸುವ ಹಂಬಲವೇನು ನಮಗೆ ಎಂದೂ ಮೂಡಿರಲಿಲ್ಲ. ಏಕೆಂದರೆ ನಮ್ಮೂರಿನ ಜಾತ್ರೆ ಎಂದರೆ ಅದು ಕೇವಲ ನಮ್ಮೂರಿಗೆ ಮಾತ್ರ ಮೀಸಲು ಎಂಬ ಮನೋಭಾವ ನಮ್ಮದಾಗಿತ್ತು.

ಹೀಗಿರುವಾಗ, 2022ರಲ್ಲಿ ಕಾಶಿ ಯಾತ್ರೆಗೆಂದು ಹೋಗಿದ್ದ ನನಗೆ ಮಣ್ಣೆ ಮೋಹನ್ ಸರ್ ರವರ ಪರಿಚಯವಾಯಿತು. ಅವರು ಬಹು ಪ್ರಸಿದ್ಧ ಲೇಖಕ ಚಿಂತಕ ಅಂಕಣಕಾರರಾಗಿದ್ದರು.

ಯಾತ್ರೆಯ ಎರಡನೇ ದಿನಕ್ಕೆ ನಾವಿಬ್ಬರು ಎಷ್ಟೊಂದು ಆಪ್ತರಾದೆವು ಎಂದರೆ, ಎಷ್ಟೋ ವರ್ಷಗಳ ಪರಿಚಿತರೇನೋ ಎನ್ನುವಷ್ಟರ ಮಟ್ಟಿಗೆ. ಸುಮಾರು 20 ದಿನಗಳ ಯಾತ್ರೆಯುದ್ಧಕ್ಕೂ, ಪ್ರತಿಯೊಂದು ಸ್ಥಳದಲ್ಲಿಯೂ ಆ ಸ್ಥಳದ ಮಹಿಮೆಯನ್ನು ಅವರು ಯಾತ್ರೆಗೆಂದು ಬಂದಿದ್ದ ಇಡೀ ತಂಡಕ್ಕೆ ತಿಳುಸುತ್ತಿದ್ದರು.





। ಮಣ್ಣೆ ಮೋಹನ್

ಜೀವನದಲ್ಲಿ ಪ್ರಪ್ರಥಮ ಬಾರಿಗೆ ಉತ್ತರ ಭಾರತ ಮತ್ತು ನೇಪಾಳ ಯಾತ್ರೆ ಕೈಗೊಂಡಿದ್ದ ನನಗೆ, ಅವರು ಹೇಳುತ್ತಿದ್ದ ಸ್ಥಳ ಮಹಿಮೆಗಳು ರೋಮಾಂಚನವನ್ನುಂಟು ಮಾಡುತ್ತಿದ್ದವು. ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ಪ್ರತಿಯೊಂದು ಕ್ಷೇತ್ರದ ಹಿರಿಮೆ- ಗರಿಮೆಗಳನ್ನು ಅವರು ಹೇಳುತ್ತಿದ್ದಾಗ, ನಾನು ನಿಜಕ್ಕೂ ಅವರ ಅಭಿಮಾನಿಯಾದೆ. ಸದಾ ಅವರೊಂದಿಗಿದ್ದು ಅವರು ಹೇಳುತ್ತಿದ್ದ ವಿಚಾರಗಳನ್ನು ಕುತೂಹಲದಿಂದ ಕೇಳಿಸಿಕೊಳ್ಳುತ್ತಿದ್ದೆ. ನನ್ನ ಮನದಲ್ಲಿ ಅದು ಅಚ್ಚೊತ್ತುತ್ತಿತ್ತು.

ನಾವು ಭೇಟಿ ನೀಡಿದ ಕ್ಷೇತ್ರಗಳ ಮಹಿಮೆಯನ್ನು ಅವರು ಹೇಳುತ್ತಿದ್ದಾಗ, ನನ್ನ ಮನದಲ್ಲಿ ಮೂಡಿದ ಭಾವನೆ, ನಮ್ಮೂರಿನ ಜಾತ್ರೆಯ ಮಹಿಮೆಯನ್ನು ಕೂಡ ಮಣ್ಣೆ ಮೋಹನ್ ಸರ್ ಗಮನಕ್ಕೆ ತರಬೇಕೆಂದು. ಕೂಡಲೇ ನಾನು ಅವರಿಗೆ ನಮ್ಮೂರಿನ ಜಾತ್ರೆಯ ವಿಶೇಷತೆಯನ್ನು ತಿಳಿಸಿದೆ ಮತ್ತು 20ಕ್ಕೂ ಹೆಚ್ಚು ವರ್ಷಗಳ ಹಿಂದೆ ತೆಗೆದಿದ್ದ ಜಾತ್ರೆಯ ಕೆಲವು ಕಪ್ಪು-ಬಿಳುಪು ಫೋಟೋಗಳನ್ನು ಅವರಿಗೆ ತೋರಿಸಿದೆ. ಅವುಗಳನ್ನೆಲ್ಲ ಅತ್ಯಂತ ಸೂಕ್ಷ್ಮವಾಗಿ ಗಮನಿಸಿದ ಅವರು, ನಿಜಕ್ಕೂ ಆಶ್ಚರ್ಯ ಚಕಿತರಾದರು. 'ಬಹುಶಃ ಇಡೀ ಕರ್ನಾಟಕದಲ್ಲಿ ನಿಮ್ಮ ಜಾತ್ರೆ ತುಂಬಾ ವಿಶೇಷವಾದದ್ದು ಎನಿಸುತ್ತದೆ' ಎಂದರು.



'ಜಾತ್ರೆ ನಡೆದಾಗ ಖಂಡಿತ ನಿಮ್ಮನ್ನು ಕರೆದೊಯ್ಯುತ್ತೇನೆ, ನೀವು ಬರಲೇಬೇಕು' ಎಂದು ಒತ್ತಾಯಿಸಿದೆ.

ಕಾಶಿ ಯಾತ್ರೆಯಿಂದ ಬಂದ ನಂತರ, ಪ್ರತಿದಿನವೂ ಅವರೊಡನೆ ಫೋನಿನಲ್ಲಿ ಮಾತನಾಡುತ್ತಾ ಕಾಶಿಯಾತ್ರೆಯ ನೆನಪುಗಳನ್ನು ಹಂಚಿಕೊಳ್ಳುತ್ತಿದ್ದಾಗ, ಸಾಹಿತ್ಯದ ಬಗ್ಗೆ ನನ್ನಲ್ಲಿ ಒಲವು ಬರುವಂತೆ ಅವರು ಮಾಡಿದರು. 'ನೀವೂ ಕವನವನ್ನು ಬರೆಯಿರಿ' ಎಂದು ಒತ್ತಾಯಿಸಿದರು. 'ನಾನು ಕವನ ಬರೆಯಲು ಸಾಧ್ಯವೇ?' ಎಂದು ಅನುಮಾನಿಸಿದೆ. ಅಲ್ಲಿಯವರೆಗೂ ಗೃಹಣಿಯಾಗಿ ಮಾತ್ರ ಉಳಿದಿದ್ದ ನನಗೆ, ಸಾಹಿತ್ಯದ ಅರಿವು ಕೆಲವು ಪುಸ್ತಕಗಳನ್ನು ಓದುವಷ್ಟರ ಮಟ್ಟಿಗೆ ಮಾತ್ರ ಮೀಸಲಾಗಿತ್ತು. ಅಂತಹದರಲ್ಲಿ 'ನಾನೇಗೆ ಕವನ ಬರೆಯಲು ಸಾಧ್ಯ?' ಎನ್ನಿಸುತ್ತಿತ್ತು. 'ಮನುಷ್ಯನಿಗೆ ಅಸಾಧ್ಯವಾದದ್ದು ಯಾವುದು ಇಲ್ಲ, ಮನಸಿದ್ದರೆ ಮಾರ್ಗ, ಪ್ರಯತ್ನಿಸಿ' ಎಂದು ಮಣ್ಣೆ ಮೋಹನ್ ಸರ್ ಒತ್ತಾಯಿಸಿದರು.

'ನೋಡೇ ಬಿಡೋಣ' ಎಂದು, ನಮ್ಮ ಕಾಶಿ ಯಾತ್ರೆಯನ್ನು ಕುರಿತು ಆರು ಸಾಲಿನ ಪದ್ಯವನ್ನು ನನಗೆ ತೋಚಿದಂತೆ ಗೀಚಿ ಸರ್ ಗೆ ಕಳಿಸಿದೆ. ಐದೇ ನಿಮಿಷದಲ್ಲಿ ಅವರು ಅದನ್ನು ತಿದ್ದಿ, 12 ಸಾಲಿನ ಸೊಗಸಾದ ಕವನವನ್ನಾಗಿ ಮಾಡಿ ನನಗೆ ಕಳಿಸಿದ್ದರು. ನಾನು ಮೊದಲ ಬಾರಿಗೆ ಸಾಹಿತ್ಯದ ಸೊಗಸಾದ ಸವಿಯನ್ನು ಸವಿದೆ. ಹೇಗೆ ಬರೆಯಬೇಕೆಂಬುದರ ಒಂದಷ್ಟು ಕಲ್ಪನೆ ನನ್ನಲ್ಲಿ ಮೂಡಿತು. ನನಗೆ ತುಂಬಾ ಸಂತೋಷವಾಗಿದ್ದು ಯಾವಾಗ ಎಂದರೆ, ಆ ಕವನ ಮಾರನೆಯ ದಿನದ ಪತ್ರಿಕೆಯಲ್ಲಿ ಪ್ರಕಟವಾದಾಗ.

ನನ್ನ ಜೀವಮಾನದಲ್ಲಿ ಪ್ರಥಮ ಬಾರಿಗೆ ನಾನು ಒಂದು ಕವನವನ್ನು ಬರೆದಿದ್ದೆ ಎನ್ನುವುದು ಒಂದು ಸಂತೋಷದ ಸಂಗತಿಯಾದರೆ, ಅದು ಪತ್ರಿಕೆಯಲ್ಲಿ ಪ್ರಕಟವಾಗಿದೆ ಎನ್ನುವುದು ಇನ್ನೊಂದು ಸಂತೋಷದ ಸಂಗತಿಯಾಗಿ, ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ನಾನಂತೂ ಒಂದು ಕ್ಷಣ ಕುಣಿದು ಕುಪ್ಪಳಿಸಿದೆ. ಯಾರೋ ಒಬ್ಬ ವ್ಯಕ್ತಿ, 'ನಿನಗೆ ಮಾತನಾಡಲು ಬರಲ್ಲ, ಮಾತನಾಡುವಾಗ ತೊದಲುವೆ' ಎಂದು ನನ್ನನ್ನು ಹಂಗಿಸಿದ್ದು ನೆನಪಾಯಿತು. 'ತೊದಲು' ಮಾತನಾಡುವ ನನ್ನ 'ಮೊದಲ' ಕವನ, ಪತ್ರಿಕೆಯಲ್ಲೇ ಪ್ರಕಟವಾಗಿತ್ತು. ನನ್ನನ್ನು 'ಅವಮಾನಿಸಿ'ದ್ದವರಿಗೆ ಇದು ನನ್ನ 'ಬಹುಮಾನ'ವಾಗಿತ್ತು.


ಕ್ರಮೇಣ ನಾನಂತೂ ಮಣ್ಣೆ ಮೊಹನ್ ಸರ್ ರವರ ಅಪ್ಪಟ ಅಭಿಮಾನಿಯಾದೆ. 6

ಮುಂದುವರಿಯುತ್ತದೆ...



ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜನಮಿತ್ರ ಮಹಿಳಾ ಸೇವಾ ಸಂಘ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಖ್ಯಾತ ಸಾಹಿತಿ ಡಾ. ಸತ್ಯಮೂರ್ತಿ ಗೂಗಿ, ರಂಗಕರ್ಮಿ ಕಾಂತಾರ ಸೀನಪ್ಪ, ಸಮಾಜ ಸೇವಕ ಪತ್ರಕರ್ತ ಬಸನಗೌಡರ್ ಎಂ ರೆಡ್ಡಿ ಅವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಚಿತ್ರದಲ್ಲಿ ಗಣ್ಯರಾದ ಕೆ ಎಸ್ ರಾಜೇಗೌಡ, ವಸಂತ ಲಕ್ಷ್ಮಿ ಎನ್, ರವೀಂದ್ರ ಸಿ ಜಿ, ಲಕ್ಷ್ಮಮ್ಮ, ನೀಲಕಂಠ ಮುಂತಾದವರು ಹಾಜರಿದ್ದರು.

## ನೆಲಮಂಗಲ ತಾಲೂಕು ಕಸಾಪ ನೂತನ ಅಧ್ಯಕ್ಷರಾಗಿ ಕವಿ ಕೆ ಬಿ ಸದಾನಂದಾರಾಧ್ಯ ಆಯ್ಕೆ



**ನೆಲಮಂಗಲ:** ತಾಲೂಕು ಕಸಾಪ ನೂತನ ಅಧ್ಯಕ್ಷರಾಗಿ ಕವಿ, ಶಿಕ್ಷಕ ಕೆ ಬಿ ಸದಾನಂದಾರಾಧ್ಯ ರವರು ಆಯ್ಕೆಯಾಗಿದ್ದಾರೆ. ಎಂ ಎ ಕನ್ನಡ ಮತ್ತು ಎಂ ಎ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಶ್ರೀಯುತರು, ಕಳೆದ 27 ವರ್ಷಗಳಿಂದ ಶಿಕ್ಷಕ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಅಪ್ರತಿಮ ಸೇವೆಗಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದಿದ್ದಾರೆ.

ಸಾಹಿತ್ಯಕ್ಷೇತ್ರದಲ್ಲಿಯೂ ಚಿರಪರಿಚಿತರಾಗಿರುವ ಶ್ರೀಯುತರು, 'ಸಿರಿಗಂಧ' ಮತ್ತು 'ನುಡಿ ಮಲ್ಲಿಗೆ' ಎಂಬ ಕವನ ಸಂಕಲನಗಳನ್ನು, ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಇದೀಗ ಅವರ ಇನ್ನೊಂದು ಕವನ ಸಂಕಲನ ಪ್ರಕಟಣೆಯಲ್ಲಿದೆ. ಅನೇಕ ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಉಪನ್ಯಾಸಕರಾಗಿ, ನಿರೂಪಕರಾಗಿ ಭಾಗವಹಿಸಿ ತಮ್ಮ ಸೃಜನಾತ್ಮಕ ಮತ್ತು ಕ್ರಿಯಾಶೀಲ ವ್ಯಕ್ತಿತ್ವದಿಂದ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

ನಿಕಟಪೂರ್ವ ಅಧ್ಯಕ್ಷರಾದ ಎಂ ಪ್ರಕಾಶಮೂರ್ತಿ ರವರು, ದೂರವಾಣಿ ಮೂಲಕ ಸಲ್ಲಿಸಿದ ರಾಜೀನಾಮೆ ಪತ್ರವನ್ನು ಅಂಗೀಕರಿಸಿದ ಜಿಲ್ಲಾ ಕಸಾಪ ಅಧ್ಯಕ್ಷರಾದ ಕೃಷ್ಣಪ್ಪ ಬಿ ಎನ್ ರವರು, ಲೇಖಕ ಚಿಂತಕ ಅಂಕಣಕಾರ ಮಣ್ಣೆ ಮೋಹನ್ ಮತ್ತು ಇತರರ ಕೋರಿಕೆ ಮೇರೆಗೆ, ನೂತನ ಅಧ್ಯಕ್ಷರನ್ನಾಗಿ ಸದಾನಂದ ಆರಾಧ್ಯರವರನ್ನು ಆಯ್ಕೆ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ರಾಮಕೃಷ್ಣಪ್ಪ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮುನಿರಾಜು, ಮಾಜಿ ಕಸಾಪ ಅಧ್ಯಕ್ಷ ಪ್ರದೀಪ್ ಕುಮಾರ್, ಹಿರಿಯ ಸಾಹಿತಿಗಳಾದ ಶರಣಯ್ಯ ಹಿರೇಮಠ್, ಕಲಾವಿದ ಕೃಷ್ಣಯ್ಯ, ಸಮಾಜ ಸೇವಕ ರವೀಶ್, ರಮೇಶ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ನೂತನ ಅಧ್ಯಕ್ಷರಿಗೆ ಶುಭಾಶಯ ಕೋರಿದ ಗಣ್ಯರು, ತಾಲೂಕು ಸಾಹಿತ್ಯ ಪರಿಷತ್ತಿನ ವತಿಯಿಂದ ಅತ್ಯುತ್ತಮ ಕಾರ್ಯಕ್ರಮಗಳು ಜರುಗಲಿ, ತಾಲೂಕಿನಾದ್ಯಂತ ಕನ್ನಡ ಸಾಹಿತ್ಯದ ತೇರಿನ ಮೆರವಣಿಗೆಯಾಗಲಿ ಎಂದು ನುಡಿದರು. ತಾಲೂಕಿನ ಎಲ್ಲಾ ಮಠಾಧಿಪತಿಗಳು, ಶಿಕ್ಷಕ ವೃಂದ ಹಾಗೂ ಸರ್ವ ಕನ್ನಡ ಮನಸ್ಸುಗಳು ಶ್ರೀಯುತರ ನೇಮಕಾತಿಯನ್ನು ತುಂಬು ಹೃದಯದಿಂದ ಸ್ವಾಗತಿಸಿ ಶುಭಕೋರಿದ್ದಾರೆ.

# ಜನಪದ ಸೃಜನಶೀಲ ಸಾಹಿತಿ ಚಿಂತಕರು ಪ್ರೊ.ಎಚ್.ಕೆ.ಲಕ್ಕಪ್ಪಗೌಡರು

ಪ್ರೊ.ಎಚ್.ಜೆ.ಲಕ್ಕಪ್ಪಗೌಡ ಅವರು ಜಾನಪದ ತಜ್ಞರು ಶಿಕ್ಷಣ ತಜ್ಞರು ಹಾಗೂ ಸಾಹಿತಿಗಳಾಗಿ ಹೆಸರಾಗಿದ್ದವರು. ಇವರ ತಂದೆ ಜವರೇಗೌಡರ ತಾಯಿ ಕಾಳಮ್ಮ. ತಂದೆ ಊರು ಅರಕಲಗೊಡು ತಾ. ಹಂಪಾಪುರ. ದಿನಾಂಕ 8-5-1939ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಹುಟ್ಟೂರಿನಲ್ಲಿ ನಡೆದು ಪ್ರೌಢಶಾಲೆಗೆ ಬೆಟ್ಟದಪುರದ ಹೈಸ್ಕೂಲು ಸೇರಿದರು. ಪಿಯುಸಿ ಕೊಣನೂರಿನಲ್ಲಿ ಓದಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿಎ ಪದವಿ. ಮೈಸೂರು ವಿ.ವಿ.ಯಿಂದ ಎಂ.ಎ. ಪದವಿ ಮತ್ತು ಶ್ರೀ ರಾಮಾಯಣ ದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ ಮಹಾಪ್ರಬಂಧ ಮಂಡಿಸಿ ಪಿಹೆಚ್‌ಡಿ ಪದವಿ ಗಳಿಸಿದರು.




। ಅನಂತರಾಜು ಗೊರೂರು

ಹೊಳೆನರಸೀಪುರದಲ್ಲಿ ಪ್ರೌಢಶಾಲೆ ಶಿಕ್ಷಕರಾಗಿ ಬೋಧನ ಕ್ಷೇತ್ರವನ್ನು ಪ್ರವೇಶಿಸಿ ನಂತರ ಮೈಸೂರು ಶಾರದ ವಿಲಾಸ ಕಾಲೇಜು, ಮಹಾರಾಜಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನ ಸಹಾಯಕರಾಗಿ ಸೇವೆ ಸಲ್ಲಿಸಿದರು. ಮಂಗಳೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಉಪನ್ಯಾಸಕ ಹುದ್ದೆ ನಿರ್ವಹಿಸಿದರು. ಸರ್ಕಾರವು ಭಾಷಾಂತರ ಇಲಾಖೆ ಪ್ರಾರಂಭಿಸಿದಾಗ 7 ವರ್ಷ ಆಯೋಗದ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು. 1990 ರಿಂದ 93ರವರೆಗೆ ಕುಲಸಚಿವರಾಗಿದ್ದರು. ಕನ್ನಡ ಭಾರತೀಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿ 1999ರಲ್ಲಿ ನಿವೃತ್ತರಾದರು. 1995ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ತಮ್ಮ ಅವಧಿಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಿದರು. ಪಾಶ್ಚಾತ್ಯ ಜಾನಪದ ಸಂಶೋಧಕರ ಪರಿಚಯ ಪುಸ್ತಕಗಳು, ಸರ್ವಜ್ಞ ಜಾನಪದ, ಕುಮಾರವ್ಯಾಸ ಜಾನಪದ ಮೊದಲಾದ ರತ್ನತ್ರಯ ಸಂಚಿಕೆಗಳ ಪ್ರಕಟಣೆ, ಸುವರ್ಣ ಜಾನಪದ ಸಂಪುಟಗಳು, ಜಾನಪದ ನಿಘಂಟು, ಜಾನಪದ ವಿಶ್ವಕೋಶ ಪ್ರಕಟಣೆ, ಜಾನಪದ ವಸ್ತು ಸಂಗ್ರಹಾಲಯ ಯೋಜನೆ ರೂಪಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ತಾ.12.6.1998 ರಿಂದ 7-3-2001ವರೆಗೆ ಕಾರ್ಯ ನಿರ್ವಹಿಸಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಮಂಗಳೂರು ಮತ್ತು ಕುವೆಂಪು ವಿಶ್ವ ವಿದ್ಯಾಲಯಗಳ ಶೈಕ್ಷಣಿಕ ಸಲಹೆಗಾರರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕುಪ್ಪಳಿಯಲ್ಲಿನ ಕುವೆಂಪು ಪ್ರತಿಷ್ಠಾನದ ಕಾರ್ಯದರ್ಶಿಯಾಗಿ, ದಕ್ಷಿಣ ಭಾರತದ ಭಾಷೆಗಳ ಜಾನಪದ ಅಧ್ಯಯನ ಕೇಂದ್ರದ ಅಧ್ಯಕ್ಷರಾಗಿ ಹೀಗೆ ಹಲವಾರು ಸಾಹಿತ್ಯಿಕ ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಸಕಲೇಶಪುರದಲ್ಲಿ ನಡೆದ 5ನೇ ಹಾಸನ ಜಿಲ್ಲಾ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದರು.

ಕಾಲೇಜು ದಿನಗಳಲ್ಲಿಯೇ ಬರವಣಿಗೆಯ ಗೀಳು ಹಚ್ಚಿಕೊಂಡಿದ್ದ ಇವರ ಪ್ರಕಟತಿ ಕೃತಿಗಳು: ವಸಂತಗೀತ, ಊರ ಮುಂದಿನ ಬಾವಿ, ಪದ್ದು-ಹದ್ದು, ಅಕ್ಷತೆ, ಕಿರುಗೆಜ್ಜೆ, ಸೂಜಿಸಂಪಿಗೆ, ವಚನ ತೋರಣ (ಕಾವ್ಯ), ಹೊನ್ನಾರು, ಹುಲಿಯ ಹೆಜ್ಜೆ (ಸಣ್ಣಕತೆ), ಸಿದ್ಧರಾಮ, ತಮಸ್ಸಿನಿಂದ ಜ್ಯೋತಿಗೆ ಕಾಯಕಯೋಗಿ (ನಾಟಕ), ದಲಿತ ಸೂರ್ಯ, ಸಮತೆಯ ಶಿಲ್ಪಿ, ವಿಶ್ವಕವಿ ಕುವೆಂಪು, ಡಾ.ಅಂಬೇಡ್ಕರ್ (ಜೀವನ ಚರಿತ್ರೆ), ಅಂತರಂಗ, ಸಂಗಮ, ಕಥಾಲೋಕನ, ಗೋಪುರದ ದೀಪಗಳು, ಅಂತರಾಳ, ಬಾಳದೇಗುಲದ ನೋಟಗಳು, ಸಾಹಿತ್ಯ ಬಹುಮುಖೀ ಚಿಂತನೆ (ಸಾಹಿತ್ಯ ವಿಮರ್ಶೆ), ಜಾನಪದ ಕಥಾವಳಿ, ಒಗಟುಗಳು, ಮಲೆನಾಡು ಜಾನಪದ, ವಿಶಿಷ್ಟ ಜಾನಪದ, ಮಲ್ಲಿಗೆ ಮೊಗ್ಗು ಸುರಿದಾವೆ, ಹೊಂಬಾಳೆ (ಜಾನಪದ) ಇಲಿಯಡ್, ಒಡಿಸ್ಸಿ, ಕಾಯಕವೇ ಕೈಲಾಸ, ದೀನಬಂಧು (ಮಕ್ಕಳ ಸಾಹಿತ್ಯ) ಇಬ್ಬನಿ ಎಂಬ ಸ್ವತಂತ್ರ ಗಾದೆಗಳು, ಅನ್ವಾರ್ಥಕೋಶ ಇವರ ಇತರ ಕೃತಿಗಳು. ರಸಋಷಿ ಕುವೆಂಪು, ಮಂಗಳ ಗಂಗೆ, ಸಾಧನೆಯ ಹಾದಿಯಲ್ಲಿ, ನಾಗಸಂಪಿಗೆ, ರಾಷ್ಟ್ರಕವಿ, ಸಿಂಗಾರ, ಗ್ರಂಥ ಸರಸ್ವತಿ,



ಮುತ್ತು ಬಂದಿದೆ ಕೇರಿಗೆ, ಕನಕ ಭಾರತಿ, ಜನಪ್ರಿಯ ಕನಕ ಸಂಪುಟ, ಸಹ್ಯಾದ್ರಿ ಸಿರಿ, ಜೀಶಂಪ ಸಂಸ್ಮರಣೆ (ಸಂಪಾದಿತ) ಇವರ ಇಂಗ್ಲೀಷ್ ಕೃತಿಗಳು ಲಿಂಗರಿಂಗ್ ಫ್ರಾಗ್ರೆನ್ಸ್, ಶ್ರೀಗಂಧ, ಎ ಬೊಕೆ ಆಫ್ ಫ್ಲವರ್ಸ್, ಪ್ರೈಸ್‌ಲೆಸ್ ಗೋಲ್ಡ್ ಇವುಗಳಲ್ಲದೆ ಲೇಖನಗಳ ಸಂಕಲನಗಳು, ಮುನ್ನುಡಿಗಳ ಸಂಕಲನಗಳು ಸೇರಿ 70ಕ್ಕೂ ಹೆಚ್ಚು ಕೃತಿ ಪ್ರಕಟಗೊಂಡಿವೆ.

2005ರಲ್ಲಿ ಪ್ರಕಟಿತ ನನ್ನ ಹನಿಗವನ ಸಂಕಲನ ಹಾಸ್ಯ ಸವಿಗೆ ಸರ್ ಬೆನ್ನುಡಿ ಬರೆದಿದ್ದರು. ಕಿರಿದರಲ್ಲಿ ಹಿರಿದರ್ಥವನ್ನು ಹನಿಯಲ್ಲಿ ಹೆಗ್ಗಡಲನ್ನು ಹಿಡಿದುಕೊಡುವ ರಸ ಸಾಹಸ ಚುಟುಕಗಳ ವಿಶೇಷ. ಹಿಡಿದರೆ ಹಿಡಿತುಂಬಿ, ಬಿಟ್ಟರೆ ಜಗತುಂಬಿ ನಗೆ ಹೊಗೆ ಧಗೆಗಳ ಸಮರಸ ಹೂರಣವನ್ನು ಹುದುಗಿಸಿಕೊಂಡು ಆಂತರ್ಯದಲ್ಲಿ ತ್ರಿವಿಕ್ರಮನಾಗಿ ಬಹಿರಂಗದಲ್ಲಿ ವಾಮನನಾಗಿ ಕಾಣಿಸಿಕೊಳ್ಳುವ ವಿಶಿಷ್ಟ ಕುಸುರಿಗೆಲಸದ ಸಹ ಪದಪದಕ ಇದು. ವಿಶೇಷ ಲೋಕಾನುಭವ ಹರಿತವಾದ ಬುದ್ಧಿಕೌಶಲ, ಮೊನಚು ದೃಷ್ಟಿ, ವ್ಯಗ್ರವಲ್ಲದ ಕುತ್ಸಿತವಲ್ಲದ ಅನುಸೂಯೆ ಪರವಾದ ಹದ ಮನಸ್ಸು ಮುದ ಮನೋಭಾವಗಳು ಈ ರಚನೆಗೆ ಅವಶ್ಯಕ. ಇಂಥ ಗುಣ ಲಕ್ಷಣಗಳನ್ನು ಶ್ರೀ ಗೊರೂರು ಅನಂತರಾಜು ಅವರು ತಮ್ಮ ಈ ಹನಿಗವನಗಳಲ್ಲಿ ದಟ್ಟವಾಗಿ ಪ್ರಕಟಿಸಿದ್ದಾರೆ.. ಹೀಗೆ ಬರೆದಿರುವರು.

ಇವರಿಗೆ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಅಕಾಡೆಮಿ ಜಾನಪದ ತಜ್ಞ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಬಹುಮಾನ ಸಂದಿದೆ. ಧಾರವಾಡದಲ್ಲಿ ನಡೆದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನಾಧ್ಯಕ್ಷತೆ, ಸಕಲೇಶಪುರದಲ್ಲಿ ನಡೆದ ಹಾಸನ ಜಿಲ್ಲೆಯ 5ನೆಯ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ, ವಿಶ್ವಮಾನವ ಸಾಹಿತ್ಯ ಪ್ರಶಸ್ತಿ, ದೇವರಾಜ ಬಹದ್ದೂರ್ ಪ್ರಶಸ್ತಿ ಮುಂತಾದ ಗೌರವ ಪುರಸ್ಕಾರಗಳು ದೊರಕಿವೆ. 2004ರಲ್ಲಿ ಹೊನ್ನಾರು ಅಭಿನಂದನ ಗ್ರಂಥ ಪ್ರಕಟವಾಗಿದೆ. ಇವರು 2021 ಜುಲೈ 26ರಂದು ನಿಧನರಾದರು.

# ನನ್ನರಿವಿನ ನುಡಿಗಳು

ಕಾಸಿದ್ದ ಹಾಲಿಂಗೆ ಹೆಪ್ಪಿಡಿಸಿದಳು ವಾಣಿ
ಕೆನೆ ಕೆನೆಯ ಮೊಸರಾಗೆ ಮಂಥಿಸಿದೆನು
ಲೇಸಾಗಿ ಹಾಲಿನೊಳ್ ಗುಪ್ತವಾಗಿರೆ ಮೊದಲೆ
ಕಡೆಕಡೆದು ನವನೀತ ಹೊರತೆಗೆದೆನು

ನಾನು ಮಾಡಿದ್ದು ಇಷ್ಟೆ. ಎಲ್ಲವೂ ಆ ತಾಯಿ ಶಾರದೆಯ ಅನುಗ್ರಹ. ಅವಳು ನಡೆಸಿದ ದಾರಿಯಲ್ಲಿ ನಾನು ನಡೆದೆ. ಅವಳು ನಡೆಸುವವರೆಗೆ ನಡೆಯುತ್ತಲೇ ಇರುತ್ತೇನೆ. ಯಾರ್ಯಾರಿಗೆ ಎಷ್ಟೆಷ್ಟು ಲಭ್ಯವೋ ಅಷ್ಟಷ್ಟು ಅವರವರಿಗೆ ಲಭಿಸುತ್ತದೆ.

ತುಂಗಾ ತೀರದ ಸುಂದರ ಪರಿಸರದ ಪಾಠಶಾಲೆ. ಆಚಾರ್ಯ ಶಂಕರರು ತಮ್ಮ ಪೀಠದಲ್ಲಿ ವಿರಾಜಮಾನರಾಗಿದ್ದರು. ಅಲ್ಲಿದ್ದದ್ದು ವಿದ್ವನ್ಮಣಿಗಳ ಮಹಾ ಸಂಗಮ. ಆಚಾರ್ಯರ ಪ್ರವಚನಕ್ಕಾಗಿ ಅಕ್ಷರಶಃ ಚಾತಕಿಯಂತೆ ಕಾದು ಕುಳಿತಿದ್ದರು. ಆದರೆ ಆಚಾರ್ಯರು ಪ್ರವಚನ ಪ್ರಾರಂಭಿಸದೇ ಮೌನವಾಗಿ ಕುಳಿತಿದ್ದರು. ನೆರೆದ ಶಿಷ್ಯವರ್ಗದಲ್ಲಿ ಗುಸುಗುಸು ಮಾತು. ಅವರಲ್ಲಿ ಹಿರಿಯರೊಬ್ಬರು ಧೈರ್ಯದಿಂದ, ಗುರುಗಳೇ ಪಾಠ ಪ್ರಾರಂಭಿಸಬಹುದಲ್ಲಾ, ಎಲ್ಲರೂ ಬಂದಾಗಿದೆ ಎಂದರು. ಆಚಾರ್ಯರು, ಗಿರಿಯೂ ಬಂದುಬಿಡಲಿ ಎಂದರು. ಆಗ ಮತ್ತೊಬ್ಬರು, ಸ್ವಲ್ಪ ಅಸಹನೆಯಿಂದಲೇ ಆವನು ಬಂದರೆಷ್ಟು ಬಿಟ್ಟರೆಷ್ಟು, ನೀವು ಪ್ರಾರಂಭಿಸಿ ಗುರುಗಳೆ ಎಂದು ಹೇಳಿದರು. ಆಚಾರ್ಯ ಶಂಕರರು ಮರುಮಾತಾಡಲಿಲ್ಲ ಮೌನವಾಗಿ ಕಣ್ಣು ಮುಚ್ಚಿ ಕುಳಿತರು. ತಮ್ಮ ಅಂತಃಚಕ್ಷುವಿನಿಂದ ಎಲ್ಲವನ್ನೂ ನೋಡಿದರು. ಗಿರಿಯು



ಶ್ರೀಮತಿ ಬಿಟ್ಟೀರ ಚೋಂದಮ್ಮ ಶಂಭು

ತುಂಗೆಯ ತಟದಲ್ಲಿ ತಮ್ಮ ವಸ್ತ್ರಗಳನ್ನು ಸ್ವಚ್ಛ ಮಾಡುತಿದ್ದನು. ಅವನಿಗೆ ಪಾಠಕ್ಕಿಂತ ಗುರುಗಳ ಸೇವೆಯೇ ಹೆಚ್ಚು ಸಂತೋಷ ಕೊಡುತ್ತಿತ್ತು. ಆಚಾರ್ಯರು ಮಾನಸಿಕವಾಗಿ ತಮ್ಮ ಜ್ಞಾನಧಾರೆಯನ್ನು ಗಿರಿಯಲ್ಲಿ ತುಂಬಿಬಿಟ್ಟರು.

ಗಿರಿಯು ಮಂತ್ರಮುಗ್ಧನಂತೆ ಬಟ್ಟೆಯನ್ನು ಸ್ವಚ್ಛಗೊಳಿಸಿ ಪಾಠಶಾಲೆಗೆ ಬಂದನು.

ಗಿರಿಯೂ ಒಳಗೆ ಬರುತಿದ್ದಂತೆ, ನಿರರ್ಗಳವಾಗಿ ತೋಟಕಾಷ್ಟಕವನ್ನು ಹಾಡುತ್ತಾ ಬಂದನು.

ವಿಧಿತಾಖಿಲ ಶಾಸ್ತ್ರ ಸುಧಾ ಜಲದೇ
ಮಹಿತೋಪನಿಷತ್ ಕಥಿತಾರ್ಥ ನಿಧೇ
ಹೃದಯೇ ಕಲಯೇ ವಿಮಲಂ ಚರಣಂ
ಭವ ಶಂಕರ ದೇಶಿಕ ಮೇ ಶರಣಂ

ಮುಂದುವರಿಯುತ್ತದೆ...

# ಆರೋಗ್ಯ ಕೇಂದ್ರಕ್ಕೆ ವೈದ್ಯರ ನೇಮಕಕ್ಕೆ ಆಗ್ರಹಿಸಿ ಪ್ರತಿಭಟನೆ




**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ವಿಜಯಪುರ,ಮೇ8–** ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ತಜ್ಞ ವೈದ್ಯರನ್ನು ನೇಮಕ ಮಾಡುವಂತೆ ಹಲವಾರು ಬಾರಿ, ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಮನವಿ ಕೊಟ್ಟರೂ ಇದುವರೆಗೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಆರೋಪಿಸಿ, ಕರ್ನಾಟಕ ರಕ್ಷಣಾ ವೇದಿಕೆ, ಶಿವರಾಮೇಗೌಡರ ಬಣದ ಕಾರ್ಯಕರ್ತರು, ಸಮುದಾಯ ಆರೋಗ್ಯ ಕೇಂದ್ರದ ಮುಂಭಾಗ ಪ್ರತಿಭಟನೆ ನಡೆಸಿದರು.

ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಸಿಗಬೇಕಾಗಿರುವಂತಹ ಸೇವೆಗಳು ನಿಗದಿತ ಸಮಯಕ್ಕೆ ಸಿಗುತ್ತಿಲ್ಲ. ಇಲ್ಲಿಗೆ ಬರುವಂತಹ ರೋಗಿಗಳು, ಚಿಕ್ಕಬಳ್ಳಾಪುರ, ದೇವನಹಳ್ಳಿಗೆ ಹೋಗಬೇಕಾದಂತಹ ಪರಿಸ್ಥಿತಿಯಿದೆ. ಇಲ್ಲಿ ಹೆರಿಗೆ ಮಾಡಿಸುತ್ತಿಲ್ಲ. ವೈದ್ಯಕೀಯ ವಿದ್ಯಾರ್ಥಿಗಳನ್ನು ಇಲ್ಲಿಗೆ ನೇಮಕ ಮಾಡಲಾಗಿದ್ದು, ಸಂಜೆ 4 ಗಂಟೆಯ ನಂತರ ಅವರು ಯಾರೂ ಇಲ್ಲಿ ಲಭ್ಯವಾಗುವುದಿಲ್ಲ.

ರಾಜ್ಯ ಸರಕಾರ ಇಲ್ಲಿಂದ ವರ್ಗಾವಣೆ ಮಾಡಿರುವ ತಜ್ಞ ವೈದ್ಯರನ್ನು ಕೂಡಲೇ ಇಲ್ಲಿಗೆ ನೇಮಕ ಮಾಡಬೇಕು. ಇಲ್ಲಿನ ಜನರಿಗೆ ಮೊದಲು ಸಿಗುತ್ತಿದ್ದಂತೆ ವೈದ್ಯಕೀಯ ಸೌಲಭ್ಯಗಳು ಸಿಗಬೇಕು. ಆಸ್ಪತ್ರೆಗೆ ಅಗತ್ಯವಿರುವಷ್ಟು ಔಷಧಿಗಳನ್ನು ಪೂರೈಕೆ ಮಾಡಬೇಕು, ಆಸ್ಪತ್ರೆಯಿಂದ ಔಷಧಿಗಳನ್ನು ಹೊರಗೆ ಬರೆಯಬಾರದು. ಇಲ್ಲಿಗೆ ಬರುವಂತಹ ಗರ್ಭಿಣಿ ಮಹಿಳೆಯರಿಗೆ ಇಲ್ಲೆ ಹೆರಿಗೆ ಮಾಡಿಸಿ ಕಳುಹಿಸುವಂತಹ ವ್ಯವಸ್ಥೆ ಆಗಬೇಕು. ರಾತ್ರಿಯ ವೇಳೆಯಲ್ಲೂ ವೈದ್ಯರು ಲಭ್ಯವಿರುವಂತೆ ನೋಡಿಕೊಳ್ಳಬೇಕು. ಆಸ್ಪತ್ರೆಗೆ ಅಗತ್ಯಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಕೂಡಲೇ ಒದಗಿಸಿಕೊಡಬೇಕು ಎಂದು ಪ್ರತಿಭಟನಾಕಾರರು, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಲಕ್ಕಾಕೃಷ್ಣಾರೆಡ್ಡಿ ಮೂಲಕ ಮನವಿ ಪತ್ರವನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿದರು.

ಪ್ರತಿಭಟನಾಕಾರರಿಂದ ಮನವಿ ಪತ್ರ ಸ್ವೀಕರಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಲಕ್ಕಾ ಕೃಷ್ಣಾರೆಡ್ಡಿ, ಈ ಹಿಂದೆ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿದ್ದಾಗ ವಾರದಲ್ಲಿ ಮೂರು ದಿನಗಳು ಕರ್ತವ್ಯ ನಿರ್ವಹಿಸುವಂತೆ ಪ್ರಸೂತಿ ತಜ್ಞೆಯನ್ನು ನಿಯೋಜನೆಗೊಳಿಸಲಾಗಿತ್ತು. ಆದರೆ, ರಾಜ್ಯ ಸರಕಾರ ಕೂಡಲೇ ನಿಯೋಜನೆ ವಾಪಸ್ಸು ಪಡೆಯುವಂತೆ ಸೂಚನೆ ನೀಡಿದ್ದರಿಂದ ವೈದ್ಯರ ನಿಯೋಜನೆ ಆದೇಶವನ್ನು ವಾಪಸ್ಸು ಪಡೆಯಬೇಕಾಯಿತು. ವೈದ್ಯಕೀಯ ವಿದ್ಯಾರ್ಥಿಗಳನ್ನು ಇಲ್ಲಿಗೆ ನೇಮಕ ಮಾಡಿದ್ದೇವೆ. ಅವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆಸ್ಪತ್ರೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಚತೆ ಹಾಗೂ ಔಷಧಿಗಳ ಕೊರತೆ ನೀಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. ರಾಜ್ಯ ಸರಕಾರದಿಂದ ಆದೇಶ ಬರುವ ತನಕ ತಜ್ಞ ವೈದ್ಯರನ್ನು ನೇಮಕ ಮಾಡುವುದು ನಮ್ಮ ಹಂತದಲ್ಲಿ ಇಲ್ಲ. ಸರಕಾರ ಆದೇಶ ಮಾಡಿದರೆ, ನೇಮಕ ಮಾಡಲಾಗುತ್ತದೆ ಎಂದರು.

ತಾಲೂಕು ಆರೋಗ್ಯಾಧಿಕಾರಿ ಮುತಾಫೀರ್ ಅಫೀಜ್, ಕರವೇ ಮುಖಂಡರಾದ ಮಹೇಶ್, ಅಣ್ಣಮ್ಮತಾಯಿ ಸುರೇಶ್, ಕಿರಣ್, ಜಬೀವುಲ್ಲಾ, ಸೇರಿ ಇತರರು ಹಾಜರಿದ್ದರು.

## ಸಂಚಾರಿ ಇ-ಬೈಕ್ ಗ್ರಾಮೀಣ ಆರೋಗ್ಯಕ್ಕೆ ವರದಾನ



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ದೇವನಹಳ್ಳಿ,ಮೇ8–** ಗ್ರಾಮೀಣ ಪ್ರದೇಶ ಹಾಗೂ ದೂರದ ಪ್ರದೇಶಗಳಿಗೆ ತುರ್ತು ಆರೋಗ್ಯ ಸೇವೆ ಒದಗಿಸಲು ಸಂಚಾರಿ ಇ-ಬೈಕ್ ಗಳು ಸಹಕಾರಿ ಆಗಲಿವೆ ಎಂದು ಜಿ.ಪಂ ಸಿಇಒ ಡಾ.ವಾಸಂತಿ ಅಮರ್ ಹೇಳಿದರು.

ಜಿಲ್ಲಾಡಳಿತ, ಆರೋಗ್ಯ ಇಲಾಖೆಯಡಿ "ಆಪ್ಟಮ್ ಇಂಡಿಯಾ ಸಂಸ್ಥೆ ಮತ್ತು ಯುನೈಟೆಡ್ ವೇ ಬೆಂಗಳೂರು ವತಿಯಿಂದ ಸಿ.ಎಸ್.ಆರ್ ಅನುದಾನದಡಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 45 ಇ-ಬೈಕ್ ಗಳನ್ನು ಹಸ್ತಾಂತರಿಸುವ ಕಾರ್ಯಕ್ರಮಕ್ಕೆ ಜಿಲ್ಲಾಡಳಿತ ಭವನದ ಆವರಣದಲ್ಲಿ ಗುರುವಾರ ಚಾಲನೆ ನೀಡಿ ಮಾತನಾಡಿದರು. ಸರ್ಕಾರವು ಈಗಾಗಲೇ ರಾಜ್ಯಾದ್ಯಂತ 'ಆರೋಗ್ಯ ಸೇತು ಸಂಚಾರಿ ಆರೋಗ್ಯ ಘಟಕ' ಯೋಜನೆಯನ್ನು ಜಾರಿಗೊಳಿಸಿದೆ. ಇದಕ್ಕೆ ಪೂರಕವಾಗಿ ಇಂದು "ಆಪ್ಟಮ್ ಇಂಡಿಯಾ ಸಂಸ್ಥೆಯವರು ನಮ್ಮ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಇ- ಬೈಕ್ ಗಳನ್ನು ನೀಡುತ್ತಿರುವುದು ಪ್ರಶಂಸನೀಯ. ಸಂಚಾರಿ ಇ- ಬೈಕ್ ಗಳು ತುರ್ತು ಆರೋಗ್ಯ ಸೇವೆಗಳನ್ನು ಜನರಿಗೆ ಒದಗಿಸಲಿದೆ. ಗ್ರಾಮೀಣ ಭಾಗದವರಿಗೆ ಸೂಕ್ತ ಸಾರಿಗೆ ವ್ಯವಸ್ಥೆಯಿಲ್ಲದೆ, ತುರ್ತು ಆರೋಗ್ಯ ಸೇವೆಗಳಲ್ಲಿ ವಿಳಂಬವಾಗುತ್ತದೆ. ಈ ರೀತಿಯ ಸಂದರ್ಭಗಳಲ್ಲಿ ಇ-ವಾಹನಗಳು ಆರೋಗ್ಯ ಸಿಬ್ಬಂದಿಗೆ ಸಹಾಯಕವಾಗಿರುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ಆಸ್ಪತ್ರೆಗೆ ಹೋಗಲು ಸಾಧ್ಯವಾಗದವರಿಗೆ, ರೋಗಿಗಳಿಗೆ ತ್ವರಿತ ಚಿಕಿತ್ಸೆ, ಔಷಧಿಗಳನ್ನು ತಲುಪಿಸಲು ಹಾಗೂ ಮನೆ, ಮನೆಗೂ ಆರೋಗ್ಯ ಸೇವೆಯನ್ನು ಒದಗಿಸಲು ಈ ವಾಹನಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಇ-ಬೈಕ್ಗಳು ಪರಿಸರ ಸ್ನೇಹಿಯಾಗಿದ್ದು, ವಾಯುಮಾಲಿನ್ಯ ಆಗದಂತೆ ತಡೆಗಟ್ಟುತ್ತವೆ, ವಾಹನಗಳ ನಿರ್ವಹಣೆ ಸೇರಿದಂತೆ ಸರಿಯಾಗಿ ಬಳಸಿಕೊಳ್ಳಬೇಕು. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಸರಿಯಾದ ಸಮಯಕ್ಕೆ ಆರೋಗ್ಯ ಸೇವೆ ಒದಗಿಸಿ ಎಂದು ಆರೋಗ್ಯ ಸಿಬ್ಬಂದಿಗೆ ಸಿಇಒ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಿವಕುಮಾರ್, ಆರೋಗ್ಯಾಧಿಕಾರಿ ಡಾ. ಲಕ್ಕಾ ಕೃಷ್ಣ ರೆಡ್ಡಿ, ಆಪ್ಟಮ್ ಸಂಸ್ಥೆಯ ಎಂ.ಡಿ ಉಮಾ ರತ್ನಮ್ ಕೃಷ್ಣ, ಮತ್ತು ಯುನೈಟೆಡ್ ವೇ ಬೆಂಗಳೂರು ಸಂಸ್ಥೆಯ ಸಿ.ಇ.ಒ ರಾಜೇಶ್ ಕೃಷ್ಣನ್ ಇತರರು ಉಪಸ್ಥಿತರಿದ್ದರು.

## ಹೆದ್ದಾರಿ ಅಪಘಾತ: ಶವವಿಟ್ಟು ಸ್ಥಳೀಯರ ಪ್ರತಿಭಟನೆ



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ವಿಜಯಪುರ,ಮೇ8–** ಹೋಬಳಿಯ ವೆಂಕಟಗಿರಿಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಮುದುಗುರ್ಕಿ ಗ್ರಾಮದ ಸುಧಾಕರ್ ಎಂಬ ವ್ಯಕ್ತಿ ರಸ್ತೆ ದಾಟುವಾಗ ಸಂಭವಿಸಿರುವ ಅಪಘಾತದಲ್ಲಿ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು, ರಾಷ್ಟ್ರೀಯ ಹೆದ್ದಾರಿಯಲ್ಲಿ ಶವವಿಟ್ಟು ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿ 207ರಲ್ಲಿ, ಮೇ.6ರಂದು ರಾತ್ರಿ 8 ಗಂಟೆಯಲ್ಲಿ ರಸ್ತೆ ದಾಟುವ ವೇಳೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದುಕೊಂಡು ಹೋಗಿದ್ದು, ಸುಧಾಕರ್ ತೀವ್ರವಾಗಿ ಗಾಯಗೊಂಡಿದ್ದಾರೆ. ಕೂಡಲೇ ಸ್ಥಳೀಯರು ಅವರನ್ನು ದೇವನಹಳ್ಳಿಯ ಆಕಾಶ್ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗಮಧ್ಯದಲ್ಲಿ ಸಾವನ್ನಪ್ಪಿದ್ದಾರೆ.

ಪಾದಾಚಾರಿಗಳು ರಾಷ್ಟ್ರೀಯ ಹೆದ್ದಾರಿ 207 ಮುದುಗುರ್ಕಿ ಗೇಟ್ ನಲ್ಲಿ ರಸ್ತೆ ಸುರಕ್ಷತೆ ಇಲ್ಲದ ಕಾರಣ ಹಲವಾರು ದಿನಗಳಿಂದ ಸ್ಕೈ ವಾಕ್ ಅಥವಾ ಸುರಂಗ ಪಾದಾಚಾರಿ ಮಾರ್ಗವನ್ನು ಮಾಡಿಕೊಡುವಂತೆ ಆಗ್ರಹಿಸಿದರು. ಗ್ರಾಮ ಪಂಚಾಯಿತಿಯಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಗೆ ಪತ್ರ ವ್ಯವಹಾರ ಮಾಡಿದರೂ ಯಾವುದೇ ಸ್ಪಂದನೆ ಸಿಗಲಿಲ್ಲ. ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ಶವವನ್ನು ರಸ್ತೆಯಲ್ಲೇ ಇಟ್ಟು ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ದೇವನಹಳ್ಳಿ ತಹಶೀಲ್ದಾರ್ ಅನಿಲ್ ಕುಮಾರ್, ಬೆಂಗಳೂರು ಗ್ರಾಮಾಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಿನಾರಾಯಣ, ಹಾಗೂ ಸ್ಥಳೀಯ ಪೊಲೀಸ್ ಅಧಿಕಾರಿಗಳು ಪ್ರತಿಭಟನಾಕಾರರ ಮನವೊಲಿಸಲು ತೀವ್ರ ಕಸರತ್ತು ನಡೆಸಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಭಾಗೀಯ ಅಧಿಕಾರಿ ಜಯಕುಮಾರ್ ಬಂದು 2 ತಿಂಗಳ ಹಿಂದೆ ದೇವನಹಳ್ಳಿ ಟೌನ್ ನಿಂದ ಆಂಧ್ರಪ್ರದೇಶದ ಗಡಿಯವರೆಗೆ ರಾಷ್ಟ್ರೀಯ ಹೆದ್ದಾರಿ 207 ರಲ್ಲಿ ಪ್ಲೈ ಓವರ್ ನಿರ್ಮಾಣ ಮಾಡಿ, ತಡೆರಹಿತ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗುವುದು. ಈ ಬಗ್ಗೆ ದೆಹಲಿಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪತ್ರ ವ್ಯವಹಾರಗಳನ್ನು ಮಾಡಲಾಗಿದೆ ಎಂದರು.

ಸ್ಥಳೀಯ ಪೊಲೀಸರನ್ನು ಈ ಸ್ಥಳದಲ್ಲಿ ನಿಯೋಜನೆಗೊಳಿಸಿ, ಅಪಘಾತಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಲಾಗುವುದು ಎಂದು ಆಶ್ವಾಸನೆ ನೀಡಿದ ನಂತರ ಸ್ಥಳೀಯರು ಪ್ರತಿಭಟನೆ ಕೈ ಬಿಟ್ಟರು.

## ಪ್ಲಾಸ್ಟಿಕ್ ವಿರುದ್ಧ ಪುರಸಭೆಯ ಕಠಿಣ ಕಾರ್ಯಾಚರಣೆ



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಬೇಲೂರು,ಮೇ8–** ಪಟ್ಟಣದ ಪುರಸಭೆ ವ್ಯಾಪ್ತಿಯ ಅಂಗಡಿಗಳಿಗೆ ದಿಡೀರ್ ದಾಳಿ ನಡೆಸಿದ ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಹಾಗು ಶಸ್ಯರು ಸಿಬ್ಬಂದಿ ವರ್ಗದವರು ಪ್ಲಾಸ್ಟಿಕ್ ಚಶಪಡಿಸಿಕೊಂಡಿದಲ್ಲದೆ ಮಾಲೀಕರಿಗೆ ದಂಡ ವಿಧಿಸಲಾಯಿತು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಮಾತನಾಡಿ, ಬೇಲೂರು ಪಟ್ಟಣವನ್ನು ಸ್ವಚ್ಛ ಹಾಗೂ ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿಸುವ ನಿಟ್ಟಿನಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ನಗರದಲ್ಲಿ ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ಹೂವಿನ ಅಂಗಡಿಗಳು, ಹೋಟೆಲ್‌ಗಳು ಹಾಗೂ ಕೆಲವು ಸರ್ಕಾರಿ ಅಂಗಡಿಗಳಲ್ಲೂ ಪ್ಲಾಸ್ಟಿಕ್ ಬಳಕೆ ಹೆಚ್ಚುತ್ತಿರುವುದು ಗಮನಕ್ಕೆ ಬಂದಿದೆ. ಇದನ್ನು ತಡೆಗಟ್ಟಲು ದಂಡ ವಿಧಿಸುವ ಕಾರ್ಯ ಆರಂಭವಾಗಿದ್ದು, ಕೇವಲ ಒಂದು ದಿನದಲ್ಲೇ ಸುಮಾರು 5,000 ದಷ್ಟು ದಂಡ ವಸೂಲಿ ಮಾಡಲಾಗಿದೆ. ಈ ಕ್ರಮ ಮುಂದುವರಿಯಲಿದೆ ಎಂದು ಹೇಳಿದರು.

ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಮಾತ್ರವಲ್ಲ, ಹಸು-ಕರುಗಳಂತಹ ಪ್ರಾಣಿಗಳಿಗೂ ಅಪಾಯ ಉಂಟಾಗುತ್ತಿದೆ. ಆದ್ದರಿಂದ ಸಾರ್ವಜನಿಕರು ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ ಬಟ್ಟೆ ಚೀಲಗಳನ್ನು ಬಳಸಬೇಕು ಎಂದು ಮನವಿ ಮಾಡಿದರು.

ಮೂಡಿಗೆರೆ ರಸ್ತೆ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಎಲ್ಲೆಂದರಲ್ಲಿ ಬಿಸಾಡಬಾರದು. ಪಟ್ಟಣವನ್ನು ಸ್ವಚ್ಛ ಹಾಗೂ ಸುಂದರವಾಗಿಡಲು ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ, ಸಾರ್ವಜನಿಕರ ಸಹಕಾರ ಇಲ್ಲದೆ ಇದು ಸಾಧ್ಯವಿಲ್ಲ ಎಂದು ಹೇಳಿದರು.

ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ, ಸ್ವಚ್ಛತೆಗೆ ಕೈಜೋಡಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ನಂತರ ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ ಮಾತನಾಡಿ, ಪಟ್ಟಣದ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಮಾರಾಟಗಾರರು ಹಾಗೂ ಸಾರ್ವಜನಿಕರಿಗೆ ಈ ಹಿಂದೆಯೇ ಪ್ಲಾಸ್ಟಿಕ್ ಬಳಕೆ ನಿಷೇಧದ ಕುರಿತು ತಿಳಿವಳಿಕೆ ನೀಡಲಾಗಿತ್ತು. ಆದರೂ ಪ್ಲಾಸ್ಟಿಕ್ ಬಳಕೆ ಮುಂದುವರಿದ ಹಿನ್ನೆಲೆಯಲ್ಲಿ ಇಂದು ಅಂಗಡಿಗಳ ಮೇಲೆ ದಿಢೀರ್ ದಾಳಿ ನಡೆಸಲಾಗಿದೆ ಎಂದು ತಿಳಿಸಿದರು.

ದಾಳಿಯ ವೇಳೆ ಸುಮಾರು 30 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದ್ದು, ಪ್ಲಾಸ್ಟಿಕ್ ಮಾರಾಟ ಮಾಡುತ್ತಿದ್ದವರಿಗೆ ಒಟ್ಟು ಸುಮಾರು 5,000 ದಂಡ ವಿಧಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷೆ ಹಾಗು ಹಾಲಿ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್, ಮೀನಾಕ್ಷಿ ವೆಂಕಟೇಶ್, ಜಮಿಲಾ ತೌಫಿಕ್, ಆರೋಗ್ಯ ಅಧಿಕಾರಿ ಲೊಹಿತ್ ಸೇರಿ ಇತರರು ಹಾಜರಿದ್ದರು.

## ಪರಿಸರ ಸಂರಕ್ಷಣೆ ಕೇವಲ ಘೋಷಣೆಯಾಗದಿರಲಿ: ಡಾ. ಎಂ.ಆರ್.ರವಿ



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಕೋಲಾರ,ಮೇ8–** ಸಸಿಕೊಡುವ, ಸಸಿ ನೆಡುವ ಕಾರ್ಯಕ್ರಮ ಒಂದು ಫ್ಯಾಶನ್ ಆಗಿಹೋಗಿದೆ. ಅವುಗಳಲ್ಲಿ ಎಷ್ಟು ಸಸಿಗಳು ಹೆಮ್ಮರಗಳಾಗಿವೆ ಎಂಬ ವೈಜ್ಞಾನಿಕ ಅವಲೋಕನ ಮಾಡುತ್ತಿಲ್ಲ. ಪ್ರತಿಯೊಬ್ಬ ಮನುಷ್ಯ ನಿಸರ್ಗದೊಂದಿಗೆ ಹೇಗೆ ಅನುಸಂಧಾನ ಮಾಡಬೇಕು ಎಂಬುದನ್ನು ಸಣ್ಣ ಮಕ್ಕಳಿಂದಲೇ ಕಲಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಅಭಿಪ್ರಾಯಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ಮನ್ವಂತರ ಪ್ರಕಾಶನ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ವಿಜಯ ಉನ್ನತಿ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ 'ಜಾಗತಿಕ ತಾಪಮಾನ' ಕುರಿತ ಸಂವಾದ ಹಾಗೂ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಪರಿಸರ ರಕ್ಷಣೆ ಎನ್ನುವುದು ಕೇವಲ ತೋರಿಕೆಯ ಫ್ಯಾಷನ್ ಆಗಬಾರದು. ನಾವು ಹಾಕುವ ಪ್ರತಿಯೊಂದು ಸಸಿಯೂ ಮರವಾಗಿ ಬೆಳೆಯುವವರೆಗೂ ಅದರ ಜವಾಬ್ದಾರಿ ನಮ್ಮದಾಗಿರಬೇಕು," ನಾವು ನಮ್ಮ ಮಕ್ಕಳನ್ನು ವಿದ್ಯಾವಂತರಾಗಿ ಮಾಡುತ್ತಿದ್ದೇವೆ ಆದರೆ, ಅವರನ್ನು ಬುದ್ಧಿವಂತರಾಗಿ ಮಾಡಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಜಾಗತಿಕ ತಾಪಮಾನ ಏರಿಕೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಇಲಾಖೆಗಳು ಒಂದು ಸಮಗ್ರ ವಿಧಾನವನ್ನು ಅನುಸರಿಸಬೇಕು ಆಗ ಮಾತ್ರ ಇದನ್ನು ಹಿಮ್ಮೆಟ್ಟಿಸಲು ಸಾಧ್ಯ ಎಂದು ಹೇಳಿದರು.

ಜಿಲ್ಲೆಯ ತಾಪಮಾನ ಏರಿಕೆಯ ಕುರಿತು ಆತಂಕ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ಕಳೆದ ಐದು ವರ್ಷಗಳಲ್ಲಿ ಕೋಲಾರದ ಉಷ್ಣಾಂಶವು 30ಡಿಗ್ರಿ ಸೆ.ನಿಂದ ಸುಮಾರು 40ಡಿಗ್ರಿ ಸೆ.ವರೆಗೆ ಏರಿಕೆಯಾಗಿದೆ ಎಂದು ಅಂಕಿಅಂಶಗಳ ಸಮೇತ ವಿವರಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸುವರ್ಣ ಗಂಗೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ. ರವಿ ಮಾತನಾಡಿ, "ಜಾಗತಿಕ ತಾಪಮಾನ ಎನ್ನುವುದು ಕೇವಲ ಸರ್ಕಾರದ ಸಮಸ್ಯೆಯಲ್ಲ, ಅದು ಮನುಕುಲದ ಅಸ್ತಿತ್ವದ ಪ್ರಶ್ನೆಯಾಗಿದೆ," ಎಂದು ಅಭಿಪ್ರಾಯಪಟ್ಟರು. ಪ್ರಾಸ್ತಾವಿಕವಾಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್. ಗಣೇಶ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಶೇ. 90ಕ್ಕೂ ಹೆಚ್ಚು ಅಂಕ ಗಳಿಸಿದ ವಿಶೇಷ ಚೇತನ ವಿದ್ಯಾರ್ಥಿ ಸಿ.ಸಿ. ಚರಣ ರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪಾ.ಶ್ರೀ.ಅನಂತರಾಮ್, ಎಸ್. ಮಂಜುನಾಥ್, ಎಂ. ಮುರಳಿ, ಮಾಮಿ ಪ್ರಕಾಶ್, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ವಿ.ಮುನಿರಾಜು, ಜಿಲ್ಲಾ ಅಧ್ಯಕ್ಷ ಎಸ್ ಕೆ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಎ ಜಿ ಸುರೇಶ್ ಕುಮಾರ್, ಖಜಾಂಚಿ ರಾಜೇಂದ್ರ ಸಿಂಹ, ಉಪಾಧ್ಯಕ್ಷ ಎಸ್ ರವಿಕುಮಾರ್, ಕಾರ್ಯದರ್ಶಿ ಶಮ್ಗರ್, ಉಪನ್ಯಾಸಕ ಹರೀಶ್, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ ಸುರೇಶ್, ಗಮನ ಶಾಂತಮ್ಮ, ಶ್ರೀಮತಿ ಸ್ಫೂರ್ತಿ, ಮಹಿಳಾ ಸಂಚಾಲಕಿ ಮಂಜುಳಾ ಸಿ ವಿ ನಾಗರಾಜ್, ತಿರುಮಲೇಶ್, ಎನ್ ಸತೀಶ್ ಗೌಡ, ಮಂಜುಳಾ ಕೊಂಡರಾಜನಳ್ಳಿ, ರೇಷ್ಮೆ ಇಲಾಖೆ ಡಿಡಿ ಆಂಜನೇಯ ರೆಡ್ಡಿ, ಮನ್ವಂತರ ಮೀಡಿಯಾ ಟೀಂ ಆಸಿಫ್ ಪಾಷ ಇತರರು ಇದ್ದರು.

## ತ್ಯಾರನಹಳ್ಳಿಯಲ್ಲಿ ನೂತನ ಬಿರೇಶ್ವರ ಸ್ವಾಮಿ ವಿಗ್ರಹ ಪುನರ್ ಪ್ರತಿಷ್ಠಾಪನೆ

**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಕೋಲಾರ,ಮೇ8–** ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ತ್ಯಾರನಹಳ್ಳಿಯಲ್ಲಿ ನೂತನ ಶ್ರೀ ಬಿರೇಶ್ವರ ಸ್ವಾಮಿಯ ವಿಗ್ರಹದ ಪುನರ್ ಪ್ರಾಣ ಪ್ರತಿಷ್ಠಾನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ನೂತನ ಬಿರೇಶ್ವರ ಸ್ವಾಮಿ ವಿಗ್ರಹದ ಪುನರ್ ಪ್ರತಿಷ್ಠಾಪನೆಯನ್ನ ಊಸರಳ್ಳಿ ಮಠದ ರೇವಣಾರಾಧ್ಯ ಸ್ವಾಮೀಜಿ ಸಾನಿಧ್ಯದೊಂದಿಗೆ ನೆರವೇರಿಸಲಾಯಿತು. ಶ್ರೀ ಸಿದ್ದೇಶ್ವರ, ಶ್ರೀ ಬೀರೇಶ್ವರ, ವೀರ ಮುದ್ದಮ್ಮ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ಕಾಲ ನಡೆದ ಹೋಮ ಹವನ ಪೂಜಾ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯ ಹಾಲು ಮತಸ್ಥರು, ಕುರುಬ ಸಮುದಾಯದವರು ಭಾಗವಹಿಸಿದ್ದರು.

ಇದೇ ಸಂಧರ್ಭದಲ್ಲಿ ಶ್ರೀ ಪಾರ್ವತಾಂಭ, ಮಹಾ ಗಣಪತಿ, ಬಸವೇಶ್ವರ ಸ್ವಾಮಿಗಳ ನೂತನ ವಿಗ್ರಹ ಪ್ರತಿಷ್ಠಾಪನೆ ಸಹ ನೆರವೇರಿಸಲಾಯಿತು.

ವೇದ, ಘೋಷ ಮಂತ್ರಗಳೊಂದಿಗೆ ಭಕ್ತಿ ಪೂರಕವಾಗಿ ಹಾಗೂ ಅದ್ದೂರಿಯಾಗಿ 3 ದಿನಗಳ ಕಾಲ ನಡೆದ ನೂತನ ವಿಗ್ರಹಗಳ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಊಸರಳ್ಳಿ ಮಠದ ರೇವಣಾರಾಧ್ಯ ಸ್ವಾಮೀಜಿಗಳ ನೇತೃತ್ವದಲ್ಲಿ ವೇದ, ಘೋಷ, ಮಂತ್ರಗಳ ಮೂಲಕ ಆಗಮಿಕರು ಹೋಮ ಹವನ ಮಾಡಿಸಿದರು.

ಕಾರ್ಯಕ್ರಮದಲ್ಲಿ ಟ್ರಸ್ಟ್ ನ ಅಧ್ಯಕ್ಷರು, ಸದಸ್ಯರು ಸೇರಿ ಅನೇಕ ಭಕ್ತರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು.



## ವಕ್ಕಲೇರಿಯಲ್ಲಿ ಟಾಟಾ ಕಂಪನಿಯಿಂದ ಹೆರಿಗೆ ವಾರ್ಡ್ ನಿರ್ಮಾಣ



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಕೋಲಾರ,ಮೇ8–** ತಾಲೂಕಿನ ವಕ್ಕಲೇರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಟಾಟಾ ಕಂಪನಿಯ ಸಿಎಸ್‌ಆರ್ ಯೋಜನೆಯಡಿಯಲ್ಲಿ ಸುಮಾರು 35 ಲಕ್ಷದಲ್ಲಿ ಮಾದರಿ ಹೆರಿಗೆ ವಾರ್ಡ್ ನಿರ್ಮಾಣಕ್ಕೆ ಶಾಸಕ ಕೊತ್ತೂರು ಮಂಜುನಾಥ್ ಮಾರ್ಗದರ್ಶನದಲ್ಲಿ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಗೂ ವಕ್ಕಲೇರಿ ಗ್ರಾಪಂ ಮಾಜಿ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ ನೇತೃತ್ವದಲ್ಲಿ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ವಕ್ಕಲೇರಿ ಲೋಕೇಶ್, ಬೊಟ್ಟು ರಾಜಪ್ಪ, ಮನೋಹರ್ ಗೌಡ, ಪೀಸ್ ಮಂಜು, ನಾಗೇಂದ್ರ, ಓಬಣ್ಣ ಇತರರು ಇದ್ದರು.

## ಅರ್ಜಿ ಆಹ್ವಾನ

**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ರಾಮನಗರ, ಮೇ8–** 2026-27ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಉನ್ನತೀಕರಿಸಿದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ವಸತಿ ಕಾಲೇಜು ಮತ್ತು ಅಲ್ಪಸಂಖ್ಯಾತರ ಮಹಿಳಾ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಅತಿಥಿ ಉಪನ್ಯಾಸಕರುಗಳ ಹುದ್ದೆಗಳಾದ ಕನ್ನಡ ಭಾಷಾ ಉಪನ್ಯಾಸಕರು, ಉರ್ದು ಭಾಷಾ ಉಪನ್ಯಾಸಕರು, ಆಂಗ್ಲ ಭಾಷಾ ಉಪನ್ಯಾಸಕರು, ಉರ್ದು ಭಾಷಾ ಉಪನ್ಯಾಸಕ, ಹಿಂದಿ ಭಾಷಾ ಉಪನ್ಯಾಸಕರು, ವ್ಯವಹಾರ ಅಧ್ಯಯನ ಉಪನ್ಯಾಸಕರು, ಲೆಕ್ಕ ಶಾಸ್ತ್ರ ಉಪನ್ಯಾಸಕರು, ಅರ್ಥ ಶಾಸ್ತ್ರ ಉಪನ್ಯಾಸಕರು, ಗಣಕಯಂತ್ರ ಉಪನ್ಯಾಸಕರು, ಭೌತ ಶಾಸ್ತ್ರ ಉಪನ್ಯಾಸಕರು, ರಸಾಯನ ಶಾಸ್ತ್ರ ಉಪನ್ಯಾಸಕರು, ಜೀವ ಶಾಸ್ತ್ರ ಉಪನ್ಯಾಸಕರು, ಗಣಿತ ಶಾಸ್ತ್ರ ಉಪನ್ಯಾಸಕರು, ಇತಿಹಾಸ ಉಪನ್ಯಾಸಕರ, ರಾಜ್ಯ ಶಾಸ್ತ್ರ ಉಪನ್ಯಾಸಕರು, ಸಮಾಜ ಶಾಸ್ತ್ರ ಉಪನ್ಯಾಸಕರು ವಿವಿಧ ವಿಷಯಗಳ ಉಪನ್ಯಾಸಕರುಗಳ ಹುದ್ದೆಗೆ ಅತಿಥಿ ಉಪನ್ಯಾಸಕರ ಗೌರವಧನದ ಅಧಾರದ ಮೇಲೆ ಅರ್ಜಿ ಅಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಠಡಿ ಸಂಖ್ಯೆ :308 ಕಂದಾಯಭವನ ರಾಮನಗರ ಇಲ್ಲಿ ಕಚೇರಿಯ ವೇಳೆಯಲ್ಲಿ ಖುದ್ದು ಸಂಪರ್ಕಿಸಬಹುದು ಅಥವಾ ದೂರವಾಣಿ ಸಂ.080-27271104 ಅಥವಾ ಮಾಹಿತಿ ಕೇಂದ್ರದ ಸಿಬ್ಬಂದಿಗಳ ದೂರವಾಣಿ ಸಂ.9880297132, 7795757850, 8050412066 ಮತ್ತು 8197514161 ಸಂಪರ್ಕಿಸಬಹುದಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

## ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸುವ ಕೆಲಸವಾಗಲಿ: ಡಾ. ಸಿ.ಎನ್. ಮಂಜುನಾಥ್



**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ರಾಮನಗರ, ಮೇ8–** ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸುವುದರಿಂದ ಅಂತರ್ಜಲ ಹೆಚ್ಚಾಗಿ ಬೋರ್‌ವೆಲ್‌ಗಳಿಗೆ ನೀರು ಲಭಿಸಲಿದೆ, ಆ ಮೂಲಕ ಕುಡಿಯುವ ನೀರಿನ ಸಮಸ್ಯೆ ನೀಗಿಸಬಹುದಾಗಿದೆ, ಆದ್ದರಿಂದ ಜಿಲ್ಲೆಯ ಕೆರೆಗಳಿಗೆ ತುಂಬಿಸುವ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬೇಕು ಎಂದು ಬೆಂಗಳೂರು ಗ್ರಾಮಾಂತರ ಸದಸ್ಯ ಮಂಜುನಾಥ್ ಸಂಬಂಧಿಸಿದ ಅಧಿಕಾರಿಗಳಿಗೆ ಸಲಹೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಲ್ ಜೀವನ್ ಮಿಷನ್ (ಜೆಜೆಎಂ) ಯೋಜನೆಯಡಿ ಜಿಲ್ಲೆಯಲ್ಲಿ ಕೈಗೊಂಡಿರುವ ಕಾಮಗಾರಿಗಳು ತ್ವರಿತ ಗತಿಯಲ್ಲಿ ಪೂರ್ಣಗೊಳ್ಳಲು ಸಂಬಂಧಪಟ್ಟ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸದ ಗುತ್ತಿಗೆದಾರರಿಗೆ ಇದುವರೆಗೂ 65 ಲಕ್ಷ ರೂ. ದಂಡ ವಿಧಿಸಲಾಗಿದೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರು ಸಭೆಗೆ ಮಾಹಿತಿ ನೀಡಿದಾಗ ಜೆಜೆಎಂ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಸದರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ನರೇಗಾ ಯೋಜನೆಯಡಿ ಕೆಲವೆಡೆ ಇಂಗುಗುಂಡಿಗಳನ್ನು ತೋಡಲಾಗುತ್ತದೆ, ನಂತರದ. ಕೆಲವೇ ದಿನಗಳಲ್ಲಿ ಅವುಗಳನ್ನು ಮುಚ್ಚಲಾಗುತ್ತಿದೆ. ಭೂಮಿಗೆ ನೀರು ಬಸಿದು ಅಂತರ್ಜಲ ಹೆಚ್ಚಳವಾಗುವಲ್ಲಿ ಇಂಗುಗುಂಡಿಗಳು ಹಾಗೂ ಚೆಕ್ ಡ್ಯಾಂಗಳ ಪಾತ್ರ ಮಹತ್ವದ್ದಾಗಿದೆ, ಇಂತಹ ಕಾರ್ಯಗಳಲ್ಲಿ ಸರ್ಕಾರದ ಜವಾಬ್ದಾರಿಯೊಂದಿಗೆ ಸಾರ್ವಜನಿಕರ ಜವಾಬ್ದಾರಿಯೂ ಮುಖ್ಯ. ನೀರನ್ನು ಭೂಮಿಗೆ ಇಂಗಿಸುವ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕವಾದ ಅರಿವು ಮೂಡಿಸುವಂತೆ ಅಧಿಕಾರಿಗಳಿಗೆ ಅವರು ತಿಳಿಸಿದರು. ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಡಿವೈಎಸ್ಪಿ ರಾಜೇಂದ್ರ ವೇದಿಕೆಯಲ್ಲಿದ್ದರು.

ದಿಶಾ ಸಮಿತಿಯ ನಾಮನಿರ್ದೇಶನ ಸದಸ್ಯ ನರಸಿಂಹಮೂರ್ತಿ, ರಾಜೇಶ್, ಶಿವಣ್ಣ, ರೇಖಾ, ಶೋಭಾ, ಸಿದ್ಧರಾಮ ಹಾಗೂ ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.

## ಸೀಳು ತುಟಿ, ಅಂಗುಳ ಸಮಸ್ಯೆಗೆ ಸಮಗ್ರ ಚಿಕಿತ್ಸೆಯ ಅಗತ್ಯ: ದಿನೇಶ್ ಗುಂಡೂರಾವ್




**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಮೈಸೂರು,ಮೇ9–** ಸೀಳು ತುಟಿ ಮತ್ತು ಸೀಳು ಅಂಗುಳ ಸಮಸ್ಯೆ ಹೊಂದಿರುವ ಮಕ್ಕಳಿಗೆ ಸೂಕ್ತ ಸಮಯದಲ್ಲಿ ಸಮಗ್ರವಾದ ಚಿಕಿತ್ಸೆ ನೀಡುವುದು ಅತ್ಯಗತ್ಯವಾಗಿದ್ದು ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ದಿನೇಶ್ ಗುಂಡೂರಾವ್ ಹೇಳಿದರು.

ಭಾರತೀಯ ಕ್ಲೆಫ್ಟ್ ತುಟಿ ಅಂಗುಳ ಮತ್ತು ಕ್ರೇನಿಯೊಫೇಶಿಯಲ್ ಅನೋಮಲಿಗಳ ಸಂಘದವತಿಯಿಂದ ಇಂಡೋಕ್ಲೆಫ್ಟಾಕನ್ 2026ರ 24 ನೇ ವಾರ್ಷಿಕ ಸಮ್ಮೇಳನವನ್ನು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನೈಮಿಷಂ ಕ್ಯಾಂಪಸ್ ನ ನಾಲೆಡ್ಜ್ ಪಾರ್ಕ್ ನಲ್ಲಿ ಉದ್ಘಾಟಿಸಿ ಮಾತನಾಡಿದರು. ಅರಿವಿನ ಕೊರತೆ ಮತ್ತು ಸಮಯೋಚಿತ ಚಿಕಿತ್ಸೆ ನೀಡದೆ ಇರುವುದರಿಂದ ಸೀಳು ತುಟಿ ಮತ್ತು ಸೀಳು ಅಂಗುಳ ಸಮಸ್ಯೆ ಜನನದಿಂದಲೇ ಬರುವಂತದ್ದಾಗಿದೆ. ಆದರೆ ಸರಿಯಾದ ಸಮಯದಲ್ಲಿ ತಜ್ಞರ ಸಲಹೆ ಮತ್ತು ಸಮಸ್ಯೆಯ ಗುರುತಿಸುವಿಕೆ ಆಗದಿದ್ದರೆ ಮುಂದಿನ ದಿನಗಳಲ್ಲಿ ಮಕ್ಕಳು ಹೆಚ್ಚಿನ ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಹೇಳಿದರು. ಗ್ರಾಮೀಣ ಭಾಗದಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ವಾಸಿಸುವ ಜನರಲ್ಲಿ ಈ ಬಗ್ಗೆ ಅರಿವು ಮೂಡಿಸಬೇಕಿದೆ. ನಮ್ಮ ಆರೋಗ್ಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿದಾಗ ಇಂತಹ ಸಮಸ್ಯೆ ಇರುವ ಮಕ್ಕಳನ್ನು ಗುರುತಿಸಿ, ಅವರಿಗೆ ಎಲ್ಲಿ ಮತ್ತು ಹೇಗೆ ಚಿಕಿತ್ಸೆ ಪಡೆಯಬೇಕೆಂದು ಮಾರ್ಗದರ್ಶನ ನೀಡಬೇಕು. ಸಮಗ್ರ ಚಿಕಿತ್ಸಾ ವಿಧಾನ ಈ ಸಮಸ್ಯೆಯ ಚಿಕಿತ್ಸೆಯು ಕೇವಲ ಒಂದು ಬಾರಿಯ ಶಸ್ತ್ರ ಚಿಕಿತ್ಸೆಯಿಂದ ಸಾಧ್ಯವಿಲ್ಲ ಇದಕ್ಕೆ ಹಲವು ತಜ್ಞರ ಅವಶ್ಯಕತೆ ಇರುತ್ತದೆ. ನುರಿತ ಶಸ್ತ್ರಚಿಕಿತ್ಸಕರು, ಆರ್ಥೋಡಾಂಟಿಸ್ಟ್‌ಗಳು, ಸರ್ಜನ್ಗಳು, ವಾಕ್ ಚಿಕಿತ್ಸಕರು ಇವರೆಲ್ಲರೂ ಒಗ್ಗೂಡಿ ಚಿಕಿತ್ಸೆ ನೀಡಿದಾಗ ಮಾತ್ರ ಮಗುವಿನ ಬೆಳವಣಿಗೆ ಸರಿಯಾಗಿ ಆಗಲು ಸಾಧ್ಯ. ಸರ್ಕಾರದ ಸಹಕಾರ ಮತ್ತು ಕಳೆದ 20 ವರ್ಷಗಳಿಂದ ಸ್ಮೈಲ್ ಟ್ರೈನ್ ಸಂಸ್ಥೆಯು ಮಾಡುತ್ತಿರುವ ಸೇವೆಯನ್ನು ಶ್ಲಾಘಿಸಿದರು. ಈವರೆಗೆ ಸಂಸ್ಥೆಯು 7 ಲಕ್ಷಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಪೂರೈಸಿರುವುದು ಸಾಮಾನ್ಯ ಸಾಧನೆಯಲ್ಲ ಎಂದು ಹೇಳಿದರು.

ಐಎಸ್‌ಸಿಎಲ್ ಪಿಸಿಎನ ಕಾರ್ಯದರ್ಶಿ ಡಾ.ಪ್ರೀತಮ್ ಶೆಟ್ಟಿ ಮಾತನಾಡಿ, ತಮ್ಮ ಸಂಘವು ಒಂದು ಉತ್ತಮ ತಂಡವಾಗಿದ್ದು, ಇದರಲ್ಲಿ ಶಸ್ತ್ರಚಿಕಿತ್ಸಕರು, ಸ್ಪೀಚ್ ಪ್ಯಾಥೋಲಜಿಸ್ಟ್‌ಗಳು, ಆರ್ಥೋಡಾಂಟಿಸ್ಟ್‌ಗಳು, ಪೀಡಿಯಾಟ್ರಿಶಿಯನ್ಸ್, ಅರಿವಳಿಕೆ ತಜ್ಞರು ಮತ್ತು ನ್ಯೂರೋ ಸರ್ಜನ್ ಗಳನ್ನು ಹೊಂದಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಐಎಸ್‌ಸಿಎಲ್ ಪಿಸಿಎನ ಅಧ್ಯಕ್ಷೆ ಡಾ.ಎಂ.ಪುಷ್ಪಾವತಿ ಮತ್ತಿತರರು ಉಪಸ್ಥಿತರಿದ್ದರು.

# ದಾಸರಹಳ್ಳಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ ಭರತ್ ಸೌಂದರ್ಯ ಆಯ್ಕೆ

**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಪೀಣ್ಯ ದಾಸರಹಳ್ಳಿ,ಮೇ8–** ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಎಸ್ ಮುನಿರಾಜು ಮಾರ್ಗದರ್ಶನದಂತೆ ಮಂಡಲ ಅಧ್ಯಕ್ಷ ಎಸ್ ಸೋಮಶೇಖರ್ ರವರು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ ಬಾಗಲಗುಂಟೆಯ ಹಾವನೂರು ಬಡಾವಣೆಯ ಭರತ್ ಸೌಂದರ್ಯ ನೇಮಕ ಮಾಡಿ ಅದೇಶ ಹೊರಡಿಸಿದ್ದಾರೆ.



ಈ ಸಂಧರ್ಭದಲ್ಲಿ ಮಾತನಾಡಿದ ನೂತನ ಯುವ ಮೋರ್ಚಾ ಅಧ್ಯಕ್ಷ ಭರತ್ ಸೌಂದರ್ಯ ನನಗೆ ಜವಾಬ್ದಾರಿ ನೀಡಿದ ಕ್ಷೇತ್ರದ ಜನಪ್ರಿಯ ಶಾಸಕರಾದ ಎಸ್. ಮುನಿರಾಜಣ್ಣ ಮಂಡಲದ ಅಧ್ಯಕ್ಷ ಸೋಮಶೇಖರ್ ಹಾಗೂ ಪಕ್ಷದ ಎಲ್ಲಾ ಹಿರಿಯ ಮುಖಂಡರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ದಾಸರಹಳ್ಳಿ ಕ್ಷೇತ್ರದಲ್ಲಿ ಪಕ್ಷದ ತತ್ವ, ಸಿದ್ಧಾಂತ ಮತ್ತು ಅಭಿವೃದ್ಧಿಯ ಸಂದೇಶವನ್ನು ಮನೆಮನೆಗೂ ತಲುಪಿಸಿ


ಯುವಕರ ಶಕ್ತಿ ಮತ್ತು ಸಂಘಟನೆಯ ಬಲವನ್ನು ಮತ್ತಷ್ಟು ವೃದ್ಧಿಸುವ ಕಾರ್ಯದಲ್ಲಿ ಸದಾ ತೊಡಗಿಸಿಕೊಂಡಿರುತ್ತೇನೆ ಹಾಗೂ .ಪಕ್ಷ ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕತೆ,ನಿಷ್ಠೆ ಹಾಗೂ ಸಮರ್ಪಣಾಭಾವದಿಂದ ನಿರ್ವಹಿಸುವುದಾಗಿ ತಿಳಿಸಿದರು.

# ಎಲ್ಲರಲ್ಲೂ ಅಪ್ರತಿಮ ಸಾಧನೆಗೈಯುವ ಶಕ್ತಿ ಅಡಗಿದೆ: ಶ್ರಿಯೋಗಿ ಸ್ವಾಮೀಜಿ

**ಸಂಜೆ ಎಕ್ಸ್‌ಪ್ರೆಸ್ ಸುದ್ದಿ. ಬೆಂಗಳೂರು ಮೇ 8;** ಎಲ್ಲರಲ್ಲೂ ಅತ್ಯುತ್ತಮವಾದ ಶಕ್ತಿಯಿದೆ. ಅಪ್ರತಿಮ ಸಾಧನೆಯನ್ನು ಮಾಡುವ ಹುಮ್ಮಸ್ಸು ಅಡಗಿದೆ. ತಮ್ಮನ್ನೂ ತಾವೇ ಅವಲೋಕಿಸಿ ಮುನ್ನಡೆದರೆ ಧರ್ಮದೊಂದಿಗೆ ಅತ್ಯುನ್ನತ ಉನ್ನತಿಯನ್ನು ಸಾಧಿಸಬಹುದು ಎಂದು ಶ್ರಿಯೋಗಿ ಜಗದ್ಗುರುಗಳು ಹೇಳಿದರು.

ಗುರುವಾರ ಇಂದಿರಾನಗರದ ಅಟ್ಟ ಗಲಾಟ ನಡೆದ ದ ವಾಂಡರರ್ ಹು ಒನ್ಸ್ ದ ವರ್ಲ್ಡ್ ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಮನುಷ್ಯನೂ ತನಗೆ ತಾನು ಸತ್ಯವಂತನಾಗಿ ನಡೆದುಕೊಳ್ಳಬೇಕು ಆಗ ಮಾತ್ರ ಇಡೀ ಜಗತ್ತೆ ಬದಲಾವಣೆಯನ್ನು ಕಾಣುತ್ತದೆ. ಮನುಷ್ಯ ಪ್ರಕಾಶ ಹೊಂದಲು ಯಾವುದೇ ಸರಳ ಮಾರ್ಗವಿಲ್ಲ ಅಪ್ರತಿಮ ಅಧ್ಯಾತ್ಮ ಸಾಧನೆಯೊಂದೇ ಮಾರ್ಗವಾಗಿದೆ ಇದನ್ನೇ ನನ್ನ ಪುಸ್ತಕದಲ್ಲಿ ತಿಳಿಹೇಳಿದ್ದೇನೆ ಇದನ್ನು ಇಡೀ ಮನುಕುಲಕ್ಕೆ ಸಮರ್ಪಿಸುತ್ತೇನೆ ಎಂದು ತಿಳಿಸಿದರು.

ಜಾತಿ, ಧರ್ಮ ರೂಪಿಸಿದ್ದು ನಾವು ಮನುಷ್ಯರಾಗಿದ್ದೇವೆ. ಬ್ರಹ್ಮ ಜ್ಞಾನವನ್ನು




ಪಡೆದವನು ಮಾತ್ರ ಉನ್ನತ ವ್ಯಕ್ತಿಯಾಗಿದ್ದಾನೆ ಹೊರತು ಹುಟ್ಟಿನಿಂದಲ್ಲ. ಈ ಪುಸ್ತಕದಲ್ಲಿ ಅದನ್ನೇ ಹೇಳಲು ಹೊರಟಿದ್ದೇನೆ. ಇದು ಅಜ್ಞಾನದ ಯುಗ ಎಂದೇ ಹೇಳಲು ಬಯಸುತ್ತೇನೆ ಯಾಕೆಂದರೆ ಯಾರೂ ತಮ್ಮ ಒಳಗಿರುವ ಅಂತರ್ ಜ್ಯೋತಿಯನ್ನು ಬೆಳಗಿಸುವ ತಯಾರಿಯಲ್ಲ. ಈಗಿನ ಸಮಸ್ಯೆಗಳ ಮೂಲ ಕಾರಣ ಇವೇ ಎರಡು ವಿಚಾರವಾಗಿದೆ ಎಂದು ವ್ಯಾಖ್ಯಾನಿಸಿದರು.ಇಸ್ರೋ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಮಾತನಾಡಿ, ಮನುಷ್ಯ ಹೈಲಿ ಎವಾಲವ್ಡ್ ರೊಬೋಟಿಕ್ ಸಿಸ್ಟಮ್ ಇದ್ದ ಹಾಗೆ. ರೊಬೋಟ್ ಗಳಿಗೆ ತೀರಾ ಹೆಚ್ಚು ಒವರ್ ಲೋಡ್ ಆಗದಂತೆ ಕೆಲ ಬದಲಾವಣೆಗಳನ್ನು ಬೇಕಂತಲೇ ಮಾಡಲಾಗುತ್ತದೆ. ಹೀಗೆ ಮನುಷ್ಯನಿಗೂ ವಿಜ್ಞಾನಕ್ಕೂ ಸಾಕಷ್ಟು ಸ್ವಾಮ್ಯತೆ ಇದ್ದು, ಅನುವಂಶೀಯವಾಗಿ ಮತ್ತು ವಾತಾವರಣಕ್ಕೆ ಅನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸದಂತೆ ಮನುಷ್ಯನ ಮೆದಳು ತಡೆಯುತ್ತದೆ ಆದರೆ ಸಿದ್ಧಪುರುಷರು ಇದನ್ನು ಮೀರಿ ಕಾರ್ಯನಿರ್ವಹಿಸುತ್ತಾರೆ.

ಅತೀಂದ್ರಿಯ ಜ್ಞಾನವನ್ನು ಹೊರತರಲು ನಿಷ್ಟೆ, ಸಾಧನೆ ಮುಖ್ಯವಾಗಿದ್ದು, ಇದನ್ನೇ ದ ವಾಂಡರರ್ ಹು ಒನ್ಸ್ ದ ವರ್ಲ್ಡ್ ನಲ್ಲಿ ಗುರುಗಳಾದ ಶ್ರೀಯೋಗಿಗಳು ಜಗತ್ತಿಗೆ ತಿಳಿಸಲು ಹೊರಟಿದ್ದಾರೆ ಎಂದು ವ್ಯಾಖ್ಯಾನಿಸಿದರು.

ಕವಿಗಳು, ಲೇಖಕ ಮಂಡಲಗಿರಿ ಪ್ರಸನ್ನ ಮಾತನಾಡಿ, ಶ್ರಿಯೋಗಿಗಳು ತಮ್ಮ ಅಪಾರವಾದ ಪ್ರೇರಕ ಶಕ್ತಿ, ಅನುಭವ ಮತ್ತು ಜ್ಞಾನದಿಂದ ಮನುಕುಲಕ್ಕೆ ಮಾರ್ಗದರ್ಶನ ನೀಡುವ ಕೆಲಸವನ್ನು ಈ ಪುಸ್ತಕದ ಮೂಲಕ ನೀಡಿದ್ದಾರೆ. ಸ್ವಾಮೀಜಿಗಳು ಹೀಗೆಯೇ ಮನುಕುಲಕ್ಕೆ ಮಾರ್ಗ ತೋರಿಸುವ ಕಾರ್ಯವನ್ನು ಮುಂದವೆಸುವಂತಾಗಲಿ ಎಂದು ಆಶಿಸಿದರು.

ಸಮಗ್ರ ಆರೋಗ್ಯ ತಜ್ಞ ಡಾ ಪದ್ಮನಾಭನ್, ಡಿ.ವೈ.ಎಸ್.ಪಿ ಸುಧೀಂದ್ರ ಹೆಗಡೆ, ಮಾಜಿ ಸಚಿವ ಎಸ್.ರಾಮದಾಸ್, ಫಿಸಿಷಿಯನ್ ಸಂಜಯ್ ನೀರಲಗಿ, ಪೀಡಿಯಾಟ್ರಿಕ್ ತಜ್ಞೆ ಡಾ. ಸವಿತಾ ಎಸ್ ನೀರಲಗಿ, ಚಿತ್ರ ನಟ ರಾಣಾ ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ತಮ್ಮ ನಿವಾಸದ ಬಳಿ ಗುರುವಾರ ತಮ್ಮ ಪುತ್ರ ದಿವಂಗತ ರಾಕೇಶ್ ಸಿದ್ದರಾಮಯ್ಯ ಸ್ಮರಣಾರ್ಥ ಸಮತಾ ಟ್ರಸ್ಟ್ ವತಿಯಿಂದ ಆರೋಗ್ಯ ಇಲಾಖೆಗೆ ನೀಡಲಾದ ಅಂಬುಲೆನ್ಸ್ ಗಳಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

# ತಲಸೀಮಿಯಾ ರೋಗದಿಂದ ಬಳಲುತಿದ್ದ ಬಾಲಕಿಗೆ ಕಾಂಡಕೋಶ ದಾನದಿಂದ ಸಿಕ್ಕ ಮರುಜನ್ಮ

**ಸಂಜೆ ಎಕ್ಸ್‌ಪ್ರೆಸ್ ಸುದ್ದಿ. ಬೆಂಗಳೂರು ಮೇ 8 :** ತಲಸೀಮಿಯಾ ರೋಗದಿಂದ ಬಳಲುತ್ತಿದ್ದ 12 ವರ್ಷದ ಬಾಲಕಿಗೆ ಕೋಲಾರದ 27 ವರ್ಷದ ದಿಲೀಪ್ ಕೆ ತನ್ನ ಕಾಂಡಕೋಶ ದಾನ ಮಾಡಿ ಆಕೆಗೆ ಮರುಜನ್ಮ ನೀಡಿದ್ದಾರೆ.

ಭಾರತದಲ್ಲಿ ಪ್ರತಿ ವರ್ಷ 10 ಸಾವಿರಕ್ಕೂ ಅಧಿಕ ಮಕ್ಕಳು ತಲಸೀಮಿಯಾದೊಂದಿಗೆ ಜನಿಸುತ್ತಾರೆ. ಈ ಪ್ರಕರಣದಲ್ಲಿ ತಲಸೀಮಿಯಾ ರೋಗಿಯಾದ ಬಾಲಕಿಗೆ ಆರಂಭಿಕ ಹಂತದಲ್ಲೇ ಬೀಟಾ ತಲಸೀಮಿಯಾ ಗಂಭೀರತೆ ಇರುವುದು ಪತ್ತೆಯಾಗಿತ್ತು.

ಆಗ ಕಾಂಡಕೋಶ ಕಸಿ ಅವಳಿಗಿದ್ದ ಏಕೈಕ ಗುಣಪಡಿಸುವ ಆಯ್ಕೆಯಾಗಿತ್ತು. ಆಕೆಯ ಕುಟುಂಬದ ಹೊರಗಿನ ಹೊಂದಾಣಿಕೆಯ ದಾನಿ ಸಿಗುವುದು ಖಚಿತವಿರಲಿಲ್ಲ. ಆದರೆ, ದಿಲೀಪ್ ಅವರ ಹೊಂದಾಣಿಕ ಸಿಕ್ಕಾಗ, ರೋಗಿಯ ಕುಟುಂಬ ಹಾಗೂ ವೈದ್ಯರ ತಂಡ ನೆಮ್ಮದಿಯ ನಿಟ್ಟುಸಿರು ಬಿಟ್ಟಿತು.

ಗುರುವಾರ ಈ ಕುರಿತು ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ



ಡಿ.ಕೆ.ಎಂ.ಎಸ್ ಫೌಂಡೇಶನ್ ಇಂಡಿಯಾ ಕಾರ್ಯನಿರ್ವಾಹಕ ಅಧ್ಯಕ್ಷ ಪ್ಯಾಟ್ರಿಕ್ ಪಾಲ್, ರಕ್ತದ ಕ್ಯಾನ್ಸರ್ ಮತ್ತು ಇತರೆ ರಕ್ತದ ಕಾಯಿಲೆಗಳಂತಹ ಮಾರಾಣಾಂತಿಕ ಕಾಯಿಲೆಗಳಿಗೆ ದುಬಾರಿ ವೆಚ್ಚದ ಕಾರಣದಿಂದಾಗಿ ಅತ್ಯಾಧುನಿಕ ಚಿಕಿತ್ಸೆ ಪಡೆಯಲು ಸಾಕಷ್ಟು ಸವಾಲುಗಳನ್ನು ಎದುರಾಗುತ್ತವೆ. ಚಿಕಿತ್ಸೆಯ ಆಯ್ಕೆಗಳ ಬಗ್ಗೆ ಮಾರ್ಗದರ್ಶನ ಮತ್ತು ಆರ್ಥಿಕ ಬೆಂಬಲದ ಸಂಭಾವ್ಯ ಮೂಲಗಳು ಭಾರತದಲ್ಲಿ ಚಿಕಿತ್ಸೆಯ ಲಭ್ಯತೆಯ ಮೇಲೆ ಪ್ರಭಾವ ಬೀರುವ ಅತ್ಯಂತ ನಿರ್ಣಾಯಕ ಅಂಶಗಳಾಗಿವೆ ಎಂದರು.

ಡಿ.ಕೆ.ಎಂ.ಎಸ್ ಸಮೂಹದ ಜಾಗತಿಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಎಲ್ಕೆ ನುಜಾರ್ ಮಾತನಾಡಿ, ಭಾರತದ ಡಿ.ಕೆ.ಎಂ.ಎಸ್ ಫೌಂಡೇಶನ್ ತಲಸೀಮಿಯಾ ಕಾರ್ಯಕ್ರಮವನ್ನು ಚಿಕಿತ್ಸಾ ವೆಚ್ಚ ಹಾಗೂ ಲಭ್ಯತೆಯ ನಡುವಿನ ಗಂಭೀರ ಅಂತರವನ್ನು ನಿವಾರಿಸಲು ವಿನ್ಯಾಸಗೊಳಿಸಲಾಗಿದೆ. ಆರ್ಥಿಕ ಮುಗ್ಗಟ್ಟು ಅನೇಕ ಬಾರಿ ರೋಗಿಗಳು ಗುಣಪಡಿಸುವ ಚಿಕಿತ್ಸೆಯನ್ನು ಪಡೆಯದಂತೆ ತಡೆಯುತ್ತದೆ. ಬೀಟಾ ತಲಸೀಮಿಯಾದಿಂದ ಬಳಲುತ್ತಿರುವ 12 ವರ್ಷದೊಳಗಿನ ಮಕ್ಕಳಿಗೆ ಉಚಿತ ಎಚ್‌ಎಲ್‌ಎ ಟೈಪಿಂಗ್‌ನಂತಹ ಉಪಕ್ರಮಗಳ ಮೂಲಕ ಕಸಿ ಪ್ರಕ್ರಿಯೆಯ ಹಾದಿಯಲ್ಲಿರುವ ಕುಟುಂಬಗಳ ಹೊರೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದ್ದೇವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಬ್ಲಡ್‌ಕೇರ್ ಹೆಮಟಾಲಜಿ ಕ್ಲಿನಿಕ್ ಮತ್ತು ಡಯಾಗ್ನೋಸ್ಟಿಕ್ ಸೆಂಟರ್‌ನ ಕನ್ಸಲ್ಟೆಂಟ್ ಹೆಮಟಾಕಜಿಸ್ಟ್ ಡಾ. ಸಿದ್ದೇಶ್ ಕಲಾಂತ್ರಿ ಸೇರಿದಂತೆ ಇತರರಿದ್ದರು.

# ಮೇ 10ರಂದು ಭೀಮೋತ್ಸವ ಕಾರ್ಯಕ್ರಮ 40ಕ್ಕೂ ಹೆಚ್ಚು ಭೀಮ ಪಲ್ಲಕ್ಕಿಗಳ ಸಮೇತ ಭೀಮನಮನ



**ಸಂಜೆ ಎಕ್ಸ್‌ಪ್ರೆಸ್, ಆನೇಕಲ್, ಮೇ.8:** ಡಾ.ಬಿ.ಆರ್. ಅಂಬೇಡ್ಕರ್‌ರವರ 135ನೇ ಜನ್ಮದಿನದ ಪ್ರಯುಕ್ತ ಮೇ 10ರಂದು ಭೀಮೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೋರಾಟಗಾರ ಅನಿಲ್ ಕುಮಾರ್ ತಿಳಿಸಿದರು.

ತಾಲ್ಲೂಕಿನ ಅತ್ತಿಬೆಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 10ರಂದು ನಡೆಯುವ ಭೀಮೋತ್ಸವ ಕಾರ್ಯಕ್ರಮದ ಕಾರ್ಯಕ್ರಮದ ಪ್ರಯುಕ್ತ ಅತ್ತಿಬೆಲೆಯ ಫ್ಯಾಮಿಲಿ ಬಿಗ್ ಮಾರ್ಟ್ ಮುಂಭಾಗದಲ್ಲಿರುವ ಮೈದಾನದಿಂದ ಪ್ರಾರಂಭಗೊಳ್ಳಲಿದ್ದು, ತಾಲ್ಲೂಕಿನ ಪ್ರತಿ ಹಳ್ಳಿಗಳಿಂದ ಪಲ್ಲಕ್ಕಿ ಸಮೇತವಾಗಿ ನೂರಾರು ಮಂದಿ ಆಗಮಿಸಲಿದ್ದಾರೆಂದು ತಿಳಿಸಿದರ

ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ವೃತ್ತದಲ್ಲಿ ಸಂವಿಧಾನ ಜಾಗೃತಿಗಾಗಿ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಬೃಹತ್ ಮೆರವಣಿಗೆ ಹಾಗೂ ಜಯಭಾರತಿ ಶಾಲೆಯ ಆವರಣದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಪೌರಕಾರ್ಮಿಕರಿಗೆ ಹಾಗೂ ಹಿರಿಯ ಹೋರಾಟಗಾರರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

> “ ಸಮಾಜದಿಂದ ಗಳಿಸಿದನ್ನು ಸಮಾಜಕ್ಕೆ ಹಿಂದಿರುಗಿಸಬೇಕೆಂಬ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಸ್ನೇಹಿತರು ಹಾಗೂ ವಕೀಲರ ತಂಡವು, ಭೀಮೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ಬಾಬಾ ಸಾಹೇಬರ ಆಶಯಗಳನ್ನು ಜನಸಮುದಾಯಕ್ಕೆ ತಲುಪಿಸಬೇಕೆಂಬ ಸದುದ್ದೇಶವೇ ನಮ್ಮ ಆದ್ಯತೆಯಾಗಿದೆ.
>
> । ಶ್ರೀನಿವಾಸ್ ಸರ್ಜಾ, ವಕೀಲ

ವಕೀಲ ಸಂಘರ್ಷ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯಗಳನ್ನು ಯುವ ಜನತೆಗೆ ತಲುಪಿಸುವ ನಿಟ್ಟಿನಲ್ಲಿ ಭೀಮೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ತಾಲ್ಲೂಕಿನ ಎಲ್ಲ ಸಮುದಾಯದ ಮಂದಿಯು ಭೀಮೋತ್ಸವದಲ್ಲಿ ಭಾಗಿಗಳಾಗಲಿದ್ದಾರೆಂದು ತಿಳಿಸಿದರು. ಈ ವೇಳೆ ವಕೀಲರಾದ ಶ್ರೀನಿವಾಸ್ ಸರ್ಜಾ, ಬಾಬು ಮತ್ತಿತರರಿದ್ದರು.

# ಅಂತರ್ ರಾಜ್ಯ ಮಾದಕ ದ್ರವ್ಯ ಸಾಗಾಟ ಜಾಲ ಪತ್ತೆ 1.25 ಕೋಟಿ ರೂ. ಮೌಲ್ಯದ ಮಾದಕ ದ್ರವ್ಯ ವಶ



**ಸಂಜೆ ಎಕ್ಸ್ ಪ್ರೆಸ್, ಆನೇಕಲ್, ಮೇ.8:** ಛತ್ತೀಸ್ ಗಡದಿಂದ ತಮಿಳುನಾಡಿಗೆ 1.25 ಕೋಟಿ ರೂ. ಮೌಲ್ಯದ ಮಾದಕ ದ್ರವ್ಯ ಸಾಗಿಸುತ್ತಿದ್ದ ಟ್ರಕ್ ನ್ನು ವಶ ಪಡಿಸಿಕೊಂಡು, ಆರೋಪಿಗಳನ್ನು ಬಂಧಿಸುವಲ್ಲಿ ಜಿಗಣಿ ಠಾಣಾ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ಬೆಂಗಳೂರು ಗ್ರಾಮಾಂತರ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಜಿಗಣಿ ಪೊಲೀಸ್ ಠಾಣೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಗಣಿ ಪೊಲೀಸ್ ಠಾಣೆಯ ಪೊಲೀಸ್ ಇನ್ ಸ್ಪೆಕ್ಟರ್ ಮಂಜುನಾಥ್ ನೇತೃತ್ವದ ತಂಡ ಖಚಿತ ಮಾಹಿತಿ ಮೇರೆಗೆ ಎ. 7 ರಂದು ಸಂಜೆ 5ರ ಸುಮಾರಿಗೆ ಕೊಪ್ಪ–ಬೇಗೂರು ರಸ್ತೆ ಬಳಿ ಟಾಟ ಟ್ರಕ್ ವಾಹನವನ್ನು ವಶಪಡಿಸಿಕೊಂಡು, ಪರಿಶೀಲಿಸಿದಾಗ ಮಾದಕ ದ್ರವ್ಯಗಳು ಇರುವುದು ಪತ್ತೆಯಾಗಿದೆ. ಕೂಡಲೇ ಟ್ರಕ್ ನ್ನು ವಶಪಡಿಸಿಕೊಂಡು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸುದ್ದಿಗೋಷ್ಟಿಯಲ್ಲಿ ಅಪರ ಪೊಲೀಸ್ ಅಧೀಕ್ಷಕ ಲಕ್ಷ್ಮಿನಾರಾಯಣ್ ಹಾಗೂ ಜಿಗಣಿ ಠಾಣಾ ಪೊಲೀಸ್ ಇನ್ ಸ್ಪೆಕ್ಟರ್ ಮಂಜುನಾಥ್ ಇದ್ದರು.

> “ ಜಿಗಣಿ ಪೊಲೀಸ್ ಠಾಣೆಯ ಪೊಲೀಸ್ ಇನ್ ಸ್ಪೆಕ್ಟರ್ ಮಂಜುನಾಥ್ ಅವರು, ಅಂತರ್ ರಾಜ್ಯ ಮಾದಕ ವಸ್ತು ಸಾಗಾಣೆಕಾರರನ್ನು ವಶಕ್ಕೆ ಪಡೆದು, ಮುಂದೆ ಸಂಭವಿಸಬಹುದಾದ ದೊಡ್ಡ ಅನಾಹುತವನ್ನು ತಪ್ಪಿಸಿದ್ದಾರೆ. ಅವರಿಗೆ ಸೂಕ್ತ ಬಹುಮಾನ ಹಾಗೂ ಪ್ರಶಂಸಾ ಪತ್ರ ವಿತರಿಸಲಾಗುವುದು.
>
> । ಚಂದ್ರಕಾಂತ್, ಪೊಲೀಸ್ ಅಧೀಕ್ಷಕ

ತನಿಖೆ ಚುರುಕು: ಅಂತರ್ ರಾಜ್ಯ ಮಾದಕ ದ್ರವ್ಯ ಸಾಗಾಣೆ ಜಾಲವನ್ನು ಪತ್ತೆ ಹಚ್ಚಿದ್ದು, ಆರೋಪಿಗಳನ್ನು ಬಂಧಿಸಿದ್ದೇವೆ. ಇದರ ಹಿಂದಿನ ಪ್ರಮುಖ ಆರೋಪಿಗಳನ್ನು ಬಂಧಿಸುವ ಹಿನ್ನೆಲೆಯಲ್ಲಿ ತನಿಖೆ ಚುರುಕುಗೊಳಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

# ಮಹಿಳಾ ಮೀಸಲಾತಿ ಮಸೂದೆ ಸಂಸತ್‌ನಲ್ಲಿ ಪುನರ್ ಮಂಡನೆಗೆ ಆರ್‌ಪಿಐ ಪಕ್ಷದಿಂದ ಪ್ರತಿಭಟನೆ




**ಸಂಜೆ ಎಕ್ಸ್‌ಪ್ರೆಸ್ ಸುದ್ದಿ, ಬೆಂಗಳೂರು ಮೇ 8;** ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಮತ್ತೊಮ್ಮೆ ಮಂಡಿಸುವಂತೆ ಆರ್ ಪಿ ಐ ಪಕ್ಷ ಹಾಗೂ ಸಮತಾ ಸೈನಿಕ ದಳದ ವತಿಯಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನೆಯಲ್ಲಿ ನೂರಾರು ಮಹಿಳೆಯರು ಭಾಗವಹಿಸಿದ್ದರು.

ರಿಪಬ್ಲಿಕನ್ ಪಾರ್ಟಿಯ ಬೆಂಗಳೂರು ಉಸ್ತುವಾರಿ ಚಂದ್ರಶೇಖರ್,ದಲಿತ ಸಂರಕ್ಷಣಾ ಸಮಿತಿ ಲಯನ್ ಬಾಲಕೃಷ್ಣ, ರಿಪಬ್ಲಿಕನ್ ಪಾರ್ಟಿಯ ಮಹಿಳಾ ಘಟಕ ರಾಜ್ಯಾಧ್ಯಕ್ಷೆ ರೂಪಕಲಾ, ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗರತ್ನ ಮತ್ತಿತರರು ಭಾಗವಹಿಸಿದ್ದರು.

ಡಾ.ಚಂದ್ರಶೇಖರ್ ಮಾತನಾಡಿ, ಎನ್ ಡಿಎ ಮೈತ್ರಿ ಪಕ್ಷವಾಗಿ ಆರ್ ಪಿಐ ಎಲ್ಲ ರಾಜಕೀಯ ಪಕ್ಷಗಳನ್ನು ಆಗ್ರಹಿಸುತ್ತದೆ,ಮಹಿಳಾ ಮೀಸಲಾತಿ ಮಸೂದೆ ಪರ ಇಡೀ ದೇಶಾದ್ಯಂತ ನಮ್ಮ ಪಕ್ಷದ ವತಿಯಿಂದ ವಿಶೇಷ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗುವುದು, ಈ ಪೂರಕ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಬೇಕೆಂದು ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳಿಗೆ ಸೂಚಿಸಬೇಕೆಂದು ಒತ್ತಾಯಿಸಿದರು.

# ಇಂಧನ ಇಲಾಖೆಯ ಎಲ್ಲಾ ಎಸ್ಕಾಂಗಳ ಲೈನ್ ಮ್ಯಾನ್‌ಗಳು ಕಡ್ಡಾಯ ಸಮವಸ್ತ್ರ, ಗುರುತಿನ ಚೀಟಿ ಧರಿಸಲು ಆದೇಶ

**ಬೆಂಗಳೂರು; ಮೇ08,** ಇಂಧನ ಇಲಾಖೆ ವ್ಯಾಪ್ತಿಯಲ್ಲಿನ ಎಲ್ಲಾ ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಲ್ ಕಲೆಕ್ಟರ್, ಮೀಟರ್ ರೀಡರ್, ಲೈನ್ ಮ್ಯಾನ್‌ಗಳು ಕರ್ತವ್ಯದ ಸಮಯದಲ್ಲಿ ಕಡ್ಡಾಯವಾಗಿ ಸಮವಸ್ತ್ರ ಮತ್ತು ಸರ್ಕಾರದ ಗುರುತಿನ ಚೀಟಿಯನ್ನು ಧರಿಸುವಂತೆ ಹಾಗೂ ನಕಲಿ ಸಿಬ್ಬಂದಿಗಳ ಬಗ್ಗೆ ಜಾಗೃತಿ ಮೂಡಿಸುವಂತೆ ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಸದಸ್ಯ ಮೋಹನ್ ಕುಮಾರ್ ದಾನಪ್ಪನವರು ಇಂಧನ ಸಚಿವರಿಗೆ ಪತ್ರ ಬರೆದ ನಿಮಿತ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ!

ಇತ್ತಿಚ್ಚಿಗೆ ಹುಬ್ಬಳ್ಳಿಯ ಆನಂದನಗರದಲ್ಲಿ ಅನಾಮಧೇಯ ವ್ಯಕ್ತಿಯೊಬ್ಬ ಸಮವಸ್ತ್ರ ಧರಿಸಿ ಇಂಧನ ಇಲಾಖೆಯ ಬಿಲ್ ಕಲೆಕ್ಟರ್ ಎಂದು ಸಾರ್ವಜನಿಕರ ಮನೆಗಳಿಗೆ ತೆರಳಿ ಹಣ ವಸೂಲಿ ಮಾಡುತ್ತಿದ್ದ ವ್ಯಕ್ತಿಯನ್ನು ಸಾರ್ವಜನಿಕರು ಪತ್ತೆಹಚ್ಚಿ ಪೊಲೀಸ್‌ರ ವಶಕ್ಕೆ ನೀಡಿದ ಘಟನೆಯೊಂದು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವುದು ಪತ್ರಿಕೆಯಲ್ಲಿ ವರದಿಯಾಗಿದ್ದು ರಾಜ್ಯದ ಇಂಧನ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕೆಳಸಿಬ್ಬಂದಿ ಮೀಟರ್ ರೀಡರ್, ಬಿಲ್ ಕಲೆಕ್ಟರ್, ಲೈನ್ ಮ್ಯಾನ್‌ಗಳನ್ನೂ ಕಂಡು ಭಯಭೀತರಾದ ಜನ ಅಧಿಕೃತ ಸಿಬ್ಬಂದಿಗಳನ್ನು ಕಂಡರು ಅನುಮಾನ ಪಡುವಸ್ಥಿತಿ ಎದುರಾಗಿರುವುದರಿಂದ ಇಂಧನ ಇಲಾಖೆ ವ್ಯಾಪ್ತಿಯಲ್ಲಿ ಬರುವ ಬೆಸ್ಕಾಂ,



ಸೆಸ್ಕ್, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂಗಳಲ್ಲಿ ಸೇರಿದಂತೆ ಎಲ್ಲಾ ನಿಗಮ/ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳು ತಮ್ಮ ಕರ್ತವ್ಯದ ಸಮಯದಲ್ಲಿ ಗ್ರಾಹಕರ/ಸಾರ್ವಜನಿಕರ ಮನೆಗೆ ಕಾರ್ಯನಿಮಿತ್ಯ ತೆರಳುವಾಗ ಶುಭ್ರವಾಗಿ ತಲೆ ಕೂದಲು ಮತ್ತು ಗಡ್ಡಗಳನ್ನು ಚೊಕ್ಕವಾಗಿ ಮಾಡಿಸಿಕೊಂಡು ಇಲಾಖೆಯ ಸಮವಸ್ತ್ರಗಳನ್ನು ಹಾಗೂ ಇಲಾಖೆ ನೀಡಿದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸಿಕೊಳ್ಳುವಂತೆ ಹಾಗೂ ನಕಲಿ ಬಿಲ್ ಕಲೆಕ್ಟರ್,ಮೀಟರ್ ರೀಡರ್, ಲೈನ್ ಮ್ಯಾನ್ ಗಳ ಹಾವಳಿಯಿಂದ ಬೇಸತ್ತು ಭಯಬೀತರಾದ ಸಾರ್ವಜನಿಕರಿಗೆ/ಗ್ರಾಹಕರಿಗೆ ಆಂತಕದಿಂದ ಹೊರತರಲು ಆಯಾ ನಿಗಮದ ಪ್ರತಿ ಕಛೇರಿ ವ್ಯಾಪ್ತಿಯಲ್ಲಿನ ಸಾರ್ವಜನಿಕ ಸ್ಥಳಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಎಫ್ ಎಂ, ರೇಡಿಯೋ, ಸ್ಥಳೀಯ ಹಾಗೂ ಇತರೆ ಟಿವಿ ಮಾಧ್ಯಮಗಳಲ್ಲಿ, ಪತ್ರಿಕಾ ಮಾಧ್ಯಮಗಳಲ್ಲಿ ಪ್ರಕಟಣೆ ಹೊರಡಿಸಿ ಪರಿಣಾಮಕಾರಿಯಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವಂತೆ ಎಲ್ಲಾ ನಿಗಮ/ಸಂಸ್ಥೆಗಳಿಗೆ ಸೂಕ್ತ ಆದೇಶ ನೀಡುವಂತೆ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಸದಸ್ಯ ಮೋಹನ್ ಕುಮಾರ್ ದಾನಪ್ಪನವರು ಇಂಧನ ಸಚಿವರಿಗೆ ಪತ್ರ ಬರೆದಿದ್ದರನ್ವಯ ಸರ್ಕಾರದಿಂದ ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಎಸ್ಕಾಂಗಳಿಗೆ ಆದೇಶ ಹೊರಡಿಸಲಾಗಿದೆ!

# ರಾಷ್ಟ್ರೀಯ ಬಸವ ತತ್ವ ಪರಿಷತ್ತಿನ 99ನೇ ಶರಣ ಸಂಗಮ ಕಾರ್ಯಕ್ರಮ

**ಸಂಜೆ ಎಕ್ಸ್‌ಪ್ರೆಸ್ ಸುದ್ದಿ. ಬೆಂಗಳೂರು ಮೇ 8;** ರಾಷ್ಟ್ರೀಯ ಬಸವ ಪರಿಷತ್ತು ವತಿಯಿಂದ ಗೋವಿಂದರಾಜ ನಗರದ ಡಾ.ಚಿದಾನ0ದಮೂರ್ತಿ ಸಭಾಂಗಣದಲ್ಲಿ 99ನೇ ಶರಣ ಸಂಗಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಗುಬ್ಬಿಯ ಬಸವ ಭೃಂಗೇಶ್ವರ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಯುವಕರು ಬಸವಣ್ಣನವರ ತತ್ವಗಳನ್ನು ಅಳವಡಿಸಿಕೊಳ್ಳುವ ಕುರಿತು ಉಪನ್ಯಾಸ ನೀಡಿದರು.

ದ್ವಿತೀಯ ಪಿಯುಸಿ ಮತ್ತು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇ 90% ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ “ಬಸವ ರಕ್ಷೆ “ ಅನ್ನುವ ವಿಶೇಷ ಸನ್ಮಾನ ಮಾಡಿ ಗೌರವಿಸಲಾಯಿತು

ಈ ಸಂದರ್ಭದಲ್ಲಿ ಜನಪದ ವಿದ್ವಾಂಸ ಡಾ ಅಪ್ಪಗೆರೆ ತಿಮ್ಮರಾಜ್,ಪರಿಷತ್ತಿನ ಅಧ್ಯಕ್ಷ ಅರುಣಕುಮಾರ ಡಿ ಟಿ,ಸಾಹಿತಿ ವಿಶ್ವನಾಥ್, ಶಾಂತಾನಂದ, ಕರಿಬಸವಯ್ಯ ರುದ್ರೇಶ್ ಭಾಸ್ಕರ್ ಇತರರು ಉಪಸ್ಥಿತರಿದ್ದರು,




# ವಿಕಲಚೇತರ ಉದ್ಯೋಗ ಅವಕಾಶಕ್ಕೆ ವೇದಿಕೆ ಕಲ್ಪಿಸುವ ಅಪ್ಲಿಕೇಶನ್ ಅನಾವರಣ

**ಬೆಂಗಳೂರು, ಮೇ 8:** ವಿಕಲಚೇತನರಿಗೆ ಉದ್ಯೋಗ ಅವಕಾಶ ಮತ್ತು ಕೌಶಲ್ಯಾಭಿವೃದ್ಧಿಗೆ ಆದ್ಯತೆ ನೀಡಲು ಅವಕಾಶ ಒದಗಿಸುವ "ಆದಿದ್ವಾರ ಎಂಬ ಅಪ್ಲಿಕೇಶನ್ ಅನ್ನು ಅಬಿವೃದ್ಧಿಪಡಿಸಿ ಬಿಡುಗಡೆ ಮಾಡಲಾಗಿದೆ. ಇದರಿಂದ ಅಂಗವಿಕಲರಿಗೆ ನೆರವು ಸಿಗಲಿದೆ ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಮತ್ತು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ್ ಹೇಳಿದರು.

ಅಸಿಸ್ಟೆಕ್ ಫೌಂಡೇಶನ್ (ಎಟಿಎಫ್)




ಸಹಯೋಗದೊಂದಿಗೆ ವಿಕಾಸಸೌಧದಲ್ಲಿ ನಡೆದ ಸಮಾರಂಭದಲ್ಲಿ ಅವರು ಅಪ್ಲಿಕೇಷನ್ ಬಿಡುಗಡೆ ಮಾಡಿ ಮಾತನಾಡಿದರು.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಅಂಗವಿಕಲರಿಗೆ (ಪಿಡಬ್ಲ್ಯುಡಿಗಳು) ವಿಶೇಷ ಉದ್ಯೋಗ ಮೇಳವನ್ನು ಆಗಸ್ಟ್ 2026 ರಲ್ಲಿ ನಡೆಸಲಾಗುವುದು. ವಿಕಲಚೇತನರು ಯಾರಿಗೂ ಕಡಿಮೆ ಇಲ್ಲ. ಅವರಿಗೆ ವಿಶೇಷ ಪ್ರತಿಭೆ ಇರುತ್ತದೆ. ಕಾರ್ಪೋರೇಟ್ ಸಂಸ್ಥೆಗಳು ನೇಮಕಾತಿಯ ಸಮಯದಲ್ಲಿ ಅವರಿಗೆ ಸಮಾನ ಅವಕಾಶ ನೀಡಬೇಕು ಎಂದು ಡಾ. ಪಾಟೀಲ್ ಹೇಳಿದರು.

ಉದ್ಯೋಗ ಮೇಳದ ಲೋಗೋ ಅನಾವರಣ: ಇದೇ ಸಂದರ್ಭದಲ್ಲಿ ಸಚಿವ ಡಾ. ಪಾಟೀಲ್ ಅವರು ಮುಂಬರುವ ಉದ್ಯೋಗ ಮೇಳದ ಅಧಿಕೃತ ಲೋಗೋವನ್ನು ಸಹ ಅನಾವರಣಗೊಳಿಸಿದರು.

ಉದ್ಯೋಗ ಮೇಳದಲ್ಲಿ ತರಬೇತಿ ಪಾಲುದಾರರು ಮತ್ತು ಸಹಾಯಕ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳೊಂದಿಗೆ ಸಂಪರ್ಕಿಸಲು ದೊಡ್ಡ ವೇದಿಕೆ ಸಿಗಲಿದೆ.

ಎಂಎಲ್‌ಸಿ ಸುಧಾಮ್ ದಾಸ್ ಮತ್ತು ಎಟಿಎಫ್ ಸಿಇಒ ಪ್ರತೀಕ್ ಮಾಧವ್ ಸೇರಿದಂತೆ ಹಲವು ಗಣ್ಯರು, ಅಧಿಕಾರಿಗಳು ಹಾಜರಿದ್ದರು.

Published, owned and Printed by CHANDRASHEKAR G, Published at : # 36, 2nd floor, Sir MV Nagar, Ramamurthynagar, Bangalore 560016.
Printed at Dashapramathi Mudranalaya No.45, 4th Cross, Srigandhadakaval, Bangalore-79 EDITOR: CHANDRASHEKAR G